ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 6 ಗುರುವಾರ 2022

₹4

ಸಂಪುಟ: 43 | ಸಂಚಿಕೆ: 170 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528. ಜಾಹೀರಾತು: 2496522, 2496523
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com ಜಾಹೀರಾತು: ad@mysurumithra.com





ಎಐಸಿಸಿ ಅಧ್ಯಕ್ಷೆ ಶ್ರೀಮತಿ ಸೋನಿಯಾ ಗಾಂಧಿ ಹಾಗೂ ಶ್ರೀ ರಾಹುಲ್ ಗಾಂಧಿ ಅವರು ಇಂದು ಬೆಳಗ್ಗೆ 8.00 ಗಂಟೆಗೆ ಮಂಡ್ಯ ಜಿಲ್ಲೆ ಪಾಂಡವಪುರದಲ್ಲಿ ಪಾದಯಾತ್ರೆ ನಡೆಸಲಿದ್ದಾರೆ. ನೀವೂ ಬನ್ನಿ..

ಉದ್ದೇಶ

- ಸರ್ವ ಜನಾಂಗದ ಶಾಂತಿಯ ತೋಟ ಮರು ಸ್ಥಾಪನೆ
- ವೆಚ್ಚ ಆಕಾಶಕ್ಕೆ, ಆದಾಯ ಪಾತಾಳಕ್ಕೆ ಖಂಡಿಸಿ
- ನಿರುದ್ಯೋಗ ನಿವಾರಣೆ, ಯುವಕರ ಭವಿಷ್ಯ ರಕ್ಷಣೆ
- ಕಡು ಭ್ರಷ್ಟಾಚಾರದ ವಿರುದ್ಧ
- ರೈತರು–ಕಾರ್ಮಿಕರ ಬದುಕು ಹಸನಾಗಲು

ಐತಿಹಾಸಿಕ ಮೇಕೆದಾಟು ಪಾದಯಾತ್ರೆ ಮತ್ತು ಫ್ರೀಡಂ ಮಾರ್ಚ್ ಅಮೋಘ ಯಶಸ್ಸಿನ ಬಳಿಕ ಮತ್ತೊಂದು ಇತಿಹಾಸಕ್ಕೆ ಕರ್ನಾಟಕ ಸಜ್ಜಾಗಿದೆ







ಯುವ ದಸರಾ ಕಾರ್ಯಕ್ರಮ ಸ್ಥಳದಲ್ಲಿ ಬೈಕ್ ಕದ್ದ ಖದೀಮರ ಬಂಧನ

ಕ್ರೈಂ ಬಾಕ್ಸ್

ಮೈಸೂರು, ಅ.5–ಯುವ ದಸರಾ ನಡೆಯುತ್ತಿದ್ದ ಮಹಾರಾಜ ಕಾಲೇಜು ಮೈದಾನದಲ್ಲಿ ಬೈಕ್ ಕಳವು ಮಾಡಿದ್ದ ಇಬ್ಬರು ಖದೀಮರನ್ನು ಬಂಧಿಸಿರುವ ಸರಸ್ವತಿಪುರಂ ಠಾಣಾ ಪೊಲೀಸರು, ಹೋಂಡಾ ಸ್ಪ್ಲೆಂಡರ್ ಬೈಕ್ ಅನ್ನು ವಶಪಡಿಸಿಕೊಂಡಿದ್ದಾರೆ.

ಅ.3ರಂದು ಬೆಳಗ್ಗೆ ಸರಸ್ವತಿಪುರಂ ಕಾನ್ಸ್‌ಟೇಬಲ್‌ಗಳಾದ ರಾಘವೇಂದ್ರ ಮತ್ತು ಹರೀಶ್ ಕುಮಾರ್ ಅವರು ಗಸ್ತಿನಲ್ಲಿದ್ದಾಗ ಕುಕ್ಕರಹಳ್ಳಿ ಕೆರೆ ಬಳಿಯ ಸರ್ಕಾರಿ ಮುದ್ರಣಾಲಯದ ಸಮೀಪ ಮೈಸೂರಿನ ರಾಮಕೃಷ್ಣನಗರದ ಶರತ್ ಅಲಿಯಾಸ್ ಯೋಗೇಶ್ ಅಲಿಯಾಸ್ ಯತೀಶ್(25) ಮತ್ತು ಜಯನಗರದ ರವಿ(25) ಅವರುಗಳು ಸ್ಪ್ಲೆಂಡರ್ ಬೈಕ್ ಅನ್ನು (ಕೆಎ 45 ಇಎ 7518) ತಳ್ಳಿಕೊಂಡು ಬರುತ್ತಿದ್ದರು. ಇವರಲ್ಲಿ ಶರತ್ ಎಂಬಾತ ಹಲವಾರು ಕಳವು ಪ್ರಕರಣಗಳಲ್ಲಿ ಭಾಗಿಯಾಗಿರುವುದು ಕಾನ್ಸ್‌ಟೇಬಲ್‌ಗಳಿಗೆ ಗೊತ್ತಿದ್ದರಿಂದ ಅವರನ್ನು ಹಿಡಿದು ವಿಚಾರಣೆಗೊಳಪಡಿಸಿದ್ದಾರೆ. ಈ ವೇಳೆ ಬಂಧಿತರು ಯುವ ದಸರಾ ನಡೆಯುತ್ತಿದ್ದ ಮಹಾರಾಜ ಕಾಲೇಜು ಮೈದಾನದಿಂದ ಈ ಬೈಕ್ ಅನ್ನು ಕಳವು ಮಾಡಿದ್ದಾಗಿಯೂ ಪೆಟ್ರೋಲ್ ಖಾಲಿ ಆಗಿದ್ದರಿಂದ ತಳ್ಳಿಕೊಂಡು ಹೋಗುತ್ತಿರುವುದಾಗಿಯೂ ತಿಳಿಸಿದ ಹಿನ್ನೆಲೆಯಲ್ಲಿ ಅವರಿಬ್ಬರನ್ನೂ ಬಂಧಿಸಿ, ಬೈಕ್ ವಶಪಡಿಸಿಕೊಂಡಿದ್ದಾರೆ.

ದಸರಾ ಡ್ಯೂಟಿಗೆ ಬಂದ ಕಾನ್‌ಸ್ಟೇಬಲ್ ಬ್ಯಾಗ್ ಕಳವು



ಮೈಸೂರು, ಅ.5–ದಸರಾ ಬಂದೋಬಸ್ತ್‌ಗಾಗಿ ಕಾರವಾರ ಜಿಲ್ಲೆಯಿಂದ ಮೈಸೂರಿಗೆ ಬಂದಿದ್ದ ಪೊಲೀಸ್ ಕಾನ್ಸ್‌ಟೇಬಲ್‌ವೊಬ್ಬರ ಬ್ಯಾಗ್ ಅನ್ನು ಕಳವು ಮಾಡಲಾಗಿದೆ. ಮೈಸೂರು ನಗರ ಬಸ್ ನಿಲ್ದಾಣದಲ್ಲಿ ಘಟನೆ ನಡೆದಿದೆ. ಕಾರವಾರ ಜಿಲ್ಲೆ ದಾಂಡೇಲಿ ಗ್ರಾಮೀಣ ಪೊಲೀಸ್ ಠಾಣೆಯ ಕಾನ್ಸ್‌ಟೇಬಲ್ ಸಿ.ಕೆ.ಮಲ್ಲಿಕಾರ್ಜುನ್(26) ಬ್ಯಾಗ್ ಕಳೆದುಕೊಂಡವರಾಗಿದ್ದು, ದಸರಾ ಬಂದೋಬಸ್ತ್ ಕರ್ತವ್ಯಕ್ಕಾಗಿ ಮೈಸೂರಿಗೆ ಬಂದಿದ್ದ ಅವರು, ಅ.3ರಂದು ರಾತ್ರಿ 10.15ರ ಸುಮಾರಿನಲ್ಲಿ ಬನ್ನಿಮಂಟಪಕ್ಕೆ ತೆರಳಲು ನಗರ ಬಸ್ ನಿಲ್ದಾಣದ ಫ್ಲಾಟ್‌ಫಾರಂ–3ನಲ್ಲಿ ನಿಂತಿದ್ದಾಗ 1500 ರೂ. ನಗದು, ಮೊಬೈಲ್ ಚಾರ್ಜರ್, ಠಾಣೆಯಲ್ಲಿ ನೀಡಿದ್ದ ಬಸ್ ವಾರಂಟ್‌ಗಳು, ಪೊಲೀಸ್ ಸಮವಸ್ತ್ರ ಒಳಗೊಂಡಂತೆ ಇದ್ದ ಬ್ಯಾಗನ್ನೇ ಖದೀಮರು ಕಳವು ಮಾಡಿದ್ದಾರೆ. ಈ ಸಂಬಂಧ ದೇವರಾಜ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕ್ರೆಡಿಟ್ ಕಾರ್ಡ್ ಆಕ್ಟಿವೇಷನ್ ನೆಪದಲ್ಲಿ 1.98 ಲಕ್ಷ ವಂಚನೆ

ಮೈಸೂರು,ಅ.5–ಕ್ರೆಡಿಟ್ ಕಾರ್ಡ್ ಆಕ್ಟಿವೇಷನ್ ಮಾಡುವುದಾಗಿ ತಿಳಿಸಿ ಉದ್ಯಮಿಯೊಬ್ಬರಿಗೆ 1.98 ಲಕ್ಷ ರೂ. ಆನ್‌ಲೈನ್ ಮೂಲಕ ವಂಚಿಸಿರುವ ಬಗ್ಗೆ ವರದಿಯಾಗಿದೆ. ಮೈಸೂರಿನ ನಜರ್‌ಬಾದ್‌ನಲ್ಲಿರುವ ಹೋಟೆಲ್ ಸಾಯ್ ವಿಹಾರ್ ಇನ್ ಅಂಡ್ ಸೂಟ್ಸ್‌ನ ಕೆ.ಜಿ.ಶ್ರೇಯಮ್ಸ್(32) ಹಣ ಕಳೆದುಕೊಂಡವರಾಗಿದ್ದು, ಇವರ ತಂದೆಯವರ ಹೆಸರಿನಲ್ಲಿ ಬ್ಯಾಂಕ್ ಆಫ್ ಬರೋಡಾ ಕ್ರೆಡಿಟ್ ಕಾರ್ಡ್ ಸ್ಪೀಡ್ ಪೋಸ್ಟ್ ಮೂಲಕ ತಲುಪಿದೆ. ನಂತರ 9583321692 ಸಂಖ್ಯೆಯಿಂದ ಕರೆ ಮಾಡಿದ ವ್ಯಕ್ತಿ ಬ್ಯಾಂಕ್ ಸಿಬ್ಬಂದಿ ಎಂದು ಪರಿಚಯ ಮಾಡಿಕೊಂಡು ಕ್ರೆಡಿಟ್ ಕಾರ್ಡ್ ಆಕ್ಟಿವೇಷನ್ ಮಾಡಲು ಮೊಬೈಲ್‌ಗೆ ಬಂದ ಓಟಿಪಿ ನಂಬರ್ ತಿಳಿಸುವಂತೆ ಕೇಳಿದ್ದಾನೆ. ಓಟಿಪಿ ಹೇಳಿದಾಕ್ಷಣ ಕ್ರೆಡಿಟ್ ಕಾರ್ಡ್‌ನಿಂದ 1,98,146 ರೂ. ಕಡಿತವಾಗಿದೆ. ಈ ಕುರಿತು ಮೈಸೂರು ನಗರ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಫಾರಿ ವೇಳೆ ಆನೆ ನರಳಾಟ ಕಂಡು ಮರುಗಿದ ರಾಹುಲ್

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಗೆ ಪತ್ರ






ಬೆಂಗಳೂರು, ಅ.5– ಕರ್ನಾಟಕದಲ್ಲಿ ಭಾರತ ಐಕ್ಯತಾ ಯಾತ್ರೆ ಪ್ರಾರಂಭವಾಗಿ 5 ದಿನಗಳು ಕಳೆದಿವೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದ ಭಾರತ ಐಕ್ಯತಾ ಯಾತ್ರೆಗೆ ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ಕೂಡ ಸಾಥ್ ನೀಡಿದ್ದಾರೆ. ಭಾರತ ಐಕ್ಯತಾ ಯಾತ್ರೆಯನ್ನು ಎರಡು ದಿನಗಳ ಕಾಲ ಮೊಟಕುಗೊಳಿಸಿದ್ದು, ರಾಹುಲ್ ಮತ್ತು ಸೋನಿಯಾ ಗಾಂಧಿ ನಿನ್ನೆ ಮತ್ತು ಇಂದು ವಿಶ್ರಾಂತಿಯಲ್ಲಿದ್ದಾರೆ. ನಿನ್ನೆ ವಿಶ್ರಾಂತಿ ವೇಳೆ ರಾಹುಲ್ ಗಾಂಧಿ ಮತ್ತು ಸೋನಿಯಾ ಗಾಂಧಿ ನಾಗರಹೊಳೆ ಹುಲಿ ಸಂರಕ್ಷಿತ ಅಭಯಾರಣ್ಯ ಸಫಾರಿ ಮಾಡಿದ್ದಾರೆ. ಈ ವೇಳೆ ಮರಿ ಆನೆ ಗಾಯವಾಗಿದ್ದನ್ನು ಕಂಡಿದ್ದಾರೆ. ಈ ಸಂಬಂಧ ರಾಹುಲ್ ಗಾಂಧಿ 'ಮರಿ ಆನೆ ಕಾಪಾಡಿ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದಿದ್ದಾರೆ. ನಾಗರಹೊಳೆ ಹುಲಿ ಸಂರಕ್ಷಿತ ಕಾಡಿನಲ್ಲಿ ಆನೆ ನೋಡಿದೆ. ತಾಯಿ ಆನೆ ಜೊತೆಗೆ ಗಾಯಗೊಂಡ ಮರಿ ಆನೆಯ ನರಳಾಟವನ್ನು ಕಂಡೆ. ನಾನು, ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾಗಾಂಧಿ ಭೇಟಿ ವೇಳೆ ಸೊಂಡಿಲು ಹಾಗೂ ಬಾಲದ ಭಾಗದ ಗಾಯದಿಂದ ಮರಿ ಆನೆ ನರಳಾಡುತ್ತಿತ್ತು. ಕಾಡಿನಲ್ಲಿ ನರಳಿತ್ತಿರುವ ಮರಿ ಆನೆಗೆ ತುರ್ತಾಗಿ ಚಿಕಿತ್ಸೆ ಅಗತ್ಯ ಇದೆ. ನೀವು ಸಹಾನುಭೂತಿ ಮನೋಭಾವನೆಯಿಂದ ಮರಿ ಆನೆ ಉಳಿಸಬೇಕು ಸೂಕ್ತ ಚಿಕಿತ್ಸೆ ಸಿಕ್ಕರೆ ಮರಿ ಆನೆ ಉಳಿಯುತ್ತದೆ. ಸಕಾಲದಲ್ಲಿ ನೆರವಾಗಿ ಮರಿ ಆನೆ ಜೀವ ಉಳಿಸುತ್ತೀರೆಂದು ನಂಬಿದ್ದೇನೆ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಈ ಕುರಿತು ರಾಹುಲ್ ಗಾಂಧಿ ಟ್ವಿಟರ್‌ನಲ್ಲಿ ಆನೆ ಫೋಟೋ ಪೋಸ್ಟ್ ಮಾಡಿದ್ದಾರೆ.

ತೆಲಂಗಾಣ ಸಿಎಂ ಕೆಸಿಆರ್ ಹೊಸ ರಾಷ್ಟ್ರೀಯ ಪಕ್ಷ ಬಿಆರ್‌ಎಸ್ ಘೋಷಣೆ

ಬಿಆರ್‌ಎಸ್ ಜೊತೆ ಜೆಡಿಎಸ್ ಮೈತ್ರಿ

ತೆಲಂಗಾಣ, ಅ.5–2024ರ ಲೋಕಸಭೆ ಚುನಾವಣೆ ಮೇಲೆ ಕಣ್ಣಿಟ್ಟಿರುವ ತೆಲಂಗಾಣ ಮುಖ್ಯಮಂತ್ರಿ ಕೆ.ಚಂದ್ರಶೇಖರರಾವ್ ಹೊಸ ಪಕ್ಷ ಲಾಂಚ್ ಮಾಡಿದ್ದಾರೆ. ತಮ್ಮ ಪಕ್ಷಕ್ಕೆ ಭಾರತ ರಾಷ್ಟ್ರ ಸಮಿತಿ (ಬಿಆರ್‌ಎಸ್) ಎಂದು ಹೆಸರಿಟ್ಟಿದ್ದಾರೆ. ತೆಲಂಗಾಣ ಭವನದಲ್ಲಿ ಕೆಸಿಆರ್ ತಮ್ಮ ಹೊಸ ಪಕ್ಷ ಬಿಆರ್‌ಎಸ್ ಘೋಷಣೆ ಮಾಡಿದ್ದಾರೆ. ಇದಕ್ಕೂ ಮುನ್ನ ನಡೆದ ಸಭೆಯಲ್ಲಿ 280ಕ್ಕೂ ಹೆಚ್ಚು ಟಿಆರ್‌ಎಸ್ ಪಕ್ಷದ ಕಾರ್ಯಕಾರಿ ಸದಸ್ಯರು, ಶಾಸಕರು ಮತ್ತು ಸಂಸದರು ಟಿಆರ್‌ಎಸ್ ಅನ್ನು ಭಾರತ ರಾಷ್ಟ್ರ ಸಮಿತಿ (ಬಿಆರ್‌ಎಸ್)ನೊಂದಿಗೆ ವಿಲೀನಗೊಳಿಸುವ ನಿರ್ಣಯವನ್ನು ಅಂಗೀಕರಿಸಿದ್ದಾರೆ. ಈ ವೇಳೆ ಜೆಡಿಎಸ್ ನಾಯಕ ಹೆಚ್.ಡಿ ಕುಮಾರಸ್ವಾಮಿ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು. 2024ರಲ್ಲಿ ಬಿಜೆಪಿ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರನ್ನು ಎದುರಿಸಲು ಉದ್ದೇಶಿಸಿರುವುದಾಗಿ ಕೆಸಿಆರ್ ಸ್ಪಷ್ಟಪಡಿಸಿದ್ದಾರೆ. ತಮ್ಮ ಮಿಷನ್‌ನಲ್ಲಿ ತನ್ನೊಂದಿಗೆ ಸೇರಲು ಹಲವಾರು ವಿರೋಧ ಪಕ್ಷಗಳನ್ನು ಆಹ್ವಾನಿಸಿದ್ದಾರೆ.



ಕಾರ್ಯನಿಮಿತ್ತ ಬುಧವಾರ ಮೈಸೂರಿಗೆ ಆಗಮಿಸಿದ ಎಐಸಿಸಿ ಅಧ್ಯಕ್ಷ ಸ್ಥಾನದ ಅಭ್ಯರ್ಥಿ, ಹಿರಿಯ ಮುತ್ಸದ್ದಿ ಮಲ್ಲಿಕಾರ್ಜುನ ಖರ್ಗೆ ಅವರನ್ನು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್, ನಾಗವಾಲ ಗ್ರಾಪಂ ಅಧ್ಯಕ್ಷ ಹಾಗೂ ಅಖಿಲ ಕರ್ನಾಟಕ ಡಾ.ಮಲ್ಲಿಕಾರ್ಜುನ ಖರ್ಗೆ ಅಭಿಮಾನಿ ಬಳಗದ ರಾಜ್ಯಾಧ್ಯಕ್ಷ ಸಿ.ನರೇಂದ್ರ, ಮೈಸೂರು ವಿಮಾನ ನಿಲ್ದಾಣದಲ್ಲಿ ಸ್ವಾಗತಿಸಿದರು. ಈ ವೇಳೆ ಮಾಜಿ ಸಚಿವ ಎಂ.ನರೇಂದ್ರಸ್ವಾಮಿ, ಮಾಜಿ ಸಂಸದರಾದ ಕಾಗಲವಾಡಿ ಶಿವಣ್ಣ, ಪರಿಷತ್ ಸದಸ್ಯರಾದ ಡಾ.ತಿಮ್ಮಯ್ಯ, ಮಂಜುನಾಥ್ ಭಂಡಾರಿ, ಮಾಜಿ ಶಾಸಕರಾದ ವಾಸು, ಬಾಲರಾಜ್, ಕೆಪಿಸಿಸಿ ರಾಜ್ಯಾಧ್ಯಕ್ಷ (ಎಸ್ಸಿ ವಿಭಾಗ) ಆರ್.ಧರ್ಮಸೇನಾ, ಚಾಮರಾಜನಗರ ಡಿಸಿಸಿ ಅಧ್ಯಕ್ಷ ಮರಿಸ್ವಾಮಿ, ಮಾಜಿ ರೈಲ್ವೇ ಸದಸ್ಯ ಬಂಡಿಪಾಳ್ಯ ವಿಜಯಕುಮಾರ್ ಇನ್ನಿತರರು ಇದ್ದರು.

ಅರಮನೆಯಲ್ಲಿ ಜಗಜಟ್ಟಿಗಳ ಸಾಂಪ್ರದಾಯಿಕ ಕಾದಾಟ

ರಕ್ತ ಚಿಮ್ಮುತ್ತಿದ್ದಂತೆ 30 ಸೆಕೆಂಡ್‌ನಲ್ಲಿ ಕಾಳಗ ಅಂತ್ಯ



ಮೈಸೂರು, ಅ.5(ಎಂಟಿವೈ)– ದಸರಾ ಮಹೋತ್ಸವದ ಹಿನ್ನೆಲೆಯಲ್ಲಿ ಮೈಸೂರು ಅರಮನೆ ಕಲ್ಯಾಣ ಮಂಟಪದ ಮುಂಭಾಗದ ಕರಿಕಲ್ಲು ತೊಟ್ಟಿಯಲ್ಲಿ ಬುಧವಾರ ನಡೆದ ಮೈನವಿರೇಳಿಸುವ ವಜ್ರಮುಷ್ಟಿ ಕಾಳಗದಲ್ಲಿ ಎರಡು ಜೋಡಿ ಜಗಜಟ್ಟಿಗಳು ವೀರಾವೇಶದಿಂದ ಸೆಣಸಾಟ ಆರಂಭಿಸಿ, 30 ಸೆಕೆಂಡ್‌ನಲ್ಲಿ ರಕ್ತ ಚಿಮ್ಮಿಸಿ ಕಾಳಗವನ್ನು ಅಂತ್ಯಗೊಳಿಸಿದರು.

ಅರಮನೆಯ ಕಲ್ಯಾಣ ಮಂಟಪದ ಮುಂಭಾಗದ ಕನ್ನಡಿ ತೊಟ್ಟಿ ಆವರಣದಲ್ಲಿ ಕೃತಕವಾಗಿ ನಿರ್ಮಿಸಿದ ಮಟ್ಟಿ ಅಖಾಡದಲ್ಲಿ ಆನೆ ದಂತದಿಂದ ತಯಾರಿಸಿದ ವಜ್ರನಖ ಆಯುಧವನ್ನು ಕೈಗಳಿಗೆ ಧರಿಸಿದ ಜೆಟ್ಟಿಗಳು ಪರಸ್ಪರ ಕಾದಾಟಕ್ಕಿಳಿದರು. ಎದುರಾಳಿ ಜಟ್ಟಿಯ ತಲೆಯಿಂದ ರಕ್ತ ಚಿಮ್ಮಿದ ಕೂಡಲೇ ಕಾಳಗ ಕೊನೆಗೊಂಡಿತು. ರಕ್ತ ಬಂದವರು ಸೋತರೆ ಅದಕ್ಕೆ ಕಾರಣರಾದವರು ಮೇಲುಗೈ ಸಾಧಿಸಿದರು. ಬಳಿಕ ಸೋತು ಗೆದ್ದವರು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ಕೈಮುಗಿದು ನಿಂತು ಸ್ವಾಮಿ ನಿಷ್ಠೆ ಪ್ರದರ್ಶಿಸಿದರು.

ಕಾಳಗಕ್ಕೆ ಸಿದ್ಧಪಡಿಸಲಾದ ಅಖಾಡದಲ್ಲಿ ನಡೆದ ರೋಚಕ ಕಾಳಗ ನೋಡುಗರಲ್ಲಿ ಮೈನವಿರೇಳಿಸುವಂತಿತ್ತು. ರಾಜವಂಶಸ್ಥರ ಸಮ್ಮುಖದಲ್ಲಿ ನಡೆದ ಕಾಳಗದಲ್ಲಿ ಕಳೆದ ಒಂದು ವಾರದಿಂದ ಅಭ್ಯಾಸ ಮಾಡಿ ಬಂದಿದ್ದ ಜಟ್ಟಿಗಳು ಪರಸ್ಪರ ಕಾದಾಟ ನಡೆಸಿದರು.

ಮುಖಾಮುಖಿ: ಇಂದು ನಡೆದ ಜಟ್ಟಿ ಕಾಳಗದಲ್ಲಿ ಚೆನ್ನಪಟ್ಟಣದ ಮನೋಜ್ ಜೆಟ್ಟಿ ಹಾಗೂ ಚಾಮರಾಜನಗರದ ಅಚ್ಯುತ್ ಜೆಟ್ಟಿ ಮುಖಾಮುಖಿ ಯಾದರೆ, ಮೈಸೂರಿನ ವಿಷ್ಣು ಬಾಲಾಜಿ ಜೆಟ್ಟಿ ಬೆಂಗಳೂರಿನ ತಾರಾನಾಥ ಜೆಟ್ಟಿ ನಡುವೆ ಜಟ್ಟಿ ಕಾಳಗ ನಡೆಯಿತು. ಜಟ್ಟಿಗಳ ರಕ್ತ ಸಮರ್ಪಣೆ ಮುಖಾಂತರ ದಸರಾ ಮಹೋತ್ಸವ ಹಾಗೂ ಧಾರ್ಮಿಕ ವಿಧಿ ವಿಧಾನಗಳಿಗೆ ಸಾಂಪ್ರದಾಯಿಕ ಚಾಲನೆ ದೊರೆಯಿತು.

ಬೆಳಗ್ಗೆ 11 ಗಂಟೆಗೆ ಅಖಾಡದಲ್ಲಿ ಎರಡು ಜೋಡಿಗಳು ರಾಜವಂಶಸ್ಥರ ಅನುಮತಿಗಾಗಿ ಕೈ ಮುಗಿದು ಕಾಯುತ್ತಿದ್ದರು. 11.10ರ ಸುಮಾರಿಗೆ ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅರಮನೆಯ ಕಲ್ಯಾಣ ತೊಟ್ಟಿಯಿಂದ ಕೂಸ್ಮಾಂಡ ಹಾಗೂ ಉತ್ತರ ಪೂಜೆ ನೆರವೇರಿಸಿದ ಬಳಿಕ ಹೊರ ಬಂದು ಕಾಳಗಕ್ಕೆ ಸನ್ನೆ ನೀಡಿದರು. ಆಗ ಜಟ್ಟಿಗಳು ಕಾದಾಟ ಆರಂಭಿಸಿದರು. ಇದಕ್ಕೂ ಮುನ್ನ ಕುಲದೇವತೆ ನಿಂಬುಜಾಂಬೆದೇವಿಗೆ ಪೂಜೆ ಸಲ್ಲಿಸಿ, ಜಟ್ಟಿಗಳು ಅರಮನೆಗೆ ಆಗಮಿಸಿದ್ದರು. ಕೇಶಮುಂಡನ ಮಾಡಿಸಿಕೊಂಡು ಬಂದಿದ್ದ ಅವರು ಮೈ ತುಂಬಾ ಕೆಂಪು ಮಣ್ಣು ಬಳಿದುಕೊಂಡಿದ್ದರು. ಚೆನ್ನಪಟ್ಟಣದ ಮನೋಜ್ ಜೆಟ್ಟಿ ಹಾಗೂ ಚಾಮರಾಜನಗರದ ಅಚ್ಚುತ ಜೆಟ್ಟಿ ನಡುವಿನ ಹಣಾಹಣಿಯಲ್ಲಿ ಅಚ್ಚುತ ಜೆಟ್ಟಿ ಅವರ ತಲೆಯಿಂದ ರಕ್ತ ಚಿಮ್ಮಿತು. ಸಾಂಪ್ರದಾಯಿಕ ನಿಯಮದಂತೆ ಕಾಳಗವನ್ನು ಸ್ಥಗಿತಗೊಳಿಸಲಾಯಿತು. ಬಳಿಕ ಎಲ್ಲಾ ಜಟ್ಟಿಗಳು ರಾಜವಂಶಸ್ಥರಿಗೆ ವಂದಿಸಿದರು. ಜಂಬೂಸವಾರಿಗೆ ಶುಭ ಸೂಚನೆ ಸಿಕ್ಕಿದೆ ಎಂಬ ಸಂದೇಶವನ್ನು ಜಟ್ಟಿಗಳ ಬಳಗ ರಾಜವಂಶಸ್ಥರಿಗೆ ರವಾನಿಸಿತು. ಕಲ್ಯಾಣಿ ತೊಟ್ಟಿಯಿಂದ ಹೊರಬಂದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಜಟ್ಟಿಗಳಿಗೆ ಶುಭಕೋರಿ, ವಿಜಯಯಾತ್ರೆ ಹೊರಟರು. ಅಲ್ಲಿಗೆ ಜಟ್ಟಿಕಾಳಗ ಮುಕ್ತಾಯವಾಯಿತು. ಮೈಸೂರಿನ ಮಾದವಜೆಟ್ಟಿ, ಚಾಮರಾಜನಗರದ ಬಂಗಾರು ಜೆಟ್ಟಿ, ಚೆನ್ನಪಟ್ಟಣದ ಪುರುಷೋತ್ತಮ್, ಬಾಲಾಜಿ ಜೆಟ್ಟಿ, ಬೆಂಗಳೂರಿನ ಕೃಷ್ಣಜೆಟ್ಟಿ ಸೇರಿದಂತೆ ಐದು ಮಂದಿ ಉಸ್ತಾದ್‌ಗಳಾಗಿ ಕಾರ್ಯನಿರ್ವಹಿಸಿದರು.

ಜಂಬೂಸವಾರಿಗೆ ಭಾರೀ ಬಂದೋಬಸ್ತ್



ಮೈಸೂರು,ಅ.5–ಬುಧವಾರ ನಡೆದ ಐತಿಹಾಸಿಕ ವಿಜಯದಶಮಿ ಜಂಬೂಸವಾರಿ ಮೆರವಣಿಗೆ ನೋಡಲು ಲಕ್ಷ ಲಕ್ಷ ಜನ ಜಮಾಯಿಸಿದ್ದರಿಂದ ಅಲ್ಲಲ್ಲಿ ಸಣ್ಣಪುಟ್ಟ ಗೊಂದಲಗಳನ್ನು ಹೊರತುಪಡಿಸಿದಲ್ಲಿ ಯಾವುದೇ ಅಹಿತಕರ ಘಟನೆ ನಡೆಯದೆ ಮೈಸೂರು ದಸರಾ ಮಹೋತ್ಸವ ಶಾಂತಿಯುತ ಹಾಗೂ ಅತ್ಯಂತ ಯಶಸ್ವಿಯಾಗಿ ಮುಕ್ತಾಯಗೊಂಡಿದೆ.

ದೇಶ–ವಿದೇಶಗಳಿಂದ ಆಗಮಿಸಿದ್ದ ಪ್ರವಾಸಿಗರು ಮೈಸೂರಿನ ಗತವೈಭವ ಮತ್ತು ಪರಂಪರೆಯನ್ನು ನೋಡಿ ಮೂಕವಿಸ್ಮಿತರಾದರು. ಅರಮನೆ ಆವರಣ ಮತ್ತು ಮೆರವಣಿಗೆ ಸಾಗುವ ರಾಜಮಾರ್ಗದುದ್ದಕ್ಕೂ ಕಿಕ್ಕಿರಿದು ನೆರೆದಿದ್ದ ಲಕ್ಷಾಂತರ ಜನರು ಚಿನ್ನದ ಅಂಬಾರಿಯಲ್ಲಿ ವಿರಾಜಮಾನಳಾಗಿದ್ದ ಅಧಿದೇವತೆ ಶ್ರೀ ಚಾಮುಂಡೇಶ್ವರಿ ದೇವಿ, ವಿವಿಧ ಕಲಾತಂಡಗಳು ಹಾಗೂ ಸ್ತಬ್ಧಚಿತ್ರಗಳನ್ನು ವೀಕ್ಷಿಸಲು ಮುಗಿಬೀಳುತ್ತಿದ್ದರು. ಆದರೆ, ಅತ್ಯಂತ ವ್ಯವಸ್ಥಿತವಾಗಿ ಹೆಚ್ಚುವರಿ ಪೊಲೀಸ್ ಸಿಬ್ಬಂದಿ ನಿಯೋಜಿಸಿ ಭಾರೀ ಭದ್ರತೆ ಮಾಡಿದ್ದರಿಂದ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಕಟ್ಟೆಚ್ಚರ ವಹಿಸಲಾಗಿತ್ತು.

ಅರಮನೆ ಆವರಣ, ಸುತ್ತಲಿನ ದ್ವಾರಗಳು, ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ, ಮೆರವಣಿಗೆ ಸಾಗುವ ಮಾರ್ಗ, ಬನ್ನಿಮಂಟಪದ ಪಂಜಿನ ಕವಾಯತು ಮೈದಾನ ಹಾಗೂ ಸುತ್ತಲಿನ ಪ್ರದೇಶದಲ್ಲಿ ಸಾವಿರಾರು ಮಂದಿ ಪೊಲೀಸರನ್ನು ನಿಯೋಜಿಸಿ ಕಟ್ಟೆಚ್ಚರ ವಹಿಸಲಾಗಿತ್ತು. ಅಲ್ಲದೆ, ಸಿಸಿ ಕ್ಯಾಮರಾ, ಡ್ರೋಣ್ ಕ್ಯಾಮರಾಗಳ ಕಣ್ಗಾವಲಿನಲ್ಲಿ ತೀವ್ರ ನಿಗಾ ವಹಿಸಲಾಗಿತ್ತು. ಲಕ್ಷಾಂತರ ಮಂದಿ ಆಗಮಿಸಿದ್ದರಿಂದ ಸಹಜವಾಗಿ ಕೆಲವೆಡೆ ಟ್ರಾಫಿಕ್ ಜಾಮ್ ಆದರೂ ಸಂಚಾರ ಪೊಲೀಸರ ಕಾರ್ಯನಿರ್ವಹಣೆಯಿಂದಾಗಿ ಸುಗಮ ಸಂಚಾರಕ್ಕೆ ವ್ಯವಸ್ಥೆ ಮಾಡಲಾಗಿತ್ತು. ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ, ಡಿಸಿಪಿಗಳಾದ ಎಂ.ಎಸ್. ಗೀತಾ ಪ್ರಸನ್ನ ಹಾಗೂ ಪ್ರದೀಪ್ ಗುಂಟಿ ಅವರು ಅರಮನೆ ಆವರಣ ಹಾಗೂ ಬನ್ನಿ ಮಂಟಪದಲ್ಲಿ ಖುದ್ದು ಹಾಜರಿದ್ದು, ಬಂದೋಬಸ್ತ್ ವ್ಯವಸ್ಥೆಯ ಮೇಲ್ವಿಚಾರಣೆ ನಡೆಸಿದರು.

ನಮ್ಮ ಮೈಸೂರು–ನಮ್ಮ ಹೆಮ್ಮೆ

ಮೆರವಣಿಗೆ ಆರಂಭದಿಂದ ಚಿನ್ನದ ಅಂಬಾರಿಯಲ್ಲಿ ಪ್ರತಿಷ್ಠಾಪಿತಳಾಗಿದ್ದ ಚಾಮುಂಡೇಶ್ವರಿ ಉತ್ಸವ ಮೂರ್ತಿಗೆ ಮುಖ್ಯಮಂತ್ರಿಗಳು ಪುಷ್ಪಾರ್ಚನೆ ಮಾಡುವವರೆಗೂ ಸುಮಾರು ನಾಲ್ಕೂವರೆ ಗಂಟೆ ಅರಮನೆ ಆವರಣದಲ್ಲಿ ನೆರೆದಿದ್ದ ಜನರು ನಿರೂಪಕರ ಮನವಿಗೆ ಸ್ಪಂದಿಸಿ "ನಮ್ಮ ಮೈಸೂರು–ನಮ್ಮ ಹೆಮ್ಮೆ" ಮತ್ತು "ಚಾಮುಂಡೇಶ್ವರಿಗೆ ಜೈ" ಘೋಷಣೆಗಳನ್ನು ನಿರಂತರವಾಗಿ ಕೂಗುತ್ತಿದ್ದುದು ಈ ಬಾರಿಯ ವಿಶೇಷ ಎನಿಸಿತು.

ರಾಜಮಾತೆ ಪ್ರಮೋದಾದೇವಿ ಒಡೆಯರ್ ಅವರು ಪುತ್ರ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಸೊಸೆ ತ್ರಿಷಿಕಾ ಯದುವೀರ್ ಹಾಗೂ ಮೊಮ್ಮಗ ಆದ್ಯವೀರ್ ನರಸಿಂಹರಾಜ ಒಡೆಯರ್ ಅವರೊಂದಿಗೆ ಅರಮನೆಯಲ್ಲಿ ಕುಳಿತು ಮೆರವಣಿಗೆ ವೀಕ್ಷಿಸುತ್ತಿದ್ದುದನ್ನು ನೋಡಿ ಜನರು ಹರ್ಷೋದ್ಘಾರ ಮಾಡಿದರು.


ಕಲಾತಂಡದೊಂದಿಗೆ ಹೆಜ್ಜೆ ಹಾಕಿದ ಸಚಿವ ಎಸ್.ಟಿ.ಎಸ್

ಮೈಸೂರು, ಅ.5 (ಪಿಎಂ)– ಜಂಬೂಸವಾರಿ ಮೆರವಣಿಗೆಯಲ್ಲಿ ಸೋಮನ ಕುಣಿತ ಕಲಾತಂಡದೊಂದಿಗೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಉತ್ಸಾಹದಿಂದ ಹೆಜ್ಜೆ ಹಾಕಿ ಸಂಭ್ರಮಿಸಿದರಲ್ಲದೆ, ಕಲಾವಿದರಿಗೂ ಉತ್ತೇಜನ ನೀಡಿದರು. ವಿವಿಧ ಕಲಾತಂಡಗಳ ಕಲಾವಿದರ ಬಳಿ ಹೋಗಿ ಹೀಗೆಯೇ ಉತ್ತೇಜನ ನೀಡಿದ ಸಚಿವರು, ಸೋಮನ ಕುಣಿತ ಕಲಾತಂಡದ ಪ್ರದರ್ಶನದ ವೇಳೆ ಉತ್ಸಾಹದಿಂದ ಅವರೂ ನೃತ್ಯ ಪ್ರದರ್ಶನಕ್ಕೆ ಮುಂದಾದರು. ಇದರಿಂದ ಪ್ರೇರಣೆಗೊಂಡ ಕಲಾವಿದರು ಮತ್ತಷ್ಟು ಬಿರುಸಿನ ಹೆಜ್ಜೆ ಹಾಕಿ, ಅಪಾರ ಸಂಖ್ಯೆಯ ಪ್ರೇಕ್ಷಕರಿಗೆ ನೃತ್ಯದ ರಸದೌತಣ ಉಣಬಡಿಸಿದರು.

ಹಿಂಬದಿ ಕುಳಿತವರಿಂದ ಖಾಲಿ ನೀರಿನ ಬಾಟಲಿ ಎಸೆತ

ಮೈಸೂರು,ಅ.5(ಪಿಎಂ)– ಅರಮನೆ ಅಂಗಳದಲ್ಲಿ ಜಂಬೂಸವಾರಿ ಮೆರವಣಿಗೆ ವೇಳೆ ಸ್ತಬ್ಧಚಿತ್ರ, ಕಲಾತಂಡಗಳ ಪ್ರದರ್ಶನ ತಮಗೆ ಕಾಣುತ್ತಿಲ್ಲವೆಂದು ಮುಂಬದಿ ನಿಂತವರಿಗೆ ಖಾಲಿ ನೀರಿನ ಬಾಟಲಿ ಎಸೆದು ಆಕ್ರೋಶ ವ್ಯಕ್ತಪಡಿಸಿದರು. ಮುಂಬದಿ ಕುಳಿತವರು ಸ್ತಬ್ಧಚಿತ್ರ, ಕಲಾತಂಡಗಳ ಪ್ರದರ್ಶನ ನೋಡಲು ಎದ್ದು ನಿಲ್ಲುತ್ತಿದ್ದರು. ಈ ಪೈಕಿ ಹಲವರು ಸೆಲ್ಫಿ ಮೊರೆ ಹೋದರು. ಇದರಿಂದ ಆಕ್ರೋಶಗೊಂಡ ಹಿಂಬದಿ ಕುಳಿತವರು ತಮ್ಮಲ್ಲಿದ್ದ ನೀರಿನ ಖಾಲಿ ಬಾಟಲಿಗಳನ್ನು ಎಸೆದು ಕಿಡಿಕಾರಿದರು. ಆಗಾಗ್ಗೆ ಇಂತಹ ಸನ್ನಿವೇಶ ಅರಮನೆ ಅಂಗಳದ ಅಲ್ಲಲ್ಲಿ ಸಾಮಾನ್ಯವಾಗಿತ್ತು.

ಅರಮನೆಯಲ್ಲಿ ಸಾಂಪ್ರದಾಯಿಕ ಆಯುಧ ಪೂಜೆ



ಮೈಸೂರು,ಅ.5(ಎಂಟಿವೈ)– ಮೈಸೂರು ಅರಮನೆಯಲ್ಲಿ ಮಂಗಳವಾರ ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಪಟ್ಟದ ಕತ್ತಿ ಸೇರಿದಂತೆ ವಿವಿಧ ಆಯುಧಗಳಿಗೆ ಪೂಜೆ ನೆರವೇರಿಸಿದರು.


ವಿಜಯದಶಮಿ ಹಿನ್ನೆಲೆಯಲ್ಲಿ ಪ್ರತಿ ವರ್ಷವೂ ರಾಜವಂಶಸ್ಥರು ಅರಮನೆಯಲ್ಲಿ ಆಯುಧಗಳ ಪೂಜೆಯನ್ನು ಶಾಸ್ತ್ರೋಕ್ತವಾಗಿ ನೆರವೇರಿಸುವ ಸಂಪ್ರದಾಯವಿದ್ದು, ಈ ವರ್ಷವೂ ಅರಮನೆಯ ಕಲ್ಯಾಣ ಮಂಟಪ ಹಾಗೂ ಸವಾರಿ ತೊಟ್ಟಿಯಲ್ಲಿ ಆಯುಧಪೂಜೆ ನೆರವೇರಿತು. ಸಂಪ್ರದಾಯದಂತೆ ಪಟ್ಟದ ಆನೆ, ಕುದುರೆ, ಹಸು ಒಳಗೊಂಡಂತೆ ರಾಜವಂಶಸ್ಥರು ಬಳಸುವ ವಾಹನಗಳಿಗೂ ಪೂಜೆ ನೆರವೇರಿಸಲಾಯಿತು.

ಮಂಗಳವಾರ ಬೆಳಗ್ಗೆ 6ರಿಂದಲೇ ಅರಮನೆಯ ಕಲ್ಯಾಣ ಮಂಟಪ ಸಮೀಪದ ಚಂಡಿ ಹೋಮದ ಕೊಠಡಿಯಲ್ಲಿ ಚಂಡಿ ಹೋಮ ಆರಂಭಿಸಲಾಯಿತು. ಬೆಳಗ್ಗೆ 7.45ಕ್ಕೆ ಆನೆ ಸವಾರಿ ಬಾಗಿಲಿಗೆ ಪಟ್ಟದ ಆನೆ ಧನಂಜಯ, ನಿಶಾನೆ ಆನೆ ಭೀಮ, ಅರಮನೆ ಆನೆಯೊಂದಿಗೆ ಪಟ್ಟದ ಹಸು, ಪಟ್ಟದ ಕುದುರೆ, ಒಂಟೆಯನ್ನು ಕರೆತಂದು, ಅವುಗಳೊಂದಿಗೆ ಪಟ್ಟದ ಕತ್ತಿ ಹಾಗೂ ಖಾಸ ಆಯುಧವನ್ನು ಕೋಡಿ ಸೋಮೇಶ್ವರ ದೇವಾಲಯದ ಬಳಿ ಸಾಗಿಸಲಾಯಿತು.

ಪಟ್ಟದ ಆನೆಗೆ ವಿಶೇಷ ಪೂಜೆ: ಕೋಡಿ ಸೋಮೇಶ್ವರ ಹಾಗೂ ಕೋಡಿ ಭೈರವ ಸ್ವಾಮಿ ದೇವಾಲಯದಲ್ಲಿ ಪೂಜೆ ಸಲ್ಲಿಸಿ, ನಂತರ ಬಾವಿ ಹಾಗೂ ಕಳಸಕ್ಕೂ ಪೂಜೆ ಸಂದಿತು. ಬೆಳಗ್ಗೆ 8.20 ರೊಳಗೆ ಕಳಸ ಹೊತ್ತ ಮುತ್ತೈದೆಯರೊಂದಿಗೆ ಪಟ್ಟದ ಆನೆ, ಕುದುರೆ, ಹಸು, ಒಂಟೆಯೊಂದಿಗೆ ಖಾಸ ಆಯುಧ ಹಾಗೂ ದೇವರನ್ನು ಅರಮನೆಯ ಆನೆ ಬಾಗಿಲಿಗೆ ತರಲಾಯಿತು. ಬಳಿಕ ಅರಮನೆಯ ಪುರೋಹಿತರು ಅದನ್ನು ಸ್ವೀಕರಿಸಿ, ಕಲ್ಯಾಣ ಮಂಟಪಕ್ಕೆ ಕೊಂಡೊಯ್ದರು. 9 ಗಂಟೆಗೆ ಚಂಡಿಹೋಮದ ಪೂರ್ಣಾಹುತಿ ನೆರವೇರಿಸಲಾಯಿತು. ಬಳಿಕ 10.30ಕ್ಕೆ ಪಟ್ಟದ ಆನೆ, ಹಸು, ಕುದುರೆಯನ್ನು ಸವಾರಿ ತೊಟ್ಟಿಗೆ ಕರೆತಂದರು. ಧಾರ್ಮಿಕ ಕಾರ್ಯದ ಹಿನ್ನೆಲೆಯಲ್ಲಿ ಅರಮನೆಯ ರಾಜಗುರುಗಳಾದ ಪರಕಾಲ ಮಠದ ಶ್ರೀಗಳು ಆಗಮಿಸಿದರು. ಅವರನ್ನು ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್, ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ತ್ರಿಷಿಕಾ ಕುಮಾರಿ ಒಡೆಯರ್ ಅವರು ಭಕ್ತಿಯಿಂದ ಬರಮಾಡಿಕೊಂಡರು. ಬಳಿಕ ಅವರಿಗೆ ಪಾದಪೂಜೆ ನೆರವೇರಿಸಿದರು.

ಬೆಳಗ್ಗೆ 11.02ರಿಂದ 1.25ರೊಳಗೆ ಸಲ್ಲುವ ಲಗ್ನದಲ್ಲಿ ಅರಮನೆಯ ಕಲ್ಯಾಣಮಂಟಪದಲ್ಲಿ ಯದುವೀರ ಒಡೆಯರ್ ಪಟ್ಟದ ಕತ್ತಿ, ಗುರಾಣಿ ಸೇರಿದಂತೆ ಯದುವಂಶದ ರಾಜರು ಬಳಸುತ್ತಿದ್ದ ಆಯುಧಕ್ಕೆ ಪೂಜೆ ನೆರವೇರಿಸಿದರು. ನಂತರ ಸವಾರಿ ತೊಟ್ಟಿಯಲ್ಲಿ ರಾಜವಂಶಸ್ಥರು ಬಳಸುತ್ತಿದ್ದ ಎಲ್ಲಾ ವಾಹನಗಳನ್ನು ಪೂಜಿಸಿ, ಪುಷ್ಪಾರ್ಚನೆ ಮಾಡಿ ಪೂಜಿಸಿದರು. ಈ ವೇಳೆ ಅರಮನೆಯ ಮೇಲ್ಮಡಿಯ ಕಿಟಕಿಯಿಂದ ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ಮೊಮ್ಮಗ ಆದ್ಯವೀರ್ ಒಡೆಯರ್ ಹಾಗೂ ರಾಜವಂಶಸ್ಥರು ಆಯುಧ ಪೂಜೆ ವೀಕ್ಷಿಸಿದರು. ಬಳಿಕ ಸಂಜೆ ಖಾಸಗಿ ದರ್ಬಾರ್ ಬಳಿಕ ಸಿಂಹ ವಿಸರ್ಜನೆ ಮಾಡಲಾಯಿತು. ಅಲ್ಲದೆ ಖಾಸ ದೇವರ ಮನೆಯಲ್ಲಿ ಯದುವೀರರು, ವಾಣಿವಿಲಾಸ ದೇವರ ಮನೆಯಲ್ಲಿ ತ್ರಿಷಿಕಾ ಕುಮಾರಿ ಒಡೆಯರ್ ಅವರು ಕಂಕಣ ವಿಸರ್ಜಿಸಿದರು. ಇದಾದ ಬಳಿಕ ಅಮಲ ದೇವತಾ ಸನ್ನಿಧಿಯಲ್ಲಿ ದರ್ಶನ ಪಡೆದರು. ಇದರೊಂದಿಗೆ ನವರಾತ್ರಿಯಲ್ಲಿ ರಾಜವಂಶಸ್ಥರ ಖಾಸಗಿ ದರ್ಬಾರ್ ಸಂಪನ್ನಗೊಂಡಿತು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

6.10.2022 ಗುರುವಾರ, ಮಳೆ ನಕ್ಷತ್ರ: ಹಸ್ತ 27.09.2022 ರಿಂದ 10.10.2022
ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಆಶ್ವಯುಜ ಮಾಸ, ಶುಕ್ಲ ಪಕ್ಷ,
ತಿಥಿ: ಏಕಾದಶಿ, ನಕ್ಷತ್ರ : ಧನಿಷ್ಠ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ– ಮಾ. ವೆಂಕಟರಾಂ, 6.20 ದಸರಾ ವಿಶೇಷ ಗೀತಾರಾಧನ, 6.35 ಹಾಗೂ ಸಂಜೆ 5.00ಕ್ಕೆ "ಒಂದೇ ಕಥೆ" ವಿವಿಧ ಮುಖ– ಬಾನುಲಿ ಸರಣೀ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ, 6.40 ಅರಿವಿನ ಶಿಖರ–ಗಾಯನ–ಎ.ಎಸ್. ನಾಗಲಕ್ಷ್ಮಿ, ವ್ಯಾಖ್ಯಾನ– ಡಾ.ಸಿ. ನಾಗಣ್ಣ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.05ವನಿತಾ ವಿಹಾರ, 12.30 ದೇವರನಾಮ–ಅರ್ಚನಾ ಉಡುಪ, ಜಯತೀರ್ಥ ಮೇವುಂಡಿ, 12.45 ಚಟ್‌ಪಟ್ ಚುರುಮುರಿ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ್ ಮತ್ತು ಕೆ.ಬಿ. ಮೀನಾ, 1.20 ಭಾವಗೀತೆ –ವೃಂದಗಾನ, 4.00 ಜನಪದ ಸಂಗೀತ, ಚಂದನ ಕೆ.ಆರ್.– ಜನಪದ ಗೀತೆಗಳು, 6.50 ಕೃಷಿರಂಗ–ಕಿಸಾನ್‌ವಾಣಿ – ದೇಸೀ ತಳಿ ಬೀಜಗಳ ಸಂರಕ್ಷಣೆ ಹಾಗೂ ಉತ್ಪಾದಕತೆಯಲ್ಲಿನ ಅನುಭವ ಕುರಿತು ಡಾ. ಎಂ. ರೇಚಣ್ಣ ಅವರೊಡನೆ ಮಾತುಕತೆ, 9.00 ಯುವವಾಣಿ–ಯುವಜನರ ವೈಯಕ್ತಿಕ ಹಾಗೂ ವೃತ್ತಿ ಜೀವನದಲ್ಲಿ ಸ್ವಯಂ ಸೇವೆಯ ಪಾತ್ರ ಕುರಿತು ಮಾತುಕತೆ, 10.00 ನಾಟಕ 'ಹೊತೆಗೂಡಿದ ಹೆಜ್ಜೆ', ರಚನೆ– ಹೆಚ್.ಆರ್. ಚಂದ್ರವದನ ರಾವ್, ನಿರ್ಮಾಣ– ಪ್ರಭುಸ್ವಾಮಿ ಮಳಿಮಠ, 10.30 ಸವಿನೆನಪು

- **ಚಿತ್ಕಲಾ ಫೌಂಡೇಷನ್, ಹಾಸನ, ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್ :** ಬಿ.ಎನ್. ದೇಸಾಯಿ ಇವರಿಂದ ಪಕ್ಷಿ–ಕೀಟಗಳ ನವರಾತ್ರಿ ಕಲೋತ್ಸವ, ಏಕವ್ಯಕ್ತಿ ಛಾಯಾಚಿತ್ರ ಪ್ರದರ್ಶನ, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ವಿಜಯನಗರ 2ನೇ ಹಂತ, ಬೆಳಗ್ಗೆ 10ರಿಂದ.
- **ರಾಮ್‌ಸನ್ಸ್ ಕಲಾ ಪ್ರತಿಷ್ಠಾನ:** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10 ರಿಂದ.
- **ಗೊಂಬೆಗಳ ಪ್ರದರ್ಶನ:** ರಾಘವೇಂದ್ರ ಕೆ.ಎಸ್. ಅವರು ಕೈಯಿಂದ ಮಾಡಿರುವ 170 ಬೊಂಬೆಗಳ ಪ್ರದರ್ಶನ, ಸ್ಥಳ: ಇಂಚರ ಕಲಾಕ್ಷೇತ್ರ, ವಿಜಯನಗರ, ಬೆಳಗ್ಗೆ 10 ಗಂಟೆಯಿಂದ.
- **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀ ದೇವಿ ನವರಾತ್ರಿ ಉತ್ಸವಗಳು, ಬೆಳಗ್ಗೆ 10ಕ್ಕೆ ಶಾಂತಿ ಹೋಮ, ನವರಾತ್ರಿ ಮಂಗಳಾಚರಣೆ, ಸ್ಥಳ: ನಾದಮಂಟಪ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ.
- **ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನಂ ಚಾರಿಟಬಲ್ ಟ್ರಸ್ಟ್:** ಶರನ್ನವರಾತ್ರಿ ಉತ್ಸವ, ಬೆಳಗ್ಗೆ 9ಕ್ಕೆ ಅಮ್ಮನವರಿಗೆ ಶತಕಲಶಾಭಿಷೇಕ, ಸಪ್ತಶತಿ ಪಾರಾಯಣ, ಸುಮಂಗಲಿ ಕುಂಕುಮಾರ್ಚನೆ, ಸ್ಥಳ: ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನಂ, ವಾಣಿವಿಲಾಸ ಮೊಹಲ್ಲಾ
- **ಶ್ರೀ ಲಕ್ಷ್ಮಿವೆಂಕಟರಮಣಸ್ವಾಮಿ ದೇವಸ್ಥಾನ ಟ್ರಸ್ಟ್ :** 48ನೇ ಬ್ರಹ್ಮೋತ್ಸವ, ಬೆಳಗ್ಗೆ ಚತುರ್ಸ್ಥಾನಾರ್ಚನೆ, ಸುದರ್ಶನ ಸಹಸ್ರನಾಮ ಹೋಮ, ಪ್ರಾಕಾರೋತ್ಸವ, ನಿವೇದನ, ಮಂಗಳಾರತಿ, ಸಂಜೆ ಡೋಲೋತ್ಸವ, ಅಶ್ವವಾಹನೋತ್ಸವ, ಆಳ್ವಾರ್ ಸುದರ್ಶನ, ಶಾತ್ತುಮೊರೈ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ಶ್ರೀ ಲಕ್ಷ್ಮೀವೆಂಕಟರಮಣಸ್ವಾಮಿ ದೇವಸ್ಥಾನ, ವಿ.ವಿ. ಮೊಹಲ್ಲಾ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 6 ಗುರುವಾರ 2022

ಸಂಪುಟ: 43 | ಸಂಚಿಕೆ: 170 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಲಕ್ಷ ಲಕ್ಷ ಭಕ್ತ ಜನರ ನಡುವೆ
ಅದ್ಧೂರಿ ಜಂಬೂಸವಾರಿ

ಮೈಸೂರು, ಅ.5(ಆರ್‌ಕೆ)-ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆ ವಿಜಯದಶಮಿ ಜಂಬೂ ಸವಾರಿ ಮೆರವಣಿಗೆಯು ಬುಧವಾರ ಯಶಸ್ವಿಯಾಗಿ ನೆರವೇರಿತು.

ಐತಿಹಾಸಿಕ ನವರಾತ್ರಿ ಉತ್ಸವದ ಪ್ರಮುಖ ಘಟ್ಟಕ್ಕೆ ಲಕ್ಷಾಂತರ ಮಂದಿ ಸಾಕ್ಷಿಯಾದರು. ಮೈಸೂರು ಅರಮನೆಯ ಉತ್ತರ ದ್ವಾರದ ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ಮಧ್ಯಾಹ್ನ 2.40 ಗಂಟೆಯೊಳಗೆ ಸಲ್ಲುವ ಶುಭ ಮಕರ ಲಗ್ನದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನಂದಿಧ್ವಜಕ್ಕೆ ಪೂಜೆ ಸಲ್ಲಿಸುವ ಮೂಲಕ ವಿಜಯದಶಮಿ ಮೆರವಣಿಗೆಗೆ ಚಾಲನೆ ನೀಡಿದರು. ಬಳಿಕ ಅರಮನೆ ಆವರಣದಿಂದ ಅರ್ಜುನ ನೇತೃತ್ವದ ನಿಶಾನೆ ಆನೆಗಳಾದ ಮಹೇಂದ್ರ, ಭೀಮಾ, ಧನಂಜಯ, ಗೋಪಾಲ ಸ್ವಾಮಿ ಹಾಗೂ ಗೋಪಿ ಮೆರವಣಿಗೆಯಲ್ಲಿ ಸಾಗಿದವು. ನಂತರ 750 ಕೆಜಿ ತೂಕದ ಚಿನ್ನದ ಅಂಬಾರಿಯಲ್ಲಿ ಪ್ರತಿಷ್ಠಾಪಿಸಲಾಗಿದ್ದ ನಾಡಿನ ಅಧಿದೇವತೆ ತಾಯಿ ಶ್ರೀ ಚಾಮುಂಡೇಶ್ವರಿ ದೇವಿಗೆ ಸಂಜೆ 5.37 ಗಂಟೆಗೆ ಮುಖ್ಯಮಂತ್ರಿಗಳು ಪುಷ್ಪಾರ್ಚನೆ ನೆರವೇರಿಸಿದರು. ಈ ಮೊದಲು ಸಂಜೆ 5.07ರಿಂದ 5.18ರವರೆಗೆ ಸಲ್ಲುವ ಶುಭ ಮೀನ ಲಗ್ನದಲ್ಲಿ ಪುಷ್ಪಾರ್ಚನೆ ನೆರವೇರಿಸಲು ವೇಳೆ ನಿಗದಿಯಾಗಿತ್ತಾದರೂ, ಸುಮಾರು 19 ನಿಮಿಷಗಳ ಕಾಲ ತಡವಾಗಿ ಈ ಬಾರಿ ವಿಜಯದಶಮಿ ಮೆರವಣಿಗೆ ಆರಂಭವಾಯಿತು. ಈ ವೇಳೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಕನ್ನಡ ಮತ್ತು ಸಂಸ್ಕೃತಿ ಸಚಿವ ▶ 9ನೇ ಪುಟಕ್ಕೆ



ಬುಧವಾರ ಸಂಜೆ ಮೈಸೂರಿನ ಅರಮನೆ ಆವರಣದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಚಿನ್ನದ ಅಂಬಾರಿಯಲ್ಲಿ ವಿರಾಜಮಾನಳಾದ ತಾಯಿ ಚಾಮುಂಡೇಶ್ವರಿಗೆ ಪುಷ್ಪಾರ್ಚನೆ ನೆರವೇರಿಸಿದರು. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನೀಲ್‌ಕುಮಾರ್, ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಮೇಯರ್ ಶಿವಕುಮಾರ್, ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್ ಹಾಗೂ ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ ಅವರನ್ನು ಚಿತ್ರದಲ್ಲಿ ಕಾಣಬಹುದು. /ಚಿತ್ರ: ಲಕ್ಷ್ಮಿನಾರಾಯಣ ಯಾದವ್

ಹ್ಯಾಟ್ರಿಕ್ ಸಾಧನೆ ಮೆರೆದ ಅಭಿಮನ್ಯು

ಸತತ ಮೂರು ಬಾರಿ ಅಂಬಾರಿ ಹೊತ್ತ ಕೂಂಬಿಂಗ್ ಸ್ಪೆಷಲಿಸ್ಟ್

- ಎರಡು ವರ್ಷ ಸರಳ ದಸರಾದಲ್ಲಿ ಅರಮನೆಯಲ್ಲಿ ಅಂಬಾರಿ ಹೊತ್ತಿದ್ದ
- ಪೂರ್ಣ ಪ್ರಮಾಣದ ದಸರಾದಲ್ಲಿ ಯಶಸ್ವಿ ಹೆಜ್ಜೆ ಹಾಕಿದ ಎಕೆ–47

ಎಂ.ಟಿ.ಯೋಗೇಶ್ ಕುಮಾರ್

ಮೈಸೂರು, ಅ.5– ಕರ್ನಾಟಕ ಅರಣ್ಯ ಇಲಾಖೆಯ ಹೆಮ್ಮೆಯ ಕೂಂಬಿಂಗ್ ಸ್ಪೆಷಲಿಸ್ಟ್ ಅಭಿಮನ್ಯು ಸತತ ಮೂರು ಬಾರಿ ಯಶಸ್ವಿಯಾಗಿ ಚಿನ್ನದ ಅಂಬಾರಿ ಹೊತ್ತು ಹ್ಯಾಟ್ರಿಕ್ ಸಾಧನೆ ಮಾಡಿ ತನ್ನ ಸಾಮರ್ಥ್ಯ ಮೆರೆದಿದ್ದಾನೆ. 1100 ಕೆಜಿ ಭಾರ ಹೊತ್ತು 5 ಕಿ.ಮೀ. ಅಂತರವನ್ನು 2.15 ಗಂಟೆಯಲ್ಲಿ ನಿರಾಯಾಸವಾಗಿ ಕ್ರಮಿಸಿ ಗಮನ ಸೆಳೆದಿದ್ದಾನೆ. ಕರ್ನಾಟಕ, ಕೇರಳ, ತಮಿಳುನಾಡು, ಮಹಾರಾಷ್ಟ್ರ ಸೇರಿದಂತೆ ವಿವಿಧೆಡೆ ಪುಂಡಾನೆಗಳ ಸೆರೆ ಕಾರ್ಯಾಚರಣೆಯಲ್ಲಿ ಪಾಲ್ಗೊಂಡು ಇದುವರೆಗೂ 150 ಕಾಡಾನೆ ಸೆರೆಗೆ ಕಾರಣನಾಗಿದ್ದಾನೆ. 50ಕ್ಕೂ ಹೆಚ್ಚು ಹುಲಿ ಸೆರೆ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿರುವ ದಾಖಲೆ ಮಾಡಿದ್ದಾನೆ. ಅತ್ಯಂತ ಧೈರ್ಯಶಾಲಿ ಅಭಿಮನ್ಯು, ಕಳೆದ ಮೂರು ವರ್ಷದಿಂದ ಚಿನ್ನದ ಅಂಬಾರಿ ಹೊರುವ ಕಾಯಕವನ್ನು ಯಶಸ್ವಿಯಾಗಿ ನಿಭಾಯಿಸಿಕೊಂಡು ಬರುವ ಮೂಲಕ ಸೈ ಎನಿಸಿಕೊಂಡಿದ್ದಾನೆ.

ಈ ಹಿಂದೆ 8 ಬಾರಿ ಅಂಬಾರಿ ಹೊತ್ತಿದ್ದ ಅರ್ಜುನನಿಗೆ 60 ವರ್ಷವಾದ್ದರಿಂದ ಕೋರ್ಟ್ ಆದೇಶದಂತೆ ಅಂಬಾರಿ ಹೊರುವ ಜವಾಬ್ದಾರಿಯಿಂದ ಮೂರು ವರ್ಷದ ಹಿಂದೆ ನಿವೃತ್ತಿಯಾಗಿತ್ತು. ಆ ನಂತರ ಜವಾಬ್ದಾರಿ ಹೊತ್ತು 2020ನೇ ಸಾಲಿನ ದಸರಾ ಮಹೋತ್ಸವದಂದು ಮೊದಲ ಬಾರಿಗೆ ಅಭಿಮನ್ಯು ಅಂಬಾರಿ ಹೊತ್ತಿದ್ದ. ಕೋವಿಡ್–19 ಹಿನ್ನೆಲೆಯಲ್ಲಿ ▶ 9ನೇ ಪುಟಕ್ಕೆ

ಅತ್ಯಾಕರ್ಷಕ ಪಂಜಿನ ಕವಾಯತು: ಮನರಂಜಿಸಿದ ಡ್ರೋಣ್ ಚಮತ್ಕಾರ

ವರ್ಣರಂಜಿತ ಈ ಬಾರಿಯ ದಸರೆಗೆ ತೆರೆ




ಮೈಸೂರು, ಅ.5(ಎಸ್‌ಬಿಡಿ)– ಅತ್ಯಾಕರ್ಷಕ ಪಂಜಿನ ಕವಾಯತು, ಡ್ರೋಣ್ ಕ್ಯಾಮರಾ ಮೋಡಿ, ಬಾಣ ಬಿರುಸುಗಳ ಬಣ್ಣ ಬಣ್ಣದ ಚಿತ್ತಾರದೊಂದಿಗೆ ವೈಭವದ ಮೈಸೂರು ದಸರಾ ಮಹೋತ್ಸವಕ್ಕೆ ಬುಧವಾರ ವರ್ಣರಂಜಿತ ತೆರೆ ಬಿದ್ದಿತು.

ಜಂಬೂಸವಾರಿ ಮೆರವಣಿಗೆ ಸಂಪನ್ನಗೊಂಡ ಬಳಿಕ ಬನ್ನಿಮಂಟಪ ಮೈದಾನದಲ್ಲಿ ನಡೆದ ವೈವಿಧ್ಯಮಯ ಕಾರ್ಯಕ್ರಮ ಕಿಕ್ಕಿರಿದಿದ್ದ ಜನಸ್ತೋಮಕ್ಕೆ ಮುದ ನೀಡಿತು. ಈ ಬಾರಿ ಸೈನಿಕರ ಮೋಟಾರ್ ಬೈಕ್ ಸಾಹಸ ಪ್ರದರ್ಶನ ಇರಲಿಲ್ಲವಾದರೂ ಇದೇ ಮೊದಲ ಬಾರಿ ಪ್ರಸ್ತುತಗೊಂಡ 'ಡ್ರೋಣ್ ಶೂಟ್' ವಿಭಿನ್ನ ಕಾರ್ಯಕ್ರಮ ಪ್ರೇಕ್ಷಕರ ಬೇಸರ ಸರಿಸಿತು. ▶ 9ನೇ ಪುಟಕ್ಕೆ



'ಡ್ರೋಣ್' ಕರಾಮತ್ತು



ಪಂಜಿನ ಕವಾಯತು ಕಾರ್ಯಕ್ರಮದಲ್ಲಿ ಈ ಬಾರಿ ತಂತ್ರಜ್ಞಾನದ ಮೂಲಕ ಪ್ರಸ್ತುತಪಡಿಸಿದ 'ಡ್ರೋಣ್ ಶೂಟ್' ವಿಶೇಷವಾಗಿತ್ತು. ಎರಡು ಬದಿಯಿಂದ ಆಗಸದೆತ್ತರಕ್ಕೆ ಹಾರಿದ 2 ಡ್ರೋಣ್‌ಗಳನ್ನು ದಿಟ್ಟಿಸುತ್ತಿರುವಾಗಲೇ ಒಂದು ಬದಿಯಿಂದ ನೂರಾರು ಡ್ರೋಣ್ ಮಾದರಿಗಳು ದೀಪದ ಬುಟ್ಟಿಗಳಂತೆ ಮೇಲೇರಿದವು. ಬಣ್ಣ ಬಣ್ಣದ ಲೈಟ್ ಆನ್ ಅಂಡ್ ಆಫ್ ಆಗುವುದನ್ನೇ ನೋಡುತ್ತಿದ್ದ ಪ್ರೇಕ್ಷಕರಿಗೆ ಆಶ್ಚರ್ಯ ಕಾದಿತ್ತು. ಆಗಸದಲ್ಲಿ 'ಹ್ಯಾಪಿ ದಸರಾ', 'ಅಂಬಾರಿ ಹೊತ್ತ ಆನೆ', 'ಮೈಸೂರು ಅರಮನೆ', 'ಸಿಂಹಾಸನ', 'ಓಲಗ', 'ಗಂಡ ಭೇರುಂಡ' ಆಕೃತಿಗಳು ಬೆಳಕಿನಲ್ಲಿ ಮೂಡಿತು. ಒಂದು ಅದ್ಭುತವನ್ನು ಆಸ್ವಾದಿಸಿದಂತೆ ನೆರೆದಿದ್ದವರು ಉದ್ಗರಿಸಿದರು.

ನಕ್ಕರೆ ಅದೇ ಸ್ವರ್ಗ

ತಾಯಿ : ಇವತ್ತಾದರೂ ನಿನ್ನ ಕೊಠಡಿಯನ್ನು ಕ್ಲೀನ್ ಮಾಡೋ. ಎಷ್ಟೊಂದು ಕಸ

ಮಗ : ಸಾರಿಯಮ್ಮ, ಇವತ್ತು ಬೀದಿ ಸ್ವಚ್ಛತಾ ಕಾರ್ಯಕ್ರಮವಿದೆ. ನಾನೂ ಹೋಗಬೇಕು!

ಮೈಸೂರು ಮಿತ್ರ

ಗುರುವಾರ, 6 ಅಕ್ಟೋಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಕೆಲಸ ಸಾಧಿಸಲು ಇಚ್ಛಿಸುವವರು ಬಿಗುಮಾನ ಬಿಡಬೇಕು

–ರಾಮಾಯಣ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಅಣ್ಣೆ ಸೊಪ್ಪಾದರೂ ಸರಿ ಲೆಕ್ಕದ ಮುದ್ದೆ ಉಣಬೇಕು

ನಿಮ್ಮ ಪತ್ರಗಳು

ಪ್ಯಾರಾ ಮೋಟರಿಂಗ್ ಎಷ್ಟು ಸುರಕ್ಷಿತ?

ಮಾನ್ಯರೆ,

ದಸರೆಯ ಪ್ರಯುಕ್ತ ಮೈಸೂರಿನ ಮಹಾರಾಜ ಕಾಲೇಜು ಮೈದಾನದ ಬಳಿ ಪ್ಯಾರಾ ಮೋಟರಿಂಗ್ ಯಾನ ನಡೆಯುತ್ತಿದೆ.

ನಾಲ್ಕು ವಾಹನಗಳು ಪ್ರತಿನಿತ್ಯ ಸುಮಾರು 25 ರಿಂದ ಐವತ್ತು ಯಾನಾ ಕಾಂಕ್ಷಿಗಳನ್ನು ತಲಾ ಎರಡೂವರೆ ಸಾವಿರ ಪಡೆದು ಎರಡರಿಂದ ಏಳು ನಿಮಿಷದವರೆಗೆ ಗಗನ ಯಾನ ಮಾಡಿಸುತ್ತಿದೆ.

ದೆಹಲಿಯ ಸಂಸ್ಥೆಯೊಂದು ನುರಿತ ಪೈಲೆಟ್‌ಗಳು ಚಾಲನೆ ಮಾಡುವ ಈ ವಾಹನದಲ್ಲಿ ಯಾನ ಮಾಡಲು ಸಂತೋಷವಾದರೂ ಸುರಕ್ಷಣೆಯ ವಿಚಾರಕ್ಕೆ ಬಂದರೆ ಯಾವುದೇ ರಕ್ಷಣೆ ಇದರಲ್ಲಿ ಯಾನ ಮಾಡುವವರಿಗಿಲ್ಲವೆಂದು ಸ್ಪಷ್ಟವಾಗುತ್ತದೆ.

ಈ ವಿಚಾರದಲ್ಲಿ ಕಂಪನಿಯ ಮಹೇಶ್ ಹೇಳುವುದೇನೆಂದರೆ ಪ್ರತಿ ಯಾನಿಯೂ ಇಂಡೆಮಿನಿಟಿ ಬಾಂಡ್ ಬರೆದುಕೊಡಬೇಕು. ಯಾವುದೇ ಅವಘಡವಾದರೂ ಸಂಸ್ಥೆಯನ್ನು ಹೊಣೆ ಮಾಡುವುದಿಲ್ಲ. ನಾವೇ ಜವಾಬ್ದಾರರು ಎಂದು ಹೇಳುವ ಮೂಲಕ ತಮ್ಮ ಜವಾಬ್ದಾರಿಯನ್ನು ಯಾನಿಯ ಮೇಲೇ ಹಾಕುವ ಬುದ್ಧಿವಂತಿಕೆ ಇವರದು. ಅದೂ ಅಲ್ಲದೇ ಏನಾದರೂ ಅವಘಡವಾದರೆ ಕನಿಷ್ಟ ಪ್ರಾಥಮಿಕ ಚಿಕಿತ್ಸೆ ನೀಡಲೂ ಇವರಲ್ಲಿ ಒಂದು ಆಂಬುಲೆನ್ಸ್ ಆಗಲೀ... ವೈದ್ಯರಾಗಲೀ ಇಲ್ಲ..!

ಕೋವಿಡ್ ಬರುವ ಮುನ್ನ ದಸರೆಯ ಸಂದರ್ಭದಲ್ಲಿ ಹಾರುತ್ತಿದ್ದಾಗ ಮೋಟಾರ್ ಒಂದು ಇದೇ ಮೈದಾನದ ಹಾಕಿ ಪಿಚ್‌ನಲ್ಲಿ ಮರಕ್ಕಪ್ಪಳಿಸಿತ್ತು.

ಸ್ಥಳದಲ್ಲೇ ಇದ್ದ ನಾನು ಪತ್ರಿಕೆಗಳಿಗೆ ಪತ್ರ ಬರೆದು ಜಿಲ್ಲಾಡಳಿತ ಇಂತಹ ಯಾನಕ್ಕೆ ಸುರಕ್ಷತಾ ಕ್ರಮಗಳನ್ನು ತೆಗೆದುಕೊಳ್ಳದಿದ್ದರೆ ಅನುಮತಿಯನ್ನು ನೀಡಬಾರದೆಂದೂ ಬರೆದಿದ್ದೆ.

ಕಣ್ಮುಚ್ಚಿ ಕುಳಿತು ಪ್ಯಾರಾ ಮೋಟರಿಂಗ್‌ಗೆ ಅನುಮತಿ ನೀಡಿದವರ್ಯಾರು?

ಜಿಲ್ಲಾಡಳಿತಕ್ಕೆ ಸ್ವಲ್ಪವಾದರೂ ಜನರ ಸುರಕ್ಷತೆಯ ಬಗ್ಗೆ ಕಾಳಜಿಯಿಲ್ಲವೇ?

–ಕೊ.ಸು.ನರಸಿಂಹ ಮೂರ್ತಿ, ಮೈಸೂರು.

ಕಾಂಗ್ರೆಸ್‌ಗೆ ಹೊಸ ಚೈತನ್ಯ ತುಂಬುವರೇ ಖರ್ಗೆ...

ಮಾನ್ಯರೆ,

ಇತಿಹಾಸವುಳ್ಳ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ದೇಶ ಕಂಡ ಹಿರಿಯ ರಾಜಕಾರಣಿ, ಮುತ್ಸದ್ದಿ ಕನ್ನಡಿಗ ಮಲ್ಲಿಕಾರ್ಜುನ ಖರ್ಗೆ ಅವರು



ಸ್ಪರ್ಧೆ ಮಾಡಿರುವುದು ರಾಜ್ಯ ರಾಜಕಾರಣಕ್ಕೆ ಅಪೂರ್ವ ಸಂಗತಿ. ಕರ್ನಾಟಕದ ಎರಡನೇ ಅಂಬೇಡ್ಕರ್ ಎಂದೇ ಜನಪ್ರಿಯರಾಗಿರುವ ಇವರು ಕಾಂಗ್ರೆಸ್ ಪಕ್ಷಕ್ಕೆ ಐದು ದಶಕಗಳ ಕಾಲ ಸುದೀರ್ಘ ಸೇವೆ ಸಲ್ಲಿಸಿ ನಿಷ್ಠೆ ಮತ್ತು ಬದ್ಧತೆಯಿಂದ ವಿವಿಧ ಹುದ್ದೆಗಳನ್ನು ಅಲಂಕರಿಸಿರುವ ಅನುಭವಿ. ಸದ್ಯ, ಎಐಸಿಸಿ ಅಧ್ಯಕ್ಷ ಚುನಾವಣೆಗೆ ಕೊನೆ ಕ್ಷಣದಲ್ಲಿ ನಾಮಪತ್ರ ಸಲ್ಲಿಸಿದ್ದು ಬಹುತೇಕ ಇವರೇ ಆಯ್ಕೆಯಾಗುವ ಸಾಧ್ಯತೆ ಹೆಚ್ಚಳವಾಗಿದೆ. ಇವರು ಪ್ರತಿನಿಧಿಸುವ ದಲಿತ ಸಮುದಾಯದ ಮತಗಳು ದೇಶಾದ್ಯಂತ ಸರಿ ಸುಮಾರು 40 ಕೋಟಿ ಜನಸಂಖ್ಯೆ ಇದ್ದು, ಈ ಮೊದಲು ಕಾಂಗ್ರೆಸ್ ವೋಟ್ ಬ್ಯಾಂಕ್ ಆಗಿದ್ದು, ಕಳೆದ ಒಂದು ದಶಕಗಳಿಂದ ಈ ಸಮುದಾಯದ ಮತಗಳು ಒಡೆದು ಹೋಳಾಗಿರುವ ದುಸ್ಥಿತಿ ಉಂಟಾಗಿದೆ. 2023ರ ರಾಜ್ಯ ವಿಧಾನಸಭಾ ಚುನಾವಣೆ ಮತ್ತು 2024ರ ಸಾರ್ವತ್ರಿಕ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಮರಳಿ ಅಧಿಕಾರಕ್ಕೆ ತರಲು ಖರ್ಗೆ ಅವರು ಅಧ್ಯಕ್ಷ ಸ್ಥಾನ ಅಲಂಕರಿಸುತ್ತಿದ್ದಂತೆ ಪರಿಶಿಷ್ಟ ಜಾತಿ ಸಮುದಾಯದ ಮತಗಳು ಮತ್ತೆ ಕಾಂಗ್ರೆಸ್ ಪರವಾಗಿ ಪರಿವರ್ತನೆಯಾಗಿ ಸಾಕಷ್ಟು ಅನುಕೂಲವಾಗಬಹುದು. ಇದನ್ನು ಅಲ್ಲಗೆಳೆಯಲು ಸಾಧ್ಯವೇ ಇಲ್ಲ? ರಾಜ್ಯ ರಾಜಕಾರಣದಿಂದ ರಾಷ್ಟ್ರ ರಾಜಕಾರಣದವರೆಗೆ ಖರ್ಗೆ ಅವರು ನಿರ್ವಹಿಸಿದ ಸಾಕಷ್ಟು ವಿವಿಧ ಹುದ್ದೆಗಳ ಅಪಾರ ಅನುಭವ ಹೊಂದಿರುವ ಇನ್ನೊಬ್ಬರು ಕರ್ನಾಟಕದ ರಾಜಕೀಯದ ಇತಿಹಾಸದಲ್ಲೇ ಇಲ್ಲ ಎಂದೇ ಹೇಳಬಹುದು. "ಆಡು ಮುಟ್ಟದ ಸೊಪ್ಪಿಲ್ಲ ಖರ್ಗೆ ಅಲಂಕರಿಸದ ಸ್ಥಾನವಿಲ್ಲ" ಎಂಬ ಮಾತು ರಾಜಕೀಯ ಪಡಸಾಲೆಯಲ್ಲಿ ಜಗಜ್ಜಾಹೀರು. ಮಾಜಿ ಉಪಪ್ರಧಾನಿ ಬಾಬು ಜಗಜೀವನ್‌ರಾಂ ನಂತರ ಎರಡನೇ ದಲಿತ ನಾಯಕ ಹಾಗೂ ದಿವಂಗತ ಎಸ್. ನಿಜಲಿಂಗಪ್ಪ ಅವರ ಬಳಿಕ, ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ನೇತೃತ್ವ ವಹಿಸಲಿರುವ ಕನ್ನಡಿಗರೆಂಬ ಹೆಗ್ಗಳಿಕೆಗೆ ಪಾತ್ರರಾಗುತ್ತಿರುವುದು ಸಮಸ್ತ ಕನ್ನಡಿಗರಿಗೆ ಚೈತನ್ಯ ತರಿಸುತ್ತ ಹೆಮ್ಮೆ ಎನಿಸುತ್ತಿದೆ. ಎಲ್ಲಾ ವರ್ಗದ ಜನರೊಂದಿಗೆ ಬೆರೆಯುವ ಹಿಂದಿ ಭಾಷೆಯಲ್ಲಿ ಸುಲಲಿತವಾಗಿ ಮಾತನಾಡುವ ಪ್ರೌಢಿಮೆ ಹೊಂದಿ ಸರ್ಕಾರದ ತಪ್ಪು ನಿರ್ಣಯಗಳನ್ನು ಸದನದಲ್ಲಿ ದಿಟ್ಟವಾಗಿ ಖಂಡಿಸುವ ಸಮರ್ಥವಾಗಿರುವ ಇವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಅಧ್ಯಕ್ಷ ಸ್ಥಾನ ತುಂಬುವುದರಿಂದ ರಾಜ್ಯ ಮತ್ತು ರಾಷ್ಟ್ರದಲ್ಲಿ ಕಾಂಗ್ರೆಸ್ ಫೀನಿಕ್ಸ್‌ನಂತೆ ಪುಟಿದು ಮತ್ತೆ ಅಧಿಕಾರ ಏರಬಹುದು ಎಂಬ ಆಶಾಭಾವನೆ ಮೂಡಿಸಿದೆ.

– ಅನಿಲ್ ಕುಮಾರ್, ನಂಜನಗೂಡು.

ಜೀವಂತ ಸಮಸ್ಯೆಗಳ ಬಗ್ಗೆ ಗಮನಹರಿಸಿ

ಮಾನ್ಯರೆ,

ಇಂದಿನ ರಾಜಕೀಯದಲ್ಲಿ ಜೀವಂತ ಸಮಸ್ಯೆಗಳ ವಿಷಯಗಳ ಬಗ್ಗೆ ಚರ್ಚಿಸ ಬೇಕಾದದ್ದನ್ನು ಬಿಟ್ಟು ನಿರ್ಜೀವ ವಿಷಯವೇ ವೈಭವದ ವಿಚಾರಗಳ ವಿಷಯಗಳಾಗಿ ಮಾರ್ಪಟ್ಟಿವೆ. ರಾಜ್ಯದಲ್ಲಿ ನಿರಂತರವಾಗಿ ಸುರಿಯುತ್ತಿರುವ ಧಾರಾಕಾರ ಮಳೆಯಿಂದ ಹಾನಿಗೊಳಗಾದ ಕುಟುಂಬಗಳ ಬಗ್ಗೆ ಗಮನಹರಿಸಿ ಆರ್ಥಿಕವಾಗಿ ಮತ್ತು ಮಾನಸಿಕವಾಗಿ ಧೈರ್ಯ ತುಂಬುವ ಕೆಲಸ ಮಾಡಬೇಕಾದದ್ದನ್ನು ಬಿಟ್ಟು ಜೀವ ಇಲ್ಲದೆ ಇರುವ ನಿರ್ಜೀವ ವಿಷಯಗಳ ಬಗ್ಗೆ ಟೀಕೆ ಟಿಪ್ಪಣಿಗಳನ್ನು ಮಾಡುತ್ತಾ ಕಾಲಹರಣ ಮಾಡುತ್ತಾ ಜನರನ್ನು ದಿಕ್ಕು ತಪ್ಪಿಸಲಾಗುತ್ತಿದೆ. ಪರ ವಿರೋಧ ವಿಚಾರಗಳು ರಾಜ್ಯಕ್ಕೆ ಕಪ್ಪು ಚುಕ್ಕೆ ತರುವಂತಹ ವಿಚಾರಗಳನ್ನು ಬಿಟ್ಟು ಜೀವಂತ ಸಮಸ್ಯೆಗಳಾದ ನೆರೆ ಹಾವಳಿಯಿಂದ ಸಂಕಷ್ಟಕ್ಕೆ ಸಿಲುಕಿದ ರೈತರ ಕುಟುಂಬಗಳ ಬಗ್ಗೆ, ದಿನ ನಿತ್ಯ ವಸ್ತುಗಳ ಮೇಲೆ ಬೆಲೆ ಏರಿಕೆಯ ಬರೆ, ಅಪೌಷ್ಟಿಕತೆಯಿಂದ ನರಳುತ್ತಿರುವ ಮಕ್ಕಳ ಬಗ್ಗೆ, ನಿರುದ್ಯೋಗದ ಬಗ್ಗೆ ಇವುಗಳ ವಿಚಾರಗಳ ವಿಷಯ ಗಳನ್ನು ಮುಖ್ಯವಾಹಿನಿಯಲ್ಲಿ ಚರ್ಚೆ ಮಾಡಿ ನ್ಯಾಯ ಸಮ್ಮತವಾಗಿ ಜನರಿಗೆ ನ್ಯಾಯ ಕೊಡಿಸುವ ಜೀವಂತ ಸಮಸ್ಯೆಯ ವಿಷಯಗಳ ಬಗ್ಗೆ ಗಮನಹರಿಸಿ.

–ಕಂಗಾಣಿ ಸೋಮು ಪಿ ಸಿ, ಕ್ಯಾತಮಾರನಹಳ್ಳಿ, ಮೈಸೂರು

ಹೊಸ ಸಂಪ್ರದಾಯಗಳಿಗೆ ನಾಂದಿಯಾದ ಜಂಬೂ ಸವಾರಿ, ಪಂಜಿನ ಕವಾಯತು!



ಮೈಸೂರು, ಅ.5–ಈ ಬಾರಿಯ ದಸರಾ ಮಹೋತ್ಸವದ ಜಂಬೂ ಸವಾರಿ ಮತ್ತು ಪಂಜಿನ ಕವಾಯತು ಕಾರ್ಯಕ್ರಮಗಳು ಕೆಲವು ಹೊಸ ಸಂಪ್ರದಾಯಗಳಿಗೆ ನಾಂದಿ ಹಾಡಿತು.

ಕನ್ನಡ ಮತ್ತು ಸಂಸ್ಕೃತಿ ಸಚಿವರ ಸೇರ್ಪಡೆ: ಅರಮನೆ ಆವರಣದಲ್ಲಿ ಚಿನ್ನದ ಅಂಬಾರಿಯಲ್ಲಿ ವಿರಾಜಮಾನಳಾಗಿರುವ ಚಾಮುಂಡೇಶ್ವರಿ ತಾಯಿಗೆ ಈ ಹಿಂದೆ ಮುಖ್ಯಮಂತ್ರಿಗಳು, ರಾಜ ವಂಶಸ್ಥರು, ಮೈಸೂರು ಮೇಯರ್, ಜಿಲ್ಲಾ ಉಸ್ತುವಾರಿ ಸಚಿವರು, ಪೊಲೀಸ್ ಆಯುಕ್ತರು ಮತ್ತು ಜಿಲ್ಲಾಧಿಕಾರಿಗಳು ಪುಷ್ಪಾರ್ಚನೆ ಮಾಡುತ್ತಿದ್ದರು. ಆದರೆ ಈ ದಸರಾದಲ್ಲಿ ಇದೇ ಮೊದಲ ಬಾರಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಪುಷ್ಪಾರ್ಚನೆ ಮಾಡುವ ಅವಕಾಶ ಪಡೆದರು.

ಅಂಬಾರಿ ಮುಂದೆ ಫೋಸ್: ಅಂಬಾರಿ ಹೊತ್ತ ಗಜಪಡೆ ಮುಂಭಾಗ ಮಂಗಳವಾದ್ಯ, ಪೊಲೀಸ್ ವಾದ್ಯಗೋಷ್ಠಿ, ಅಶ್ವದಳದ ಪೊಲೀಸರು ಇರುತ್ತಿದ್ದರು. ಆದರೆ ಇಂದು ನಡೆದ ಜಂಬೂ ಸವಾರಿ ವೇಳೆ ಅಂಬಾರಿ ಆನೆ ಮುಂದೆ ಕಿಕ್ಕಿರಿದು ಸಾರ್ವಜನಿಕರು ಹಾಗೂ ಕೆಲವು ಪೊಲೀಸರು ನಿಂತು ಫೋಸ್ ನೀಡಿ ಫೋಟೋ ಕ್ಲಿಕ್ಕಿಸಿಕೊಂಡದ್ದು ನಡೆಯಿತು. ಒಂದು ವೇಳೆ ಇದು ಸಂಪ್ರದಾಯವಾಗಿ ಮುಂದಿನ ದಿನಗಳಲ್ಲಿ ಮುಂದುವರೆಯುತ್ತದೋ ಏನೋ ಎಂಬ ಮಾತುಗಳು ಜಂಬೂ ಸವಾರಿ ವೀಕ್ಷಕರಿಂದ ಕೇಳಿಬಂದವು.

ಗೌರವ ವಂದನೆಗೆ ಧಕ್ಕೆ: ದಸರಾ ಮಹೋತ್ಸವದ ಕೊನೆಯ ಕಾರ್ಯಕ್ರಮವಾದ ಪಂಜಿನ ಕವಾಯತನ್ನು ರಾಜ್ಯಪಾಲರು ಉದ್ಘಾಟಿಸುತ್ತಿದ್ದರು. ಈ ವೇಳೆ ಅವರಿಗೆ ಪೊಲೀಸ್ ಪಡೆಗಳು ಗೌರವ ವಂದನೆ ಅರ್ಪಿಸಿ, ಸಮಾರಂಭದ ಉದ್ಘಾಟನೆಗೆ ಅನುಮತಿಯನ್ನು ಕೇಳುತ್ತಿದ್ದರು. ಆದರೆ ಈ ಬಾರಿ ಕೋವಿಡ್ ಕಾರಣದಿಂದಾಗಿ ರಾಜ್ಯಪಾಲರು ಗೈರು ಹಾಜರಾಗಿದ್ದರಿಂದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರೇ ಪಂಜಿನ ಕವಾಯತನ್ನು ಉದ್ಘಾಟಿಸಿದರು.

ಪಂಜಿನ ಕವಯತು ವೇಳೆ ಪೊಲೀಸ್ ಪಡೆಗಳ ಗೌರವ ವಂದನೆಯನ್ನು ರಾಜ್ಯಪಾಲರು ಮಾತ್ರ ಸ್ವೀಕರಿಸುವುದು ವಾಡಿಕೆ. ಈ ಬಾರಿ ರಾಜ್ಯಪಾಲರ ಗೈರು ಹಾಜರಿಯಲ್ಲಿ ಮುಖ್ಯಮಂತ್ರಿಗಳು ಮಾತ್ರ ಸ್ವೀಕರಿಸಬೇಕಿತ್ತು. ಆದರೆ ಪೊಲೀಸ್ ಪಡೆಗಳ ಗೌರವ ವಂದನೆ ಸ್ವೀಕಾರಕ್ಕಾಗಿ ಅತೀ ಗಣ್ಯರು ತೆರಳುವ ಪಥ ಸಂಚಲನಾ ವೀಕ್ಷಣಾ ವಾಹನದಲ್ಲಿ ಇಂದು ಮುಖ್ಯಮಂತ್ರಿಗಳೊಂದಿಗೆ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರೂ ಕೂಡ ತೆರಳಿ ಗೌರವ ವಂದನೆ ಸ್ವೀಕರಿಸಿದರು. ಮುಂದಿನ ದಸರೆಯಿಂದ ಇದೇ ಸಂಪ್ರದಾಯ ಮುಂದುವರೆದು ರಾಜ್ಯಪಾಲರೊಂದಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ಗೌರವ ವಂದನೆ ಸ್ವೀಕರಿಸುವರೇ? ಎಂಬುದನ್ನು ಕಾದು ನೋಡಬೇಕಾಗಿದೆ.




ಅರಮನೆ ಖಾಸಗಿ ನಿವಾಸದ ಕಿಟಕಿಯಲ್ಲಿ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್, ಮೊಮ್ಮಗ ಆದ್ಯವೀರ್‌ನೊಂದಿಗೆ ವಜ್ರಮುಷ್ಠಿ ಕಾಳಗ ವೀಕ್ಷಿಸಿದರು.

ಕರೆಂಟ್ ಸಿಬ್ಬಂದಿಗೆ ಶಾಕ್ ಕೊಟ್ಟ ಪೊಲೀಸರು!

ಮೈಸೂರು, ಅ.5–ಜಂಬೂ ಸವಾರಿ ವೇಳೆ ಅರಮನೆ ಆವರಣಕ್ಕೆ ಅಧಿಕೃತ ಪಾಸ್ ಇಲ್ಲದೇ ಇರುವವರನ್ನು ಹಾಗೂ ಕರ್ತವ್ಯದ ಪಾಸ್ ಇಲ್ಲದೇ ಯುವ ದಸರಾ, ಫಲ–ಪುಷ್ಪ ಪ್ರದರ್ಶನ ಮುಂತಾದ ಕಾರ್ಯಕ್ರಮಗಳ ಪಾಸ್‌ಗಳನ್ನು ಕತ್ತಿಗೆ ನೇತು ಹಾಕಿಕೊಂಡವರಿಗೆಲ್ಲಾ ಒಳ ಪ್ರವೇಶಿಸಲು ಅವಕಾಶ ನೀಡಿದ ಪೊಲೀಸರು ಪಂಜಿನ ಕವಾಯತು ಕಾರ್ಯಕ್ರಮದಲ್ಲಿ ಕರ್ತವ್ಯನಿರತ ಚೆಸ್ಕಾಂ ಸಿಬ್ಬಂದಿ ಕರ್ತವ್ಯ ಪಾಸ್ ಹೊಂದಿದ್ದರೂ ಒಳ ಬಿಡದೆ ಸತಾಯಿಸಿದ ಘಟನೆ ನಡೆಯಿತು.

ಪಂಜಿನ ಕವಾಯಿತು ಕಾರ್ಯಕ್ರಮದ ಬಹು ಭಾಗ ವಿದ್ಯುಚ್ಛಕ್ತಿ ಬಳಸಿಯೇ ನಡೆಸಲಾಗುತ್ತದೆ. ಅದಕ್ಕೆ ಚೆಸ್ಕಾಂ ಸಿಬ್ಬಂದಿ ಅತ್ಯಾವಶ್ಯಕವಾಗಿ ಇರಲೇಬೇಕಾಗುತ್ತದೆ. ಹೀಗಾಗಿಯೇ ಚೆಸ್ಕಾಂ ಸಿಬ್ಬಂದಿಗೆ ಕರ್ತವ್ಯದ ಪಾಸ್‌ಗಳನ್ನು ನೀಡಲಾಗಿತ್ತು. ವಿಚಿತ್ರವೆಂದರೆ ಕರ್ತವ್ಯ ಪಾಸ್ ಹೊಂದಿರುವ ಚೆಸ್ಕಾಂ ಸಿಬ್ಬಂದಿಯನ್ನು ಒಳ ಬಿಡಲು ಪೊಲೀಸರು ನಿರಾಕರಿಸಿದ್ದರು. ಚೆಸ್ಕಾಂನ ಎಂಡಿ, ಸೂಪರಿಂಟೆಂಡಿಂಗ್ ಎಂಜಿನಿಯರ್‌ಗಳು ಮನವಿ ಮಾಡಿದರೂ ಕೂಡ ಪೊಲೀಸರು ಸ್ಪಂದಿಸಿಲ್ಲ. ಪಂಜಿನ ಕವಾಯತು ಮೈದಾನದಲ್ಲಿ ಕಂಟ್ರೋಲಿಂಗ್ ಸಿಸ್ಟಂ ಮತ್ತು ಫ್ಯೂಸ್ ಸಿಸ್ಟಂಗಳಿವೆ. ಅವುಗಳನ್ನು ಚೆಸ್ಕಾಂ ಸಿಬ್ಬಂದಿಯೇ ನಿರ್ವಹಿಸಬೇಕಾಗುತ್ತದೆ ಎಂದು ಮನವರಿಕೆ ಮಾಡಿದರೂ ಕೂಡ ಪೊಲೀಸರು ಚೆಸ್ಕಾಂ ಸಿಬ್ಬಂದಿಯನ್ನು ಒಳಬಿಡಲು ಸುತರಾಂ ಒಪ್ಪಲಿಲ್ಲ ಎಂದು ಹೇಳಲಾಗಿದೆ. ತಮ್ಮ ಇಲಾಖೆಯ ಸಿಬ್ಬಂದಿ ಅನುಪಸ್ಥಿತಿಯಲ್ಲಿ ಏನಾದರೂ ಅವಘಡ ಸಂಭವಿಸಿದರೆ ಏನು ಗತಿ ಎಂದು ಆತಂಕಕ್ಕೊಳಗಾಗಿದ್ದ ಚೆಸ್ಕಾಂ ಹಿರಿಯ ಅಧಿಕಾರಿಗಳು ಕೊನೆಯ ಪ್ರಯತ್ನವೆಂಬಂತೆ ಜಿಲ್ಲಾ ಎಸ್ಪಿಯವರನ್ನು ಸಂಪರ್ಕಿಸಿ ಪರಿಸ್ಥಿತಿಯನ್ನು ವಿವರಿಸಿದ ನಂತರ ರಾತ್ರಿ 8.30ರ ಸುಮಾರಿನಲ್ಲಿ ಚೆಸ್ಕಾಂ ಸಿಬ್ಬಂದಿಯನ್ನು ಪಂಜಿನ ಕವಾಯತು ಮೈದಾನಕ್ಕೆ ಪ್ರವೇಶಿಸಲು ಅನುಮತಿಸಲಾಗಿದೆ. ಸುದೈವವಶಾತ್ ಅಲ್ಲಿವರೆವಿಗೂ ಯಾವುದೇ ರೀತಿಯ ಸಣ್ಣ ಪ್ರಮಾಣದ ವಿದ್ಯುತ್ ವ್ಯತ್ಯಯವೂ ಸಂಭವಿಸಲಿಲ್ಲ ಎಂದು ಚೆಸ್ಕಾಂ ಅಧಿಕಾರಿಗಳು ನಿಟ್ಟುಸಿರು ಬಿಟ್ಟಿದ್ದಾರೆ. ತಮ್ಮ ಇಲಾಖೆ ಸಿಬ್ಬಂದಿ ಪ್ರವೇಶಕ್ಕೆ ಅವಕಾಶ ಸಿಗುವವರೆವಿಗೂ ಗಂಟೆಗಟ್ಟಲೆ ಚೆಸ್ಕಾಂ ಅಧಿಕಾರಿಗಳ ಮನದಲ್ಲಿ ಆತಂಕ ಆವರಿಸಿತ್ತು.

ಮಾಜಿ ಕಾರ್ಪೋರೇಟರ್ ಸುನೀಲ್ ಸ್ವಚ್ಛತಾ ಸೇವೆ!



ಮೈಸೂರು, ಅ.5(ಜಿಎ)– ಪೌರಕಾರ್ಮಿಕರ ಸಮವಸ್ತ್ರ ಧರಿಸಿ ದಸರಾ ಮೆರವಣಿಗೆ ಸಾಗುವ ಮಾರ್ಗದುದ್ದಕ್ಕೂ ಸ್ವಚ್ಛತಾ ಕಾರ್ಯ ಮಾಡುವ ಮೂಲಕ ಮಾಜಿ ಪಾಲಿಕೆ ಸದಸ್ಯ ಸುನೀಲ್ ವಿಶಿಷ್ಟ ಸೇವೆಯಿಂದ ಎಲ್ಲರ ಗಮನ ಸೆಳೆದರು.

ದಸರಾ ಆರಂಭವಾದ ದಿನದಿಂದಲೂ ಪೌರಕಾರ್ಮಿಕರು ನಗರದ ಸ್ವಚ್ಛತೆಗಾಗಿ ಹಗಲಿರುಳು ಶ್ರಮಿಸಿದ್ದರು. ಅವರಿಗೆ ಇಂದು ಮಾಜಿ ಕಾರ್ಪೊರೇಟರ್ ಸಾಥ್ ನೀಡಿದರು. ಕಳೆದ ಹಲವು ವರ್ಷಗಳಿಂದ ಜಂಬೂಸವಾರಿ ಮಾರ್ಗದಲ್ಲಿ ಸ್ವಚ್ಛತಾ ಕಾರ್ಯದಲ್ಲಿ ನಿರತರಾಗಿರುವ ಕಾರ್ಪೊರೇಟರ್ ಸುನಿಲ್ ಈ ಬಾರಿಯೂ ಸೇವಾ ಕಾರ್ಯದಲ್ಲಿ ತೊಡಗಿಸಿಕೊಂಡರು. ಈ ಬಾರಿ ಪೌರಕಾರ್ಮಿಕರ ಯೂನಿಫಾರಂ ಧರಿಸಿ ನಗರ ಬಸ್ ನಿಲ್ದಾಣದ ಮುಂಭಾಗ ಆನೆಯ ಲದ್ದಿ ಎತ್ತುವ ಮೂಲಕ ಸ್ವಚ್ಛತಾ ಕಾರ್ಯ ಆರಂಭಿಸಿ, ನೆರೆದವರ ಗಮನ ಸೆಳೆದರು.

ಶ್ವಾನಗಳ ಸಂಕಟ, ಸಂತಸ!





ಮೈಸೂರು, ಅ.5(ಜಿಎ)– ಅರಮನೆ ಆವರಣದಲ್ಲಿ ಶ್ವಾನಗಳು ಪರದಾಡಿದ ದೃಶ್ಯ ಒಂದೆಡೆಯಾದರೆ, ಶ್ವಾನವೊಂದು ಮಾಲೀಕರೊಂದಿಗೆ ಕುಳಿತು ದಸರಾ ಮೆರವಣಿಗೆ ವೀಕ್ಷಿಸಿದ್ದು ವಿಶೇಷವಾಗಿತ್ತು.

ಅರಮನೆ ಸೇರಿದಂತೆ ಮೆರವಣಿಗೆ ಸಾಗುವ ಇಕ್ಕೆಲಗಳಲ್ಲಿ ಜನ ಸಂದಣಿ ಹೆಚ್ಚಿತ್ತು. ಅಚಾನಕ್ಕಾಗಿ ಅರಮನೆ ಒಳಗಿರುವ ಬೀದಿ ನಾಯಿಗಳು ಮೆರವಣಿಗೆ ಸಾಗುವ ಮಾರ್ಗದಲ್ಲಿ ಸಿಕ್ಕಿಹಾಕಿಕೊಂಡು ಕಲಾತಂಡಗಳ ಶಬ್ಧ ಮತ್ತು ಬಾರೀ ಜನ ಸಂದಣಿಯನ್ನು ನೋಡಿ ಅಲ್ಲಿಂದ ಹೊರಹೋಗಲು ಪರದಾಡಿದವು. ಮತ್ತೊಂದೆಡೆ ನಗರದ ದೇವರಾಜ ಅರಸ್ ವಾರುಕಟ್ಟೆ ಮುಂಭಾಗ ಮಹದೇವಪ್ಪ ಎಂಬುವರ ಪ್ರೀತಿಯ ನಾಯಿ ದಸರಾ ವೀಕ್ಷಣೆ ಮಾಡಿತು.

ಬ್ಯಾರಿಕೇಡ್‌ನ ಹಿಂಬದಿ ಸಿಲುಕಿ ಚೀರಾಡಿದ ಮಹಿಳೆಯರು, ಮಕ್ಕಳು

ಮೈಸೂರು, ಅ.5(ಆರ್‌ಕೆಬಿ)–ಮೆರವಣಿಗೆ ನೋಡಲು ಕಾದು ಕುಳಿತಿದ್ದವರಲ್ಲಿ ಅನೇಕ ಮಹಿಳೆಯರು, ಮಕ್ಕಳು ಬ್ಯಾರಿಕೇಡ್‌ನ ಹಿಂಬದಿಯಲ್ಲಿ ಕುಳಿತು ಹಿಂದಿನಿಂದ ತಳ್ಳಾಟ, ನೂಕಾಟದಲ್ಲಿ ಸಿಲುಕಿ ಚೀರಾಡುತ್ತಿದ್ದರು. ಇಂತಹ ಅನೇಕ ಮಹಿಳೆಯರು, ಮಕ್ಕಳನ್ನು ಪೊಲೀಸರು ಬ್ಯಾರಿಕೇಡ್‌ನಿಂದ ಹೊರ ತಂದು ರಕ್ಷಿಸಿದರು. ಕೆ.ಆರ್.ವೃತ್ತ, ಕೆ.ಆರ್.ಆಸ್ಪತ್ರೆ ಎದುರಿನ ವೃತ್ತ, ಸಯ್ಯಾಜಿರಾವ್ ರಸ್ತೆಯ ಧನ್ವಂತರಿ ರಸ್ತೆ ಕ್ರಾಸ್ ಬಳಿ ಹಾಕಲಾಗಿದ್ದ ಬ್ಯಾರಿಕೇಡ್‌ನ ಹಿಂಬದಿಯಲ್ಲಿ ಜನರ ನೂಕಾಟ, ತಳ್ಳಾಟ ನಡೆದಿತ್ತು. ಇದರಿಂದಾಗಿ ಮುಂದೆ ಕುಳಿತಿದ್ದ ಮಹಿಳೆಯರು, ಮಕ್ಕಳ ಮೇಲೆ ಜನರು ಮುಗಿಬೀಳುತ್ತಿದ್ದರು. ಹೀಗಾಗಿ ಭಯದಿಂದ ಮಹಿಳೆಯರು, ಮಕ್ಕಳು ಚೀರಾಡತೊಡಗಿದರು. ಪೊಲೀಸರು ಹಿಂಬದಿಯಲ್ಲಿದ್ದ ಜನರನ್ನು ನಿಯಂತ್ರಿಸಲು ಲಾಠಿ ತೋರಿಸಿದರು. ಜನರ ನೂಕಾಟ, ತಳ್ಳಾಟ ನಿಲ್ಲಲಿಲ್ಲ. ಇದರಿಂದ ಪೊಲೀಸರು ಹಲವು ಮಹಿಳೆಯರು, ಮಕ್ಕಳನ್ನು ಬ್ಯಾರಿಕೇಡ್ ಹಿಂಬಂದಿಯಿಂದ ಕರೆ ತಂದು ರಕ್ಷಿಸಿದರು.

ಇನ್ನು ಮೂರು ದಿನ ದೀಪಾಲಂಕಾರ

ನವರಾತ್ರಿ ಹಿನ್ನೆಲೆಯಲ್ಲಿ ಮೈಸೂರಿನ ದೀಪಾಲಂಕಾರವನ್ನು ಚಾಮುಂಡಿ ಬೆಟ್ಟದಲ್ಲಿ ಅ.9ರಂದು ನಡೆಯುವ ರಥೋತ್ಸವದ ದಿನದವರೆಗೂ ಮುಂದುವರೆಸಲು ನಿರ್ಧರಿಸಲಾಗಿದೆ. ಈಗಾಗಲೇ 15 ದಿನಗಳ ಅವಧಿಗೆ ದೀಪಾಲಂಕಾರಕ್ಕೆ ಟೆಂಡರ್ ನೀಡಲಾಗಿದೆ. ರಥೋತ್ಸವದ ದಿನದವರೆಗೆ ದೀಪಾಲಂಕಾರದ ಸೊಬಗನ್ನು ಸವಿಯಬಹುದಾಗಿದೆ.



ಮೈಸೂರು ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಸುತ್ತೂರು ಶಾಖಾ ಮಠಕ್ಕೆ ಎಐಸಿಸಿ ಅಧ್ಯಕ್ಷ ಸ್ಥಾನದ ಸ್ಪರ್ಧಿಯಾಗಿರುವ ಕಾಂಗ್ರೆಸ್ ಹಿರಿಯ ಮುಖಂಡ ಮಲ್ಲಿಕಾರ್ಜುನ ಖರ್ಗೆ ಅವರು ಬುಧವಾರ ಭೇಟಿ ನೀಡಿ, ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರ ಆಶೀರ್ವಾದ ಪಡೆದರು. ಈ ವೇಳೆ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್, ಮಹಿಳಾ ಘಟಕದ ಅಧ್ಯಕ್ಷೆ ಡಾ.ಪುಷ್ಪ ಅಮರ್‌ನಾಥ್, ಮಾಜಿ ಶಾಸಕ ಬಾಲರಾಜ್ ಸೇರಿದಂತೆ ಇತರೆ ಮುಖಂಡರು ಹಾಜರಿದ್ದರು.

ಮದ್ಯ ಪ್ರಿಯರಿಗೆ ಸುಗ್ಗಿ

ಮೈಸೂರು, ಅ.5(ಆರ್‌ಕೆಬಿ)– ದಸರಾ ಮೆರವಣಿಗೆ ಹಿನ್ನೆಲೆಯಲ್ಲಿ ಮೈಸೂರಿನಲ್ಲಿ ಭಾರೀ ಜನಸ್ತೋಮ ಸೇರಿತ್ತು. ಜಂಬೂಸವಾರಿಯಲ್ಲಿ ಚಾಮುಂಡೇಶ್ವರಿ ಉತ್ಸವ ಮೂರ್ತಿಯುಳ್ಳ ಅಂಬಾರಿ ಹೊತ್ತ ಆನೆ ಕೆ.ಆರ್.ವೃತ್ತದಿಂದ ಸಯ್ಯಾಜಿರಾವ್ ರಸ್ತೆ ಕಡೆಗೆ ತೆರಳುತ್ತಿದ್ದಂತೆ ಜನರು ಬ್ಯಾರಿಕೇಡ್ ದಾಟಿ ಸಿಕ್ಕ ಸಿಕ್ಕ ಕಡೆ ನುಗ್ಗತೊಡಗಿದರು.




ಬೆಳಗ್ಗೆಯಿಂದಲೇ ಮೆರವಣಿಗೆ ವೀಕ್ಷಿಸಲು ಸೇರಿದ್ದ ಜನರು ಕೆ.ಆರ್.ವೃತ್ತ, ದೊಡ್ಡ ಗಡಿಯಾರ, ಧನ್ವಂತರಿ ರಸ್ತೆ, ಸಯ್ಯಾಜಿರಾವ್ ರಸ್ತೆ, ಅಗ್ರಹಾರ, ಶಿವರಾಂಪೇಟೆ ಸುತ್ತಮುತ್ತಲಿನ ಹೋಟೆಲ್, ರಸ್ತೆ ಬದಿಯ ಫಾಸ್ಟ್ ಫುಡ್ ಅಂಗಡಿಗಳತ್ತ ಧಾವಿಸಿದರು. ಹಸಿವಿನಿಂದ ಬಳಲಿದ್ದ ಅವರು ಸಿಕ್ಕಿದ್ದನ್ನು ತಿಂದು ಹೊಟ್ಟೆ ತುಂಬಿಸಿಕೊಂಡರು. ಇತ್ತ ಮದ್ಯಪ್ರಿಯರು ಮಂದ್ಯದಂಗಡಿಗಳತ್ತ ಹೆಜ್ಜೆ ಹಾಕಿ, ಮನಸೋ ಇಚ್ಛೆ ಕುಡಿದರು. ಒಟ್ಟಿನಲ್ಲಿ ಇಂದು ಮದ್ಯದಂಗಡಿ ಮತ್ತು ಹೋಟೆಲ್, ಫಾಸ್ಟ್ ಫುಡ್ ಅಂಗಡಿಗಳಿಗೆ ಭರ್ಜರಿ ವ್ಯಾಪಾರ ಆಯಿತು.

ರಾಜಕೀಯ, ಪತ್ರಿಕಾ ರಂಗದ್ದು ಪತಿ–ಪತ್ನಿಯರ ಸಂಬಂಧ

● ಮುಖ್ಯಮಂತ್ರಿ ಬೊಮ್ಮಾಯಿ ಅಭಿಮತ ● 'ಮೈಸೂರು ದಿಗಂತ' ಪತ್ರಿಕೆಯ ನೂತನ ಕಚೇರಿ, 'ಇಂದ್ರಲೋಕ' ಸಭಾಭವನ ಉದ್ಘಾಟನೆ

ಮೈಸೂರು, ಅ. 5(ಆರ್‌ಕೆ)– ರಾಜಕೀಯ ಕ್ಷೇತ್ರ ಮತ್ತು ಪತ್ರಿಕಾರಂಗದ್ದು ಪತಿ–ಪತ್ನಿಯರ ಸಂಬಂಧ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಂದಿಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ರಾಮಕೃಷ್ಣನಗರ 'ಐ' ಬ್ಲಾಕ್‌ನ ಚದುರಂಗ ರಸ್ತೆಯಲ್ಲಿ ನಿರ್ಮಿಸಿರುವ 'ಮೈಸೂರು ದಿಗಂತ' ಸಂಜೆ ದಿನ ಪತ್ರಿಕೆಯ ನೂತನ ಕಚೇರಿ ಹಾಗೂ 'ಇಂದ್ರಲೋಕ' ಸಭಾಭವನದ ಸಮುಚ್ಛಯ ಕಟ್ಟಡ ಉದ್ಘಾಟಿಸಿ ಮಾತನಾಡಿದ ಅವರು, ತಮ್ಮ ಕುರಿತಾದ ಸುದ್ದಿಗಳು ಪತ್ರಿಕೆಗಳಲ್ಲಿ ಅಥವಾ ಮಾಧ್ಯಮಗಳಲ್ಲಿ ಪ್ರಕಟವಾಗದಿದ್ದಾಗ ರಾಜಕಾರಣಿಗಳು ಪರಿತಪಿಸುತ್ತಾರೆ. ಅದೇ ರೀತಿ ರಾಜಕೀಯ ಸುದ್ದಿಗಳು ಸಿಗದಿದ್ದರೆ ಪತ್ರಿಕೆಗಳು ಸೊರಗುತ್ತವೆ. ಕೆಲವೊಮ್ಮೆ ಈ ಎರಡೂ ಕ್ಷೇತ್ರಗಳ ನಡುವೆ ಮನಸ್ತಾಪಗಳುಂಟಾಗುವುದು ಉಂಟು. ಅದು ಪತಿ–ಪತ್ನಿಯರ ನಡುವಿನ ಜಗಳ ಉಂಡು–ಮಲಗುವ ತನಕ ಎನ್ನುವಂತೆ ಕೇವಲ ಆ ಸಂದರ್ಭಕ್ಕಷ್ಟೇ ಸೀಮಿತವಾಗಿರುತ್ತದೆ. ಆದರೂ ನಾವುಗಳು ಸುಧಾರಿಸಿಕೊಂಡು ಜೊತೆ ಜೊತೆಯಾಗಿಯೇ ಹೆಜ್ಜೆ ಇಡಬೇಕಾಗುತ್ತದೆ ಎಂದರು.




ರಾಜಕಾರಣಿಗಳೊಂದಿಗೆ ಪತ್ರಕರ್ತರು ಅವಿನಾಭಾವ ಸಂಬಂಧ ಹೊಂದಿದ್ದರೂ ರಾಜಕಾರಣದಲ್ಲಿ ಅಥವಾ ಸರ್ಕಾರದ ಆಡಳಿತದಲ್ಲಿ ತಪ್ಪುಗಳಾದಾಗ ಅದನ್ನು ಎತ್ತಿ ತೋರಿಸುವ ಜವಾಬ್ದಾರಿಯನ್ನು ಮರೆಯದೇ ನಿರ್ವಹಿಸಬೇಕು. ಹಾಗೆಯೇ ಪತ್ರಿಕಾ ಸ್ವಾತಂತ್ರ್ಯಕ್ಕೆ ಧಕ್ಕೆ ಆಗದಂತೆ ರಾಜಕಾರಣಿಗಳು ಕೂಡ ನಡೆದುಕೊಳ್ಳಬೇಕು. ಒಟ್ಟಾರೆ "ಪತ್ರಕರ್ತರಿಲ್ಲದೇ ರಾಜಕಾರಣಿಗಳಿಲ್ಲ–ರಾಜಕಾರಣಿಗಳಿಲ್ಲದೇ ಪತ್ರಕರ್ತರೂ ಇಲ್ಲ" ಎಂದರು.

ಸಮಾಜದಲ್ಲಿನ ಸಮಸ್ಯೆಗಳು ಹಾಗೂ ರಾಜಕೀಯ ಕ್ಷೇತ್ರದಲ್ಲಿನ ತಪ್ಪುಗಳನ್ನು ಎತ್ತಿ ತೋರಿಸುವ ಜವಾಬ್ದಾರಿಯಿಂದ ಸುದ್ದಿ ಮಾಧ್ಯಮಗಳು ವಿಮುಖವಾಗಬಾರದು. ಬೆಂಗಳೂರನ್ನು ಹೊರತುಪಡಿಸಿದರೆ ಅತ್ಯಂತ ವ್ಯವಸ್ಥಿತವಾಗಿ ಪತ್ರಿಕೆಗಳನ್ನು ನಡೆಸುತ್ತಾ, ಸಮಗ್ರ ಸುದ್ದಿಗಳನ್ನು ಪ್ರಕಟಿಸಿ ಮಾನವೀಯ ಮೌಲ್ಯಗಳನ್ನು ಮೆರೆಯುತ್ತಿರುವುದನ್ನು ನಾವು ಮೈಸೂರು ಮತ್ತು ಉತ್ತರ ಕರ್ನಾಟಕ ಭಾಗದಲ್ಲಿ ಕಾಣಬಹುದಾಗಿದೆ. ಅದರಲ್ಲೂ ಮೈಸೂರು ನಗರದಲ್ಲಿ ಪತ್ರಿಕೆಗಳ ಬೆಳವಣಿಗೆಗೆ ಪೂರಕ ವಾತಾವರಣವಿದೆ. ಎಷ್ಟೋ ಮಂದಿ ಪತ್ರಿಕೆಗಳನ್ನು ಆರಂಭಿಸಿ, ಅಷ್ಟೇ ವೇಗವಾಗಿ ಅವುಗಳನ್ನು ಮುಚ್ಚಿರುವ ಉದಾಹರಣೆಗಳು ಸಾಕಷ್ಟಿವೆ. ಪತ್ರಿಕೆ ನಡೆಸುವುದು ಅಷ್ಟು ಸುಲಭದ ಕೆಲಸವಲ್ಲ. ಆದರೆ, 'ಮೈಸೂರು ದಿಗಂತ' ಪತ್ರಿಕೆಯನ್ನು ಆರಂಭಿಸಿದ ಮಳಲಿ ನಟರಾಜಕುಮಾರ್ ಅವರು ಎದುರಾದ ಎಲ್ಲಾ ಸಮಸ್ಯೆಗಳನ್ನು ಸಮರ್ಥವಾಗಿ ನಿಭಾಯಿಸಿ 25 ವರ್ಷಗಳಿಂದ ಪತ್ರಿಕೆಯನ್ನು ನಿರಂತರವಾಗಿ ನಡೆಸಿಕೊಂಡು ಬರುವುದರ ಜೊತೆಗೆ ಈಗ ಹೊಸ ವಿನ್ಯಾಸದೊಂದಿಗೆ ಪ್ರಕಟಿಸಲು ಹೊರಟಿರುವುದು ಸಂತಸದ ಹಾಗೂ ಅಭಿನಂದನಾರ್ಹ ಸಂಗತಿ ಎಂದು ಸಿಎಂ ನುಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶಾಸಕ ಜಿ.ಟಿ.ದೇವೇಗೌಡ ಅವರು, 'ಮೈಸೂರು ದಿಗಂತ' ಪತ್ರಿಕೆಯ ನೂತನ ಮುದ್ರಣಾಲಯಕ್ಕೆ ಚಾಲನೆ ನೀಡಿದರು. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಶಾಸಕರಾದ ಎಲ್.ನಾಗೇಂದ್ರ, ನಿರಂಜನ್ ಕುಮಾರ್, ವಿಧಾನಪರಿಷತ್ ಸದಸ್ಯರಾದ ಎ.ಹೆಚ್.ವಿಶ್ವನಾಥ್, ಡಾ.ತಿಮ್ಮಯ್ಯ, 'ಮೈಸೂರು ದಿಗಂತ' ಪತ್ರಿಕೆಯ ಸಂಸ್ಥಾಪಕ ಸಂಪಾದಕ ಮಳಲಿ ನಟರಾಜಕುಮಾರ್, ಕಾರ್ಯನಿರ್ವಾಹಕ ಸಂಪಾದಕ ಘನವಂತ ಮಳಲಿ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ, 'ಆಂದೋಲನ' ಪತ್ರಿಕೆ ಸಂಪಾದಕ ರವಿ ಕೋಟಿ, 'ಹಲೋ ಮೈಸೂರ್' ಸಂಪಾದಕ ಟಿ. ಗುರುರಾಜ್ ಸೇರಿದಂತೆ ಹಲವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com





ಬಾಗಲಕೋಟೆ ಜಿಲ್ಲೆಯ ಆಕರ್ಷಕ ಸ್ತಬ್ಧ ಚಿತ್ರ.



ಸಾಂಸ್ಕೃತಿಕ ರಾಜಧಾನಿ ಮೈಸೂರಿನ 18 ಬಗೆಯ ವಿಶೇಷತೆಗಳ ಅನಾವರಣ



ಕಲ್ಲಹಳ್ಳಿಯಲ್ಲಿರುವ 2500 ವರ್ಷಗಳ ಇತಿಹಾಸವುಳ್ಳ ಭೂವರಾಹಸ್ವಾಮಿ ಮೂರ್ತಿ


106 ವರ್ಷದ ಇತಿಹಾಸವುಳ್ಳ ಮೈಸೂರು ವಿಶ್ವವಿದ್ಯಾನಿಲಯದ ಸಾಧನೆಯ ಹಾದಿ

ಒಂದಕ್ಕಿಂತ ಒಂದು ನಾಡಿನ ಕಲಾವೈಭವ ಮೆರೆದ

48 ಸ್ತಬ್ಧಚಿತ್ರಗಳು

ಮೈಸೂರು: ಇಂದು ನಡೆದ ವೈಭವೋಪೇತ ಜಂಬೂ ಸವಾರಿಯಲ್ಲಿ ಸರ್ಕಾರದ ಸಾಧನೆಗಳು, ಶಿಕ್ಷಣ, ಆರೋಗ್ಯ, ಸಾಹಿತ್ಯ, ಕಲೆ ಹಾಗೂ ಸಾರ್ವಜನಿಕ ಸೌಲಭ್ಯಗಳನ್ನು ಬಿಂಬಿಸುವ ರಾಜ್ಯದ ವಿವಿಧ ಜಿಲ್ಲೆಗಳ ಒಟ್ಟು 48 ಸ್ತಬ್ಧಚಿತ್ರಗಳು ಸಾಗುವ ಮೂಲಕ ಜನಾಕರ್ಷಣೆಗೊಂಡವು. ಬಾಗಲಕೋಟೆ ಜಿಲ್ಲೆಯ ಮುಧೋಳ್ ಶ್ವಾನ, ಇಳಕಲ್ ಸೀರೆ ಹಾಗೂ ದುರ್ಗಾಂಬ ದೇವಸ್ಥಾನದ ಸ್ತಬ್ಧಚಿತ್ರ, ಬಳ್ಳಾರಿಯ ದುರ್ಗಮ್ಮ ದೇವಸ್ಥಾನ ಹಾಗೂ ಮಿಂಚೇರಿಗುಡ್ಡ, ಬೆಳಗಾವಿಯ ಕಮಲ ಬಸದಿ ಹಾಗೂ ರೇಣುಕಾದೇವಿ ದೇವಸ್ಥಾನ, ಮೈಸೂರು ಜಿಲ್ಲೆಯ ಸೋಮನಾಥಪುರದ ಚನ್ನಕೇಶವ ದೇವಸ್ಥಾನ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜೈನ ಬಸದಿ, ಮನ್ಯಾಪುರ ದೇವಸ್ಥಾನ, ಬೆಂಗಳೂರು ನಗರ ಜಿಲ್ಲೆ ಕಡಲೆಕಾಯಿ ಪರಷೆ ಹಾಗೂ ಬಸವನಗುಡಿ, ಕಾವೇರಿ ನೀರಾವರಿ ನಿಗಮದ ರೈತರು ಹಾಗೂ ಸಾರ್ವಜನಿಕ ಸೌಕರ್ಯಗಳು, ಬೀದರ್ ಜಿಲ್ಲೆಯ ಅನುಭವ ಮಂಟಪ, ಚಾಮರಾಜನಗರ ಜಿಲ್ಲೆಯ ಪವರ್‌ಸ್ಟಾರ್ ದಿ. ಪುನೀತ್ ರಾಜ್‌ಕುಮಾರ್ ಅವರ ಪ್ರತಿಮೆಯೊಂದಿಗೆ ವನ್ಯಧಾಮ ಹಾಗೂ ಶ್ರೀ ಮಹದೇಶ್ವರ ವಿಗ್ರಹ, ಸ್ತಬ್ಧಚಿತ್ರ ಉಪಸಮಿತಿಯ ಆಜಾದಿ ಕಾ ಅಮೃತ ಮಹೋತ್ಸವ, ಚಿಕ್ಕಬಳ್ಳಾಪುರ ಜಿಲ್ಲೆಯ ಬೋಗಾ ನಂದೀಶ್ವರ ದೇವಸ್ಥಾನ ಹಾಗೂ ಗ್ರೀನ್ ನಂದಿ ಅಂಡ್ ಕ್ಲೀನ್ ನಂದಿ, ಚಿಕ್ಕಮಗಳೂರು ಜಿಲ್ಲೆಯ ಸಪ್ತ ನದಿಗಳು, ಚಿತ್ರದುರ್ಗ ಜಿಲ್ಲೆಯ ವಾಣಿವಿಲಾಸ ಜಲಾಶಯ, ಒನಕೆ ಓಬವ್ವ, ಕುದುರೆ ಮೇಲೆ ಆಸೀನರಾಗಿದ್ದ ಮದಕರಿ ನಾಯಕ ಹಾಗೂ ದೀಪಸ್ತಂಭಗಳನ್ನು ಪ್ರದರ್ಶಿಸುವ ಸ್ತಬ್ಧಚಿತ್ರಗಳು ಜನ ಮನಸೂರೆಗೊಂಡವು.

ಅದೇ ರೀತಿ ದಕ್ಷಿಣ ಕನ್ನಡ ಜಿಲ್ಲೆಯ ಕಂಬಳ, ಹುಲಿವೇಷ ಹಾಗೂ ಭೂತ ಕೋಲು, ದಾವಣಗೆರೆ ಜಿಲ್ಲೆಯ ಸಂತೆಬೆನ್ನೂರು ಪುಷ್ಕರಣಿ, ಧಾರವಾಡ ಜಿಲ್ಲೆಯ ಸಂಗೀತ ವಿದ್ವಾಂಸರ ಸ್ತಬ್ಧಚಿತ್ರ, ಸೆಸ್ಕ್‌ನ ಬೆಳಕು ಯೋಜನೆ ಹಾಗೂ ಪರಿವರ್ತಕ ಅಭಿಯಾನ, ಗದಗ ಜಿಲ್ಲೆಯ ಶ್ರೀ ಕ್ಷೇತ್ರ ಶ್ರೀಮಂತಗಡ ಹೊಳಲಮ್ಮ ದೇವಿ ಮತ್ತು ಶಿವಾಜಿ, ಹಾಸನ ಜಿಲ್ಲೆಯ ಬೇಲೂರು, ಹಳೇಬೀಡು ಹಾಗೂ ಶ್ರವಣಬೆಳಗೊಳದ ಗೊಮ್ಮಟೇಶ್ವರ ವಿಗ್ರಹ, ಕೆಎಂಎಫ್‌ನ ನಂದಿನಿ ಕ್ಷೀರಧಾರೆ ಹಾಗೂ ಉತ್ಪನ್ನಗಳು, ಹಾವೇರಿ ಜಿಲ್ಲೆಯ ಗುರು ಗೋವಿಂದ ಭಟ್ಟರು, ಸಂತ ಶಿಶುನಾಳ ಷರೀಫರು ಹಾಗೂ ಮುಕ್ತೇಶ್ವರ ದೇವಾಲಯ, ಕಲಬುರ್ಗಿಯ ರಾಜವಂಶಸ್ಥರ ಕೋಟೆ, ಚಿಂಚೋಳಿ ಅರಣ್ಯ ಪ್ರದೇಶ ಹಾಗೂ ವನ್ಯಜೀವಿ ಧಾಮ, ಕೊಡಗು ಜಿಲ್ಲೆ ಬ್ರಹ್ಮಗಿರಿಬೆಟ್ಟ, ಭಗಂಡೇಶ್ವರ ದೇವಸ್ಥಾನ, ತಲಕಾವೇರಿ ತೀರ್ಥೋದ್ಭವ ಹಾಗೂ ಇರ್ಪು ಫಾಲ್ಸ್, ಆರೋಗ್ಯ ಇಲಾಖೆಯ ನಮ್ಮ ಕ್ಲಿನಿಕ್, ಕೋಲಾರ ಜಿಲ್ಲೆಯ ಬಿ.ಕೆ.ಎಸ್. ಅಯ್ಯಂಗಾರ್ ಅವರ ಯೋಗಾಭ್ಯಾಸ, ಕೊಪ್ಪಳ ಜಿಲ್ಲೆಯ ಆನೆಗೊಂದಿ ಬೆಟ್ಟ, ಕಿನ್ನಾಳು ಗೊಂಬೆಗಳು ಹಾಗೂ ಅಂಜನಾದ್ರಿ ಬೆಟ್ಟ, ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ಆರೋಗ್ಯ ವರ್ಧಕ, ಮಂಡ್ಯ ಜಿಲ್ಲೆಯ ದೇವಾಲಯಗಳು, ಮೈಸೂರು ಜಿಲ್ಲೆಯ ವಿಶೇಷತೆಗಳು ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಸಾಧನೆಗಳನ್ನು ಬಿಂಬಿಸುವ ಹತ್ತು ಹಲವು ಸ್ತಬ್ಧಚಿತ್ರಗಳು ಮೆರವಣಿಗೆಗೆ ಮತ್ತಷ್ಟು ಮೆರುಗು ನೀಡಿದವು.

ಇದೇ ಪ್ರಥಮ ಬಾರಿ ಅತೀ ಹೆಚ್ಚು ಸ್ತಬ್ಧಚಿತ್ರಗಳ ಪ್ರದರ್ಶನವಾಗಿದ್ದು, ರಾಯಚೂರಿನ ಸಿರಿಧಾನ್ಯ ಬೆಳೆಗಳು, ರಾಮನಗರ ಜಿಲ್ಲೆಯ ರಣಹದ್ದು ಪಕ್ಷಿಧಾಮ, ಲಿಡ್ಕರ್ ಉತ್ಪನ್ನಗಳ ಪ್ರದರ್ಶನ, ಶಿವಮೊಗ್ಗ ಜಿಲ್ಲೆಯ ಅಕ್ಕಮಹಾದೇವಿ ಜನ್ಮಸ್ಥಳ, ತುಮಕೂರು ಜಿಲ್ಲೆಯ ಹೆಚ್‌ಎಎಲ್ ತಯಾರಿಕಾ ಘಟಕ, ಪಾವಗಡದ ಬೃಹತ್ ಸೋಲಾರ್ ಪಾರ್ಕ್, ಸಹಕಾರ ಕ್ಷೇತ್ರ ಯೋಜನೆಗಳು, ಉಡುಪಿ ಜಿಲ್ಲೆಯ ಕೈಮಗ್ಗ ಸೀರೆ ನೇಯ್ಗೆ, ಉತ್ತರ ಕನ್ನಡ ಜಿಲ್ಲೆಯ ಕಾರವಾರ ನೌಕಾನೆಲೆ, ವಿಜಯಪುರದ ಸಿದ್ದರಾಮೇಶ್ವರ ದೇವಸ್ಥಾನ, ವಿಜಯನಗರ ಜಿಲ್ಲೆಯ ಉಗ್ರನರಸಿಂಹ, ದರೋಜಿ ಕರಡಿಧಾಮ ಹಾಗೂ ಕಲ್ಲಿನ ರಥ, ಮಂಡ್ಯ ಜಿಲ್ಲೆಯ ಮಹಾಕುಂಭ ಮೇಳ, ಶ್ರೀ ಮಹದೇಶ್ವರ ಜ್ಯೋತಿ ಸ್ವೀಕಾರ, ಯಾದಗಿರಿ ಜಿಲ್ಲೆಯ ಸುರಪುರ ಕೋಟೆಯನ್ನು ಪರಿಚಯಿಸುವ ಸ್ತಬ್ಧಚಿತ್ರಗಳೂ ವಿಜಯದಶಮಿ ಮೆರವಣಿಗೆಯಲ್ಲಿ ಜನರ ಮನಸೆಳೆದವು.

ಐರಾವತದಲ್ಲಿ ಆಗಮಿಸಿದ ಮುಖ್ಯಮಂತ್ರಿ ಪರಿವಾರ

ಮಧ್ಯಾಹ್ನ 2.25 ಗಂಟೆ ವೇಳೆಗೆ ಕೆಎಸ್‌ಆರ್‌ಟಿಸಿ ಐರಾವತ ಬಸ್‌ನಲ್ಲಿ ಸಚಿವ ಸಂಪುಟದ ಸಹೋದ್ಯೋಗಿಗಳೊಂದಿಗೆ ಅರಮನೆ ಆವರಣಕ್ಕೆ ಮುಖ್ಯಮಂತ್ರಿಗಳು ಆಗಮಿಸುತ್ತಿದ್ದಂತೆಯೇ ನೆರೆದಿದ್ದ ಜನರು ಭಾರೀ ಕರತಾಡನದ ಮೂಲಕ ಸ್ವಾಗತಿಸಿದರು. ಬಲರಾಮ ದ್ವಾರದಲ್ಲಿ ನಂದಿಧ್ವಜಕ್ಕೆ ಪೂಜೆ ನೆರವೇರಿಸಿ, ನಾಡಿನ ಜನತೆಗೆ ದಸರಾ ಮಹೋತ್ಸವದ ಸಂದೇಶ ಸಾರಿದ ನಂತರ ಬಸವರಾಜ ಬೊಮ್ಮಾಯಿ ಅವರು, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನಿಲ್‌ಕುಮಾರ್, ಕೃಷಿ ಸಚಿವ ಬಿ.ಸಿ.ಪಾಟೀಲ್‌ರೊಂದಿಗೆ ತೆರೆದ ವಾಹನದಲ್ಲಿ ಅರಮನೆ ಮುಂಭಾಗದಲ್ಲಿ ನೆರೆದಿದ್ದ ಜನರತ್ತ ಕೈಬೀಸಿ, ಶುಭ ಕೋರಿದರು.



ಪತ್ನಿ ಚನ್ನಮ್ಮ ಅವರೊಂದಿಗೆ ಜಂಬೂಸವಾರಿ ವೀಕ್ಷಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ



ರಾಮದೇವರ ಬೆಟ್ಟ, ರಣಹದ್ದು ಪಕ್ಷಿಧಾಮದ ಬಗ್ಗೆ ಮಾಹಿತಿ ಹೊಂದಿರುವ ಸ್ತಬ್ಧಚಿತ್ರ




ರಾಯಚೂರು ಕೃಷಿ ವಿವಿಯ ಸಿರಿಧಾನ್ಯ ಬೆಳೆಗಳ ಸಂಸ್ಕರಣಾ ಘಟಕದ ಕಿರುಪರಿಚಯ



ಚರ್ಮ ಕುಶಲಕರ್ಮಿಗಳ ತಯಾರಿಕಾ ವಿನ್ಯಾಸ(ಲಿಡ್ಕರ್)



ಶಿವಶರಣೆ ಅಕ್ಕಮಹಾದೇವಿ ಜನ್ಮಸ್ಥಳ ಉಡುತಡಿ ಗ್ರಾಮ ಪರಿಚಯ


ಸಹಕಾರದಿಂದ ಸಮೃದ್ಧಿ ಸಂದೇಶ ಸಾರಿದ ಸಹಕಾರ ಇಲಾಖೆಯ ಸ್ತಬ್ಧಚಿತ್ರ



ರಸ್ತೆ ಬದಿಯಲ್ಲಿ ಕುಳಿತು ವಿಶ್ವವಿಖ್ಯಾತ ಜಂಬೂ ಸವಾರಿ ವೀಕ್ಷಿಸಿದ ಜನ ಸಮೂಹ


ಜನರ ನೂಕು-ನುಗ್ಗಲು ನಿಯಂತ್ರಣಕ್ಕೆ ಪೊಲೀಸರ ಹರ ಸಾಹಸ.


ಮೈಸೂರು ನಗರ ಬಸ್‌ನಿಲ್ದಾಣದ ಬಳಿ ನೆಲಕ್ಕುರುಳಿದ ಬ್ಯಾರಿಕೇಡ್

ಮೈಸೂರು ಮಿತ್ರ

ನಂದಿಧ್ವಜಕ್ಕೆ ಸಿಎಂ ಬೊಮ್ಮಾಯಿ ಪೂಜೆ: ದಸರಾ ಮೆರವಣಿಗೆಗೆ ವಿದ್ಯುಕ್ತ ಚಾಲನೆ



ಮೈಸೂರು, ಅ.5(ಆರ್‌ಕೆಬಿ)– ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವ ಜಂಬೂಸವಾರಿ ಮೆರವಣಿಗೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬುಧವಾರ ಮಧ್ಯಾಹ್ನ ವಿದ್ಯುಕ್ತ ಚಾಲನೆ ನೀಡಿದರು. ಮೈಸೂರು ಅರಮನೆ ಕೋಟೆ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗ ಬಲರಾಮ ದ್ವಾರದ ಬಳಿ ಎಂದಿನ ಸಂಪ್ರದಾಯದಂತೆ ನಂದಿಧ್ವಜಕ್ಕೆ ವಿಶೇಷ ಪೂಜೆ ಸಲ್ಲಿಸಿ, ಪುಷ್ಪಾರ್ಚನೆ ಮಾಡುವ ಮೂಲಕ ಚಾಲನೆ ನೀಡಿದರು. ಎಂದಿನಂತೆ ಅವರು, ಶ್ರೀ ಚಾಮುಂಡೇಶ್ವರಿ ನಾಡಿನ ಜನರಿಗೆ ಒಳಿತು ಮಾಡಲಿ ಎಂದು ಶುಭ ಕೋರಿದರು. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಕೃಷಿ ಸಚಿವ ಬಿ.ಸಿ.ಪಾಟೀಲ್, ಕನ್ನಡ ಮತ್ತು ಸಂಸ್ಕೃತಿ ಸಚಿವ ಸುನೀಲ್‌ಕುಮಾರ್, ಸಂಸದ ಪ್ರತಾಪ್‌ಸಿಂಹ ಸೇರಿದಂತೆ ಹಲವು ಸಚಿವರು, ಶಾಸಕರು ಈ ಸಂದರ್ಭದಲ್ಲಿ ಹಾಜರಿದ್ದರು. ಮುಖ್ಯಮಂತ್ರಿಗಳೊಂದಿಗೆ ಅವರ ಪತ್ನಿ ಮತ್ತು ಕುಟುಂಬದ ಸದಸ್ಯರು ಉಪಸ್ಥಿತರಿದ್ದರು. ಅವರು ಪೂಜೆ ಸಲ್ಲಿಸುತ್ತಿದ್ದಂತೆ ನೆರೆದಿದ್ದ ಜನಸ್ತೋಮ ಜೈ ಚಾಮುಂಡೇಶ್ವರಿ ಎಂದು ಘೋಷಣೆ ಮೊಳಗಿಸಿದರು.

ತಪ್ಪಿದ ಬಿಸಿಲಿನ ತಾಪ; ವರುಣನ ಕೃಪೆ

ಹಿತಕರ ವಾತಾವರಣದಲ್ಲಿ ಜಂಬೂ ಸವಾರಿ ಸವಿ

ಮೈಸೂರು,ಅ.5(ಪಿಎಂ)– ಬಿಸಿಲಿನ ತಾಪವಿಲ್ಲದೆ ಮೋಡ ಕವಿದ, ಹಿತಕರ ವಾತಾವರಣದಲ್ಲಿ ಜಂಬೂ ಸವಾರಿ ಮೆರವಣಿಗೆ ನಡೆದ ಹಿನ್ನೆಲೆಯಲ್ಲಿ ಜನಸ್ತೋಮ ನೆಮ್ಮದಿ ಹಾಗೂ ನಿಶ್ಚಿಂತೆಯಿಂದ ಮೆರವಣಿಗೆ ವೀಕ್ಷಿಸಿತು.

ಜಂಬೂ ಸವಾರಿ ಆರಂಭಕ್ಕೆ 2 ತಾಸಿಗೂ ಮುನ್ನವೇ ಅರಮನೆ ಅಂಗಳದಲ್ಲಿ ಜನ ಸಮಾವೇಶಗೊಳ್ಳುತ್ತಾರೆ. ಈ ಹಿಂದೆ ನಡೆದಿರುವ ಜಂಬೂ ಸವಾರಿ ಮೆರವಣಿಗೆಗಳಲ್ಲಿ ಬಹುತೇಕ ಸಂದರ್ಭದಲ್ಲಿ ಬಿಸಿಲಿನ ತಾಪದಲ್ಲೇ ಜನ ಕಾದು ಕುಳಿತು ಪರಿತಪಿಸಿದ್ದಿದೆ. ಜೊತೆಗೆ ಕೊಡೆ, ಟೋಪಿ ಧರಿಸಿ ಬಿಸಿಲಿನ ತಾಪ ತಪ್ಪಿಸಿಕೊಳ್ಳುವುದು ಹಿಂದೆಲ್ಲಾ ಸಾಮಾನ್ಯವಾಗಿತ್ತು.

ಈ ಬಾರಿ ಅರಮನೆ ಆವರಣಕ್ಕೆ ಜನ ಸೇರುವ ಸಂದರ್ಭದಿಂದ ಕೊನೆವರೆಗೂ ಮೋಡಕವಿದ ವಾತಾವರಣವಿದ್ದ ಹಿನ್ನೆಲೆಯಲ್ಲಿ ಜನ ಬಿಸಿಲಿನ ತಾಪವಿಲ್ಲದೆ, ಸಂಭ್ರಮದಿಂದ ಮೆರವಣಿಗೆ ವೀಕ್ಷಿಸಿದರು. ಜೊತೆಗೆ ಮೋಡ ಕವಿದಿದ್ದರೂ ವರುಣ ಕೃಪೆ ತೋರಿ, ತಂಪಾದ ವಾತಾವರಣದಲ್ಲಿ ಜನತೆ ಜಂಬೂ ಸವಾರಿ ಕಣ್ತುಂಬಿಕೊಂಡರು. ಇನ್ನು ಸಯ್ಯಾಜಿರಾವ್ ರಸ್ತೆ ಇಕ್ಕೆಲಗಳಲ್ಲಿ ಮೆರವಣಿಗೆ ವೀಕ್ಷಿಸಿದವರೂ ಸುಡುಬಿಸಿಲಿನ ಸಂಕಟವಿಲ್ಲದೆ, ಸಂಭ್ರಮದಿಂದ ಅಂಬಾರಿಯ ಅಂದ ಸವಿದರು.



ಕೆಎಂಎಫ್‌ನ 'ಗೋವಿನಿಂದ ಗ್ರಾಹಕನವರೆಗೂ ಗುಣಮಟ್ಟದ ಉತ್ಕೃಷ್ಟತೆ' ಜಾಗೃತಿ



ಗದಗ ಜಿಲ್ಲೆಯ ಶ್ರೀಮಂತಗಡದ ಶ್ರೀ ಹೊಳಲಮ್ಮದೇವಿ ದೇಗುಲ ವಿಶೇಷ



ಚಾಮರಾಜನಗರದ 'ಪ್ರಕೃತಿ ಮಡಿಲಿನ ಹುಲಿ ಮತ್ತು ಆನೆ ಧಾಮ' ಪರಿಚಯ



ಕರುನಾಡ ಜೀವನದಿ ಕಾವೇರಿ ಉಗಮ ಸ್ಥಳ ತಲಕಾವೇರಿ ಬ್ರಹ್ಮಗಿರಿ ಬೆಟ್ಟದ ಸೊಬಗು



ಕೊಪ್ಪಳದ ಪ್ರಸಿದ್ಧ ಆನೆಗೊಂದಿ ಕೋಟೆ, ಅಂಜನಾದ್ರಿ ಬೆಟ್ಟದ ಚಿತ್ರಣ




ಗುರು ಗೋವಿಂದಭಟ್ಟ, ಶಿಶುನಾಳ ಷರೀಫರು, ಮುಕ್ತೇಶ್ವರ ದೇಗುಲದ ಸ್ತಬ್ಧ ಚಿತ್ರ



ಸಮಗ್ರ ಆರೋಗ್ಯ ರಕ್ಷಣೆ ಕರ್ನಾಟಕ ರಾಜ್ಯದ ಸಂಕಲ್ಪ ತಿಳಿಸಿದ ಆರೋಗ್ಯ ಇಲಾಖೆ



ಸಾಮಾಜಿಕ ನ್ಯಾಯ ಸಂದೇಶ ಸಾರಿದ ಸಮಾಜ ಕಲ್ಯಾಣ ಇಲಾಖೆ



ಬೀದರ್‌ನ ನೂತನ ಅನುಭವ ಮಂಟಪ.



ಚಿಕ್ಕಮಗಳೂರಿನ ಸಪ್ತ ನದಿಗಳ ದೇವತೆಯರು



ಚಿಕ್ಕಬಳ್ಳಾಪುರದಿಂದ ಗ್ರೀನ್‌ನಂದಿ, ಕ್ಲೀನ್‌ನಂದಿ



ಆಯಿಷ್‌ನ ಶ್ರವಣ ಚಿಕಿತ್ಸಾ ಸೌಲಭ್ಯ ಮಾಹಿತಿ



ಉಡುಪಿಯ ಜಿಐ ಟ್ಯಾಗ್‌ನ ಕೈಮಗ್ಗ ಸೀರೆಗಳ ಸೌಂದರ್ಯ



ಪ್ರವಾಸೋದ್ಯಮ ಇಲಾಖೆಯಿಂದ ಬೇಲೂರು ಶಿಲ್ಪಕಲಾ ವೈಭವ



ಚೆಸ್ಕಾಂನ ಡಿಡಿಯು ಯೋಜನೆ, ಬೆಳಕು ಯೋಜನೆ ಪರಿಚಯ



ಕಾರಾವಾರ ನೌಕಾನೆಲೆ(ಐಎನ್‌ಎಸ್ ವಿಕ್ರಮ)



ಸರ್ಕಾರದ ಕಾರ್ಯಕ್ರಮಗಳೊಂದಾದ ಡಿಜಿಟಲ್ ಗ್ರಂಥಾಲಯ



ದಾವಣಗೆರೆ ರಾಣಿಬೆನ್ನೂರಿನ ಶ್ರೀರಾಮ ತೀರ್ಥ ಪುಷ್ಕರಣಿ



ಕೋಲಾರದ ಯೋಗಪಟು ಬಿಕೆಎಸ್ ಅಯ್ಯಂಗಾರ್, ಅಂತರಗಂಗೆ ಪರಿಚಯ




ಜಿಲ್ಲೆಯ ಸಂಗೀತ ದಿಗ್ಗಜರನ್ನು ಸ್ಮರಿಸಿದ ಧಾರವಾಡದ ಸ್ತಬ್ಧ ಚಿತ್ರ



ಐಐಟಿ, ಜಿಟಿಟಿಸಿ, ಕೌಶಲ್ಯ ತರಬೇತಿ ಮಾಹಿತಿ ನೀಡಿದ ಕೌಶಲ್ಯಾಭಿವೃದ್ಧಿ ಇಲಾಖೆ



ಚಿತ್ರದುರ್ಗದ ಇತಿಹಾಸ ಸಾರಿದ ಕಲ್ಲಿನ ಕೋಟೆ, ಒನಕೆ ಓಬವ್ವ, ಮದಕರಿ ನಾಯಕ



ಜಾನಪದ ಕಂಬಳ, ಹುಲಿವೇಷ, ಭೂತಕೋಲ ಪರಿಚಯಿಸಿದ ದಕ್ಷಿಣ ಕನ್ನಡ



ಇತಿಹಾಸ ಪ್ರಸಿದ್ಧ ಬೇಲೂರು ಚನ್ನಕೇಶವ ದೇಗುಲ, ಶ್ರವಣಬೆಳಗೊಳದ ಗೊಮ್ಮಟೇಶ್ವರ



ಕಲಬುರ್ಗಿಯ ರಾಜವಂಶಸ್ಥರ ಕೋಟೆ, ಚಿಂಚೋಳಿ ಅರಣ್ಯ ಪ್ರದೇಶ.



ಅಜಾದಿ ಕಾ ಅಮೃತ ಮಹೋತ್ಸವದ ಅಂಗವಾಗಿ ದೆಹಲಿ ಕೆಂಪುಕೋಟೆ ಸ್ತಬ್ಧ ಚಿತ್ರ

ಖಾಸಗಿ ದರ್ಬಾರ್‌ನ ಧಾರ್ಮಿಕ ಕಾರ್ಯಕ್ಕೆ ತೆರೆ

ಮೈಸೂರು, ಅ.5(ಎಂಟಿವೈ)- ನವರಾತ್ರಿ ಉತ್ಸವದ ಕೊನೆ ದಿನವಾದ ಬುಧವಾರ ಮೈಸೂರು ಅರಮನೆಯಲ್ಲಿ ವಿವಿಧ ಧಾರ್ಮಿಕ ಪೂಜಾ ಕಾರ್ಯ ಜರುಗಿದವು.

ಆಯುಧ ಪೂಜೆಯ ದಿನವಾದ ಮಂಗಳವಾರ ಖಾಸಗಿ ದರ್ಬಾರ್ ಕೊನೆಗೊಂಡು, ಕಂಕಣ ವಿಸರ್ಜಿಸಲಾಗಿತ್ತು. ವಿಜಯದಶಮಿಯ ದಿನವಾದ ಇಂದು ಬೆಳಗ್ಗೆ ಅಂತಿಮ ಹಂತದ ವಿಧಿವಿಧಾನದಂತೆ ಧಾರ್ಮಿಕ ಕಾರ್ಯ ಜರುಗಿದವು. ವಿಜಯದಶಮಿ ಅಂಗವಾಗಿ ಬೆಳಗ್ಗೆ 9.45ಕ್ಕೆ ಅರಮನೆಯ ಆನೆ ಬಾಗಿಲಿಗೆ ಕೋಡಿ ಸೋಮೇಶ್ವರ ದೇವಾಲಯದ ಬಳಿಯಿಂದ ಪಟ್ಟದ ಆನೆ, ಪಟ್ಟದ ಹಸು, ಪಟ್ಟದ ಕುದುರೆಯನ್ನು ಕರೆತಂದು ದೇವರ ಕಾರ್ಯಕ್ಕೆ ನಾಂದಿ ಹಾಡಲಾಯಿತು. ಬಳಿಕ 10.15ಕ್ಕೆ ಕಲ್ಯಾಣಮಂಟಪದಲ್ಲಿ ಆಯುಧಗಳಿಗೆ ಉತ್ತರ ಪೂಜೆ ನೆರವೇರಿಸಲಾಯಿತು.

ನಂತರ ಅರಮನೆ ಆವರಣದಲ್ಲಿರುವ ಭುವನೇಶ್ವರಿ ದೇವಾಲಯಕ್ಕೆ ಚಿನ್ನದ ಅಡ್ಡ ಪಲ್ಲಕ್ಕಿಯಲ್ಲಿ ಮಂಗಳವಾದ್ಯದೊಂದಿಗೆ ಖಾಸ್ ಆಯುಧವನ್ನು ಅರಮನೆಯಿಂದ ಕೊಂಡೊಯ್ಯಲಾಯಿತು. ಬಳಿಕ ಬೆಳಗ್ಗೆ 11.02ರಿಂದ 11.22ರೊಳಗೆ ರಾಜವಂಶಸ್ಥರಾದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ವಿಜಯಯಾತ್ರೆಗೆ ತೆರಳಿದರು. ಭುವನೇಶ್ವರಿ ದೇವಾಲಯದಲ್ಲಿ ಶಮಿ ಪೂಜೆ ನೆರವೇರಿಸಿದರು. ಪೂಜೆ ಮುಗಿದ ಬಳಿಕ, ಮಂಗಳ ವಾದ್ಯ ಹಾಗೂ ಅರಮನೆಯ ಹೊಗಳುಬಟ್ಟರು, ದೀವಟಿಗೆಯವರೊಂದಿಗೆ ಅರಮನೆಯತ್ತ ತೆರಳಿದರು.

ವಿಜಯ ಯಾತ್ರೆಯ ನಂತರ ಅರಮನೆಯ ಕನ್ನಡಿ ತೊಟ್ಟಿಯಿಂದ ಚಾಮುಂಡೇಶ್ವರಿ ಉತ್ಸವ ಮೂರ್ತಿಯನ್ನು ಚಾಮುಂಡಿ ತೊಟ್ಟಿಗೆ ಬಿಜು ಉತ್ಸವ ಮಾಡಿದ ಬಳಿಕ ಅರಮನೆಯಲ್ಲಿ ರಾಜವಂಶಸ್ಥರು ನಡೆಸುವ ನವರಾತ್ರಿ ಕಾರ್ಯಕ್ರಮಕ್ಕೆ ತೆರೆ ಬಿದ್ದಿತು.


ಅರಮನೆ ಆವರಣದಲ್ಲಿನ ಭುವನೇಶ್ವರಿ ದೇವಾಲಯದಲ್ಲಿ ರಾಜವಂಶಸ್ಥರಾದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಶಮಿ ಪೂಜೆ ನೆರವೇರಿಸಿದರು.


ವಿಜಯಯಾತ್ರೆ ಮುಗಿಸಿ ಅರಮನೆಗೆ ತೆರಳುತ್ತಿರುವ ಯದುವೀರ ಒಡೆಯರ್.

ಸ್ತಬ್ಧಚಿತ್ರದಲ್ಲಿ ಪುನೀತ್ ಸ್ಮರಣೆ



ಮೈಸೂರು,ಅ.5(ಪಿಎಂ)- ನಟ ಪುನೀತ್ ರಾಜ್‌ಕುಮಾರ್ ಅವರ ಬೃಹತ್ ಪುತ್ಥಳಿ ಮಾದರಿಯ ಕಲಾಕೃತಿ ಚಾಮರಾಜನಗರ ಜಿಲ್ಲೆಯ ಸ್ತಬ್ಧಚಿತ್ರದಲ್ಲಿ ಪ್ರಮುಖ ಆಕರ್ಷಣೆಯಾಗಿತ್ತು. ಇದಲ್ಲದೆ, ಜಿಲ್ಲೆಯ ಮಲೆ ಮಹದೇಶ್ವರ ಬೆಟ್ಟದಲ್ಲಿ ಹುಲಿಯ ಮೇಲೆ ತ್ರಿಶೂಲ ಹಿಡಿದು ಕುಳಿತ ಭಂಗಿಯಲ್ಲಿ 100 ಅಡಿ ಎತ್ತರದ ಪ್ರತಿಮೆ ನಿರ್ಮಾಣ ಮಾಡುತ್ತಿದ್ದು, ಅದರ ಪ್ರತೀಕವಾಗಿ ಸ್ತಬ್ಧಚಿತ್ರದಲ್ಲಿ ಅದೇ ಮಾದರಿಯ ಕಲಾಕೃತಿ ನಿರ್ಮಾಣ ಮಾಡಲಾಗಿತ್ತು. ಅಲ್ಲದೆ, ಜಿಲ್ಲೆಯು ಮೂರು ಅರಣ್ಯಧಾಮಗಳನ್ನು ಹೊಂದಿರುವ ಸಂಕೇತವಾಗಿ ಹುಲಿಯ ಬೃಹತ್ ಮುಖವುಳ್ಳ ಕಲಾಕೃತಿ ಜೊತೆಗೆ ಆನೆ, ಹುಲಿ, ಜಿಂಕೆಗಳ ಕಲಾಕೃತಿಗಳನ್ನು ವಿನ್ಯಾಸಗೊಳಿಸಲಾಗಿತ್ತು.

ಪುನೀತ್ ರಾಜ್‌ಕುಮಾರ್ ಬೃಹತ್ ಕಲಾಕೃತಿ ಕಂಡೊಡನೆ ನೆರೆದಿದ್ದ ಅಭಿಮಾನಿಗಳು ಸಿಳ್ಳೆ, ಕೇಕೆಯೊಂದಿಗೆ ನೆಚ್ಚಿನ ನಟನನ್ನು ಸ್ಮರಿಸಿದರು. ಜೊತೆಗೆ ಮಲೆಮಹದೇಶ್ವರರ ಕಲಾಕೃತಿ ದರ್ಶನ ಪಡೆದು ಭಕ್ತಿಭಾವ ಮೆರೆದರು.

ಸಿಎಂಗೆ ತಂದೆ ಬೊಮ್ಮಾಯಿಯವರ ಪಂಚಲೋಹದ ಫೋಟೋ ಕೊಡುಗೆ



ಮೈಸೂರು,ಅ.5(ಆರ್‌ಕೆಬಿ)–ಮಾಜಿ ಸಿಎಂ ಎಸ್.ಆರ್.ಬೊಮ್ಮಾಯಿ ಅವರ ಪಂಚಲೋಹದ ಫೋಟೋವನ್ನು ಗೌರಿಶಂಕರನಗರದ ಶ್ರೀ ಪಂಚಗವಿಮಠದ ಶ್ರೀ ಗೌರಿಶಂಕರ ನಂದಿಧ್ವಜ ಸಂಘದಿಂದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ನೀಡಲಾಯಿತು.

ಸಂಘದ ವತಿಯಿಂದ ಪ್ರತೀ ವರ್ಷ ದಸರಾ ಮೆರವಣಿಗೆಯ ನಂದಿಧ್ವಜ ಉದ್ಘಾಟನೆ ವೇಳೆಗೆ ಮುಖ್ಯಮಂತ್ರಿಗಳಿಗೆ ಫೋಟೋ ನೀಡುವುದು ವಾಡಿಕೆ. ಅದರಂತೆ ಕಲಾವಿದ ಯೋಗೀಶ್ ಅವರು ಸಿದ್ಧಪಡಿಸಿದ ಪಂಚಲೋಹದ ಎಸ್.ಆರ್.ಬೊಮ್ಮಾಯಿ ಫೋಟೋವನ್ನು ಅವರ ಪುತ್ರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ನೀಡಿದರು. ತಮ್ಮ ತಂದೆಯ ಸುಂದರವಾದ ಪಂಚಲೋಹದ ಫೋಟೋ ನೋಡಿದ ಮುಖ್ಯಮಂತ್ರಿಗಳು ಅತೀವ ಸಂತಸ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಎಲ್.ಮಹದೇವಪ್ಪ, ಮುಖಂಡರಾದ ಮಲ್ಲೇಶ್ ನೇತೃತ್ವದ ನಂದಿಧ್ವಜ ತಂಡದ ಸದಸ್ಯರು ಹಾಜರಿದ್ದರು.

ನೀರಿನ ದಾಹ ತಣಿಸಿದ ಸಂಘ ಸಂಸ್ಥೆಗಳು

ಮೈಸೂರು, ಅ.5(ಆರ್‌ಕೆಬಿ)- ಜಂಬೂಸವಾರಿ ಮೆರವಣಿಗೆ ವೀಕ್ಷಣೆಗೆ ಸೇರಿದ್ದ ಜನರಿಗೆ ನೀರು ವಿತರಿಸುವ ಮೂಲಕ ಹಲವು ಸಂಘಟನೆಗಳು ಜನರ ದಾಹ ತಣಿಸಿದವು. ವಾಸವಿ ಯುವಜನರ ಸಂಘ, ವಾಸವಿ ಮಹಿಳಾ ಸಂಘ, ಡಾ.ರಾಜ್ ಅಭಿಮಾನಿಗಳ ಸಂಘ, ಪುನೀತ್ ಅಭಿಮಾನಿಗಳ ಸಂಘ ಸೇರಿದಂತೆ ವಿವಿಧ ಸಮಾಜ ಸೇವಾ ಸಂಘಟನೆಗಳು ನೀರು, ಬಿಸ್ಕತ್, ಜ್ಯೂಸ್, ಚಾಕೋಲೇಟ್ ಇನ್ನಿತರೆ ತಿಂಡಿ-ತಿನಿಸುಗಳನ್ನು ನೀಡುವ ಮೂಲಕ ನೆರವಾದರು. ಬೆಳಗ್ಗೆಯಿಂದಲೇ ಸೀಟು ಹಿಡಿದು ಮೆರವಣಿಗೆ ನೋಡಲು ಕುಳಿತಿದ್ದ ಜನರಿಗೆ ಮೇಲಿಂದ ಮೇಲೆ ಈ ಸಂಘಟನೆಗಳು ನೀರು ಪೂರೈಸಿದವು.



ರಸ್ತೆಗಿಳಿದವರಿಗೆ ಲಾಠಿ ರುಚಿ

ಜಂಬೂಸವಾರಿ ಆರಂಭವಾಗುತ್ತಿದ್ದಂತೆ ಸಯ್ಯಾಜಿರಾವ್ ರಸ್ತೆಯಲ್ಲಿ ಅಲರ್ಟ್ ಆದ ಪೊಲೀಸರು, ರಸ್ತೆ ಬದಿಯಲ್ಲಿ ಹಾಕಿದ್ದ ಬ್ಯಾರಿಕೇಡ್‌ಗಳನ್ನು ದಾಟಿ ಬಂದವರಿಗೆ ಲಾಠಿ ರುಚಿ ತೋರಿಸಿದರು. ಅರಮನೆ ಆವರಣದಿಂದ ಸ್ತಬ್ಧಚಿತ್ರಗಳು ಸಾಗುತ್ತಾ ಬರುತ್ತಿರುವುದನ್ನು ಗಮನಿಸಿದ ಪೊಲೀಸರು, ರಸ್ತೆಗೆ ಯಾರು ಇಳಿಯದಂತೆ ಎಚ್ಚರ ವಹಿಸಿದರು. ಈ ವೇಳೆ ಅಲ್ಲಲ್ಲಿ ಬ್ಯಾರಿಕೇಡ್‌ಗಳ ನಡುವೆ ನುಸುಳುತ್ತಿದ್ದವರಿಗೆ ಗದರಿಸಿದರಲ್ಲದೆ ಲಾಠಿಯಿಂದ ಬಾರಿಸಿದರು. ಪೊಲೀಸರ ಏಟಿಗೂ ಜಗ್ಗದ ಕೆಲವರು ಕುಂಟು ನೆಪಗಳನ್ನು ಹೇಳುತ್ತಾ ಅವಕಾಶ ಸಿಕ್ಕ ಸಿಕ್ಕಲ್ಲೇ ಕುಳಿತು ಜಂಬೂಸವಾರಿ ವೀಕ್ಷಿಸಿದರು.



ಜಂಬೂಸವಾರಿಯಲ್ಲಿ ಹೆಲಿಕಾಪ್ಟರ್ ಹಾರಾಟ!



ಮೈಸೂರು,ಅ.5(ಪಿಎಂ)–ಜಂಬೂಸವಾರಿ ಮೆರವಣಿಗೆಯ ಸ್ತಬ್ಧಚಿತ್ರಗಳ ಸಾಲಿನಲ್ಲಿ ಹೆಲಿಕಾಪ್ಟರ್ ಹಾರಿ ಬಂದು ಕೌತುಕ ಮೂಡಿಸಿತು! ಒಂದಲ್ಲಾ, ಮೂರ‍್ನಾಲ್ಕು ಹೆಲಿಕಾಪ್ಟರ್‌ಗಳ ಹಾರಾಟ ನೋಡುಗರಲ್ಲಿ ರೋಮಾಂಚನ ಉಂಟುಮಾಡಿತು!!

ಹೆಲಿಕಾಪ್ಟರ್‌ಗಳು ಹಾರಾಟ ಮಾಡಿದ್ದು ನಿಜ. ಆದರೆ ಅವು ನೈಜವಾದವಲ್ಲ. ತುಮಕೂರು ಜಿಲ್ಲೆಯ ಸ್ತಬ್ಧಚಿತ್ರದ ವಿಶೇಷವಿದು. ತುಮಕೂರು ಜಿಲ್ಲೆಯ ಬಿದರಹಳ್ಳಿ ಕಾವಲಿನಲ್ಲಿ 610 ಎಕರೆ ಪ್ರದೇಶದಲ್ಲಿ ರಾಜ್ಯದ 2ನೇ ಹೆಲಿಕಾಪ್ಟರ್ ತಯಾರಿಕಾ ಘಟಕ ಸ್ಥಾಪನೆ ಮಾಡಲಾಗಿದೆ. ಇದರ ಪ್ರತಿರೂಪ ತುಮಕೂರು ಜಿಲ್ಲೆಯ ಸ್ತಬ್ಧ ಚಿತ್ರದಲ್ಲಿ ಅನಾವರಣಗೊಂಡಿತ್ತು.

ಉದ್ಘಾಟನೆಗೆ ಸಜ್ಜಾಗಿರುವ ಈ ಘಟಕ ಉದ್ಯೋಗ ಸೃಷ್ಟಿಯ ಜೊತೆಗೆ ವಾರ್ಷಿಕ ಎರಡು ಸಾವಿರ ಕೋಟಿ ವಹಿವಾಟು ನಡೆಸಲಿದೆ. ಸ್ತಬ್ಧಚಿತ್ರದಲ್ಲಿ ಈ ಘಟಕದ ಪ್ರತಿರೂಪವು ಕಲಾಕೃತಿ ಸ್ವರೂಪದಲ್ಲಿ ಹೆಲಿಕಾಪ್ಟರ್‌ಗಳನ್ನು ಅನಾವರಣಗೊಳಿಸಿತ್ತು. ಜೊತೆಗೆ ಪಾವಗಡದ 13 ಸಾವಿರ ಎಕರೆ ಪ್ರದೇಶದಲ್ಲಿ ನಿರ್ಮಾಣವಾಗಿರುವ ವಿಶ್ವದ ಮೊದಲ ಬೃಹತ್ ಸೋಲಾರ್ ಪಾರ್ಕ್‌ನ ಪ್ರತಿಕೃತಿಯೂ ಇದೇ ಸ್ತಬ್ಧಚಿತ್ರದಲ್ಲಿ ಮೂಡಿಬಂದಿತ್ತು.


ಬ್ಯಾರಿಕೇಡ್ ಮುರಿದು ನುಗ್ಗಿದ ಜನ...!



ಚಿನ್ನದ ಅಂಬಾರಿ ಹೊತ್ತ ಅಭಿಮನ್ಯು ಆಯುರ್ವೇದ ಆಸ್ಪತ್ರೆ ವೃತ್ತಕ್ಕೆ ಆಗಮಿಸುತ್ತಿದ್ದಂತೆ ಎದ್ದು ನಿಂತ ನೂರಾರು ಭಕ್ತರು ವೃತ್ತದಲ್ಲಿ (ಕೆ.ಆರ್.ಆಸ್ಪತ್ರೆ ಮುಖ್ಯ ದ್ವಾರದ ಕಡೆಗೆ) ಅಳವಡಿಸಿದ್ದ ಬ್ಯಾರಿಕೇಡ್‌ಗಳನ್ನು ಮುರಿದು ನುಗ್ಗಿದರು.

ಕಬ್ಬಿಣದ ಬ್ಯಾರಿಕೇಡ್‌ಗಳ ಜೊತೆಗೆ ಮರದ ದಿಮ್ಮಿಗಳನ್ನು ಅಳವಡಿಸಿ, ಅವುಗಳಿಗೆ ಅಡ್ಡವಾಗಿ ನಿಂತಿದ್ದ ಪೊಲೀಸರನ್ನು ಒಮ್ಮೆಗೆ ಜೋರಾಗಿ ನೂಕಿದ ಭಕ್ತರು ಬ್ಯಾರಿಕೇಡ್‌ಗಳನ್ನು ನೆಲಕ್ಕುರುಳಿಸಿ ಅಂಬಾರಿಯತ್ತ ಓಡಿದರು. ಇದರಿಂದ ಕೆಲ ಹೊತ್ತು ಗೊಂದಲದ ವಾತಾವರಣ ಸೃಷ್ಟಿಯಾಯಿತು. ಬಳಿಕ ಎಚ್ಚೆತ್ತ ಪೊಲೀಸರು ಓಡುತ್ತಿದ್ದ ಭಕ್ತರನ್ನು ತಡೆದು ಬ್ಯಾರಿಕೇಡ್ ಸರಿಪಡಿಸಿದರು. ನುಗ್ಗಿ ಬಂದ ಭಕ್ತರನ್ನು ತಡೆಯಲು ಪೊಲೀಸರು ಭಾರೀ ಸಾಹಸವನ್ನೇ ಮಾಡಬೇಕಾಯಿತು.

ಅಭಿಮನ್ಯು ಬಗ್ಗೆ ಡಿಸಿಎಫ್ ಪ್ರಶಂಸೆ




ಮೈಸೂರು,ಅ.5(ಎಂಕೆ)–ಚಾಮುಂಡೇಶ್ವರಿ ಅನುಗ್ರಹದಿಂದ ಈ ವರ್ಷದ ದಸರಾ ಜಂಬೂಸವಾರಿ ಯಶಸ್ವಿಯಾಗಿದ್ದು, 2 ಗಂಟೆ 15 ನಿಮಿಷದಲ್ಲಿ ಅಭಿಮನ್ಯು ಅಂಬಾರಿ ಹೊತ್ತು ತಲುಪಿದ್ದಾನೆ ಎಂದು ಡಿಸಿಎಫ್ ಕರಿಕಾಳನ್ ಹರ್ಷ ವ್ಯಕ್ತಪಡಿಸಿದರು. ಜಂಬೂಸವಾರಿ ಮೆರವಣಿಗೆ ಪೂರ್ಣಗೊಂಡ ಬಳಿಕ ಬನ್ನಿಮಂಟಪ ಪಂಜಿನ ಕವಾಯತು ಮೈದಾನದಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಕಳೆದ 60 ದಿನಗಳು ಮಾವುತರು, ಕಾವಾಡಿಗಳು, ಅರಣ್ಯ ಸಿಬ್ಬಂದಿ ಪರಿಶ್ರಮದಿಂದಾಗಿ ಯಾವುದೇ ಅಡ್ಡಿ-ಆತಂಕ ಇಲ್ಲದಂತೆ ನಿರಾಯಾಸವಾಗಿ ಅಭಿಮನ್ಯು ಅಂಬಾರಿ ಹೊತ್ತು ಸಾಗಿದ್ದಾನೆ. ಬೆಳಗ್ಗೆ ಹಾಗೂ ರಾತ್ರಿ ಹೊತ್ತು ತರಬೇತಿ ನೀಡಿದ್ದರಿಂದ ತುಂಬಾ ಅನುಕೂಲವಾಯಿತು ಎಂದರು.

ಅಭಿಮನ್ಯು ಎಲ್ಲರ ನಿರೀಕ್ಷೆಯಂತೆ ತನ್ನ ಜವಾಬ್ದಾರಿ ನಿರ್ವಹಿಸಿದ್ದಾನೆ. ಇದು ಇಡೀ ತಂಡಕ್ಕೆ ಸಿಕ್ಕಿರುವ ಯಶಸ್ಸಾಗಿದೆ. ಎಲ್ಲರಿಗೂ ಈ ಮೂಲಕ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಕಣ್ಮರೆಯಾದ ಎಲ್‌ಇಡಿ ಪರದೆಗಳು...!



ಜಂಬೂಸವಾರಿ ಮಾರ್ಗದುದ್ದಕ್ಕೂ ಅಲ್ಲಲ್ಲಿ ಕಾಣುತ್ತಿದ್ದ ಎಲ್‌ಇಡಿ ಸ್ಕ್ರೀನ್‌ಗಳು ಈ ಬಾರಿ ಕಣ್ಮರೆಯಾಗಿದ್ದವು. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಜಂಬೂಸವಾರಿ ಸಾಗುವ ಸಯ್ಯಾಜಿರಾವ್ ರಸ್ತೆಯಲ್ಲಿ 25ರಿಂದ 30 ಸ್ಥಳಗಳಲ್ಲಿ ಎಲ್‌ಇಡಿ ಸ್ಕ್ರೀನ್‌ಗಳನ್ನು ಅಳವಡಿಸಿ ನೇರ ಪ್ರಸಾರ ವೀಕ್ಷಣೆಗೆ ಅನುಕೂಲ ಮಾಡಿಕೊಡಲಾಗುತ್ತಿತ್ತು. ಆದರೆ ಈ ವರ್ಷ ಎಲ್‌ಇಡಿ ಸ್ಕ್ರೀನ್‌ಗಳಿಲ್ಲದೆ ಇದ್ದಿದ್ದರಿಂದ ರಾಜ ಮಾರ್ಗದಲ್ಲಿ ಕಳೆಗಟ್ಟುತ್ತಿದ್ದ ಸಂಭ್ರಮ ಕಡಿಮೆಯಾದಂತಿತ್ತು. ಬೆಳಗ್ಗೆಯಿಂದ ಅರಮನೆ ಆವರಣದಲ್ಲಿ ನಡೆಯುವ ವಿಶೇಷ ಪೂಜಾ ಕೈಂಕರ್ಯ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು, ನಂದಿಧ್ವಜ ಪೂಜೆ, ಅಂಬಾರಿಗೆ ಪುಷ್ಪಾರ್ಚನೆ ಸೇರಿದಂತೆ ಹಲವು ಅವಿಸ್ಮರಣೀಯ ಕ್ಷಣಗಳನ್ನು ನೋಡುವ ಭಾಗ್ಯ ರಸ್ತೆ ಬದಿಯಲ್ಲಿ ಕುಳಿತಿದ್ದವರಿಗೆ ಇಲ್ಲದಂತಾಯಿತು. ಬೆಳಗ್ಗೆಯಿಂದಲೇ ಜಾಗ ಹಿಡಿದು ಕುಳಿತಿದ್ದವರು ಕಲಾತಂಡಗಳು ತಾವಿರುವ ಸ್ಥಳಕ್ಕೆ ಬರುವವರೆಗೂ ಏನಾಗುತ್ತಿದೆ ಎಂಬುದು ತಿಳಿಯದೆ ಗೊಂದಲದಲ್ಲೇ ಕಾಲ ಕಳೆಯುವಂತಾಯಿತು.

ಮೈಕ್‌ನಲ್ಲಿ ಪ್ರಚಾರ: ಎಲ್‌ಇಡಿ ಸ್ಕ್ರೀನ್ ಇಲ್ಲದ ಕೊರಗನ್ನು ನೀಗಿಸಲು ಆಯುರ್ವೇದಿಕ್ ವೃತ್ತದ ಬಳಿ ಸಾಂಸ್ಕೃತಿಕ ಸೇವಾ ಟ್ರಸ್ಟ್ ಹಾಗೂ ಜನಚೇತನ ಟ್ರಸ್ಟ್ ವತಿಯಿಂದ ಮೈಕ್ ಮೂಲಕ ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಕಲಾತಂಡಗಳು ಹಾಗೂ ಸ್ತಬ್ಧ ಚಿತ್ರಗಳ ಮಾಹಿತಿ ನೀಡುವ ಪ್ರಯತ್ನ ಮಾಡಲಾಯಿತು. ಇಲ್ಲಿ ನಿವೃತ್ತ ಪ್ರಾಧ್ಯಾಪಕ ಪ್ರೊ.ಮಹದೇವ್, ಮುಡಾ ಸದಸ್ಯೆ ಲಕ್ಷ್ಮಿದೇವಿ, ರಾಮ್‌ಪ್ರಸಾದ್, ದೇವರಾಜು, ಪದ್ಮಾ, ಬೆಟ್ಟೇಗೌಡ ಮತ್ತಿತರರಿದ್ದರು.

ನಿಷೇಧಿಸಿದ್ದರೂ ಮಾರ್ದನಿಸಿದ ತುತ್ತೂರಿ

ಸಾರ್ವಜನಿಕರಿಗೆ ಕಿರಿಕಿರಿ ಉಂಟಾಗುತ್ತದೆ ಎಂದು ನಿಷೇಧಿಸಿದ್ದ ತುತ್ತೂರಿಗಳ ಅಬ್ಬರ ಜೋರಾಗಿಯೇ ಇತ್ತು. ಸಯ್ಯಾಜಿರಾವ್ ರಸ್ತೆಬದಿ ಯುದ್ದಕ್ಕೂ ಕುಳಿತಿದ್ದ ಬಹುತೇಕ ಯುವಕ-ಯುವತಿಯರು ಹಾಗೂ ಮಕ್ಕಳ ಕೈಯಲ್ಲಿ ತುತ್ತೂರಿ ಗಳಿದ್ದವು. ಕಲಾತಂಡಗಳ ತಾಳವಾದ್ಯಕ್ಕಿಂತಲೂ ತುತ್ತೂರಿಗಳ ಶಬ್ದವೇ ಜೋರಾಗಿತ್ತು. ಇದರಿಂದ ಹಲವು ಮಂದಿ ಕಿರಿಕಿರಿ ಅನುಭವಿಸುವಂತಾಯಿತು. ಕೆಲ ಮಹಿಳೆಯರಂತೂ ತುತ್ತೂರಿ ಊದುತ್ತಿದ್ದವರ ಮೇಲೆ ಎರಗಿಬಿದ್ದದ್ದು ಉಂಟು.



ಕಲಾವಿದರಿಂದ ಭರಪೂರ ಮನರಂಜನೆ...



ಜಂಬೂಸವಾರಿ ಮೆರವಣಿಗೆಯಲ್ಲಿ ಸಾಗುತ್ತಿದ್ದ ಕಲಾತಂಡಗಳ ಕಲಾವಿದರು ನೋಡುಗರಿಗೆ ಭರಪೂರ ಮನರಂಜನೆ ನೀಡಿದರು. ಗಾರುಡಿ ಗೊಂಬೆಗಳ ವೇಷತೊಟ್ಟ ಕಲಾವಿದರು, ಆಂಜನೇಯ ವೇಷಧಾರಿಗಳು ರಸ್ತೆ ಬದಿಯಲ್ಲಿ ಕುಳಿತಿದ್ದವರ ಬಳಿ ಹೋಗಿ ಕೈ ಕುಲುಕಿ ಪುಟಾಣಿ ಮಕ್ಕಳನ್ನು ನಲಿಯುವಂತೆ ಮಾಡಿದರು. ಆಂಜನೇಯ ವೇಷಧಾರಿಗಳು ಅತ್ತಿತ್ತಾ ನೆಗೆದು ನೋಡುಗರನ್ನು ಚಕಿತರನ್ನಾಗಿಸಿದರು.

ಮಂಗಳಮುಖಿಯರ ದೀರ್ಘದಂಡಾ ನಮಸ್ಕಾರ...



ಜಂಬೂಸವಾರಿ ಸಯ್ಯಾಜಿರಾವ್ ರಸ್ತೆಯ ತಿಲಕ್‌ನಗರ ಸಿಗ್ನಲ್ ಬಳಿ ಬರುತ್ತಿದ್ದಂತೆ ಮರದ ಬ್ಯಾರಿಕೇಡ್‌ಗಳಿಂದ ನುಸುಳಿಕೊಂಡು ಒಳ ಬಂದ ಮಂಗಳಮುಖಿಯರು ತಾಯಿ ಚಾಮುಂಡೇಶ್ವರಿಗೆ ಜೈಕಾರ ಕೂಗಿದರಲ್ಲದೆ ರಸ್ತೆಯಲ್ಲೇ ದೀರ್ಘ ದಂಡಾ ನಮಸ್ಕಾರ ಮಾಡಿದರು. ಜೈ ಚಾಮುಂಡೇಶ್ವರಿ ಎಂದು ಕೈ ಮುಗಿದು ಕೂಗಿದ ಅವರು, ಅಂಬಾರಿ ಎದುರು ನಿಂತು ಫೋಟೋ ಕ್ಲಿಕ್ಕಿಸಿಕೊಂಡು ಸಂಭ್ರಮಿಸಿದರು. ಕೆಲ ದೂರ ಅಂಬಾರಿ ಮುಂದೆಯೇ ಸಾಗಿ ಬಂದು ನಂತರ ತಾವು ಕುಳಿತಿದ್ದ ಸ್ಥಳಕ್ಕೆ ಮರಳಿದರು. ಮಂಗಳಮುಖಿಯರಿಗೆ ಯಾವುದೇ ತೊಂದರೆ ನೀಡದ ಪೊಲೀಸರು ಸ್ವಲ್ಪ ದೂರದಿಂದಲೇ ಅಂಬಾರಿ ನೋಡುವುದಕ್ಕೆ ಅವಕಾಶ ಮಾಡಿಕೊಟ್ಟು, ಬಳಿಕ ಕಳುಹಿಸಿದರು.

ಪೊಲೀಸರ ಎಚ್ಚರಿಕೆಗೂ ಜಗ್ಗದ ಜನತೆ

ನಿಷೇಧವಿದ್ದರೂ ಶಿಥಿಲ ಲ್ಯಾನ್ಸ್‌ಡೌನ್ ಕಟ್ಟಡ ಏರಿದ್ದ ಸಾವಿರಾರು ಜನ?!




ಮೈಸೂರು, ಅ.5(ಆರ್‌ಕೆಬಿ)- ಶಿಥಿಲ ಕಟ್ಟಡ, ಮರಗಳ ರೆಂಬೆ ಮೇಲೆ ಕುಳಿತು ಮೆರವಣಿಗೆ ವೀಕ್ಷಿಸಬಾರದು ಎಂದು ಪೊಲೀಸರು ಎಚ್ಚರಿಕೆ ನೀಡಿದ್ದರೂ ಜನರು ಇದಕ್ಕೆ ಕಿವಿಗೊಡಲೇ ಇಲ್ಲ. ಅಪಾಯವನ್ನು ಲೆಕ್ಕಿಸದೆ ಶಿಥಿಲ ಕಟ್ಟಡಗಳು, ಮರಗಳ ರೆಂಬೆ ಮೇಲೇರಿ ದಸರಾ ಮೆರವಣಿಗೆ ವೀಕ್ಷಿಸಿದರು.

ತೀರಾ ಶಿಥಿಲಗೊಂಡಿರುವ ಲ್ಯಾನ್ಸ್ ಡೌನ್ ಕಟ್ಟಡದ ಮೇಲೆ ಸಾವಿರಾರು ಜನ ಅಪಾಯವನ್ನೂ ಲೆಕ್ಕಿಸದೆ ಕುಳಿತು ದಸರಾ ಮೆರವಣಿಗೆ ವೀಕ್ಷಿಸಿದರು. 10 ವರ್ಷಗಳ ಹಿಂದೆ ಮಳೆ ಸಂದರ್ಭದಲ್ಲಿ ಲ್ಯಾನ್ಸ್‌ಡೌನ್ ಕಟ್ಟಡದ ಒಂದು ಭಾಗ ಕುಸಿದು ಸಾವು ನೋವುಗಳು ಸಂಭವಿಸಿತ್ತು. ಆ ನಂತರ ಪಾರಂಪರಿಕ ಈ ಕಟ್ಟಡ ಮರು ನಿರ್ಮಾಣದ ಬಗ್ಗೆ ವಿವಾದಗಳು ಎದ್ದಿದ್ದವು. ಕಟ್ಟಡ ಯಾವಾಗ ಬೇಕಾದರೂ ಕುಸಿಯಬಹುದು ಎಂಬ ಆತಂಕದಿಂದಾಗಿ ಅಲ್ಲಿದ್ದ ಅಂಗಡಿಗಳ ಎಲ್ಲಾ ವ್ಯಾಪಾರಸ್ಥರನ್ನು ಸ್ಥಳಾಂತರಿಸಲಾಗಿತ್ತು. ನಂತರ ಜಿಲ್ಲಾಡಳಿತ ಕಟ್ಟಡದ ಬಳಕೆಯನ್ನು ಸ್ಥಗಿತಗೊಳಿಸಿತ್ತು.

ಆದರೆ ಇಂದು ಮೆರವಣಿಗೆ ವೀಕ್ಷಿಸಲು ಸಾವಿರಾರು ಮಂದಿ ಕಟ್ಟಡ ಏರಿದ್ದರು. ಆದರೆ ಮೆರವಣಿಗೆ ಬಂದೋಬಸ್ತ್‌ನ ಒತ್ತಡದಲ್ಲಿದ್ದ ಪೊಲೀಸರು ಅತ್ತ ಗಮನಹರಿಸಲಿಲ್ಲ. ಭಾರೀ ಅಪಾಯದ ಮುನ್ಸೂಚನೆ ಇದ್ದರೂ ಜನ ಕಟ್ಟಡ ಏರಿ ಕುಳಿತು ಆತಂಕ ಸೃಷ್ಟಿಸಿದ್ದರು. ಅದೃಷ್ಟವಶಾತ್ ಯಾವುದೇ ಅನಾಹುತ ಸಂಭವಿಸಲಿಲ್ಲ ಎಂಬುದೇ ಸಮಾಧಾನಪಡುವ ಸಂಗತಿ.

ದಶಮಂಟಪಗಳ ಮೆರವಣಿಗೆಯೊಂದಿಗೆ ವೈಭವದ ದಸರಾ

ಸಾವಿರಾರು ಜನರಿಂದ ವೀಕ್ಷಣೆ, ದೇವಲೋಕವೇ ಸೃಷ್ಟಿಸಿದ ಸುಂದರ ಕ್ಷಣ





ಮಡಿಕೇರಿ,ಅ.5– ಕೊಡಗನ್ನಾಳಿದ ಹಾಲೇರಿ ರಾಜವಂಶಸ್ಥರ ಅವಧಿಯಲ್ಲಿ ಆರಂಭಗೊಂಡು ಎರಡು ಶತಮಾನಕ್ಕೂ ಹೆಚ್ಚಿನ ಐತಿಹಾಸಿಕ ಹಿನ್ನೆಲೆಯ ಮಡಿಕೇರಿ ದಸರಾ ಉತ್ಸವದ ದಶಮಂಟಪಗಳ ಶೋಭಾಯಾತ್ರೆ ವಿಜೃಂಭಣೆಯಿಂದ ನಡೆಯಿತು.

ಕಾಲಿಡಲು ಸ್ಥಳವಿಲ್ಲದಂತೆ ಕಿಕ್ಕಿರಿದು ನೆರೆದಿದ್ದ ಸಹಸ್ರಾರು ಪ್ರೇಕ್ಷಕರ ಸಮ್ಮುಖದಲ್ಲಿ ದಶಮಂಟಪಗಳು ದೇವ ಲೋಕವನ್ನೇ ಧರೆಗಿಳಿಸುವ ಮೂಲಕ 'ದುಷ್ಟ ಸಂಹಾರ ಶಿಷ್ಟ ಪರಿಪಾಲನೆಯ' ಸಂದೇಶ ಸಾರಿದವು. ಆ ಮೂಲಕ ದಸರಾ ವೀಕ್ಷಣೆಗೆ ಆಗಮಿಸಿದ್ದ ಮಂದಿ ಮಡಿಕೇರಿ ದಸರಾ ವೈಭವವನ್ನು ಕಣ್ತುಂಬಿಕೊಂಡು ಸಂಭ್ರಮಿಸಿದರು.

ಕಳೆದ 4 ವರ್ಷಗಳಿಂದ 'ಸರಳ ದಸರಾ' ನೆರಳಲ್ಲಿ ಯಾವುದೇ ಅದ್ದೂರಿತನವಿಲ್ಲದೇ ದಸರಾ ಹಬ್ಬವನ್ನು ಸಂಪ್ರದಾಯದಂತೆ ನಡೆಸಲಾಗಿತ್ತು. ಆದರೆ ಈ ಬಾರಿ ಅದ್ದೂರಿಯ ಉತ್ಸವ ನಡೆಸಲು ಮಡಿಕೇರಿ ದಸರಾ ಸಮಿತಿ ಹಾಗೂ ದಶಮಂಟಪಗಳು ನಿರ್ಧರಿಸಿದ್ದರಿಂದ ದಸರಾ ಉತ್ಸವ ಅತ್ಯಂತ ವಿಜೃಂಭಣೆಯಿಂದ ನೆರವೇರಿತು.

ಸಂಪ್ರದಾಯದಂತೆ ನಗರದ ಪೇಟೆ ಶ್ರೀ ರಾಮಮಂದಿರದ ಆಕರ್ಷಕ ಮಂಟಪಕ್ಕೆ ಬುಧವಾರ ರಾತ್ರಿ ಚಾಲನೆ ನೀಡುವ ಮೂಲಕ ದಶ ಮಂಟಪಗಳ ಶೋಭಾಯಾತ್ರೆ ಆರಂಭವಾಯಿತು. ಒಂದೂವರೆ ಶತಮಾನದ ಭವ್ಯ ಇತಿಹಾಸ ಹೊಂದಿರುವ ಪೇಟೆ ಶ್ರೀರಾಮ ಮಂದಿರದ 'ಋಷಿ ಮುನಿಗಳ ತಪಸಿಗೆ ಒಲಿಯುವ ಶಿವ ಪಾರ್ವತಿ' ಪೌರಾಣಿಕ ಕಥೆಯನ್ನಾಧರಿಸಿದ ಮಂಟಪ ನಾಲ್ಕು ಶಕ್ತಿ ದೇವತೆಗಳ ದೇಗುಲಕ್ಕೆ ತೆರಳುವ ಮೂಲಕ ಅಲ್ಲಿನ ಮಂಟಪಗಳನ್ನು ಶೋಭಾಯಾತ್ರೆಗೆ ಆಹ್ವಾನಿಸಿತು.

ವಿಜೃಂಭಣೆಯ ಶೋಭಾಯಾತ್ರೆ: ಪೇಟೆ ಶ್ರೀ ರಾಮಮಂದಿರರ ಮಂಟಪದ ಆಗಮನದೊಂದಿಗೆ ಶ್ರೀ ಕುಂದುರುಮೊಟ್ಟೆ ಚೌಟಿ ಮಾರಿಯಮ್ಮ ದೇವಾಲಯದಿಂದ ಆರಂಭಗೊಂಡ ಮಂಟಪ 'ಶಿವನಿಂದ ಅಂಧಕಾಸುರ ವಧೆ' ಕಥಾ ಭಾಗವನ್ನಾಧರಿಸಿದ ಕಲಾಕೃತಿಗಳೊಂದಿಗೆ ಶೋಭಾಯಾತ್ರೆ ನಡೆಸಿತು. ಶ್ರೀ ಕಂಚಿ ಕಾಮಾಕ್ಷಿಯಮ್ಮ ದೇವಾಲಯದ ಮಂಟಪದಲ್ಲಿ ಈ ಬಾರಿ 'ಗೋಮಾತೆಯ ಮಹಿಮೆ' ಎಂಬ ಕಥಾ ಹಂದರವನ್ನು ಮಂಟಪದಲ್ಲಿ ಅಳವಡಿಸಲಾಗಿತ್ತು. ಶ್ರೀಕೋಟೆ ಮಾರಿಯಮ್ಮ ದೇವಾಲಯ 'ಸೀತಾಪಹರಣ ರಾವಣನ ಸಂಹಾರ' ಎಂಬ ಪೌರಾಣಿಕ ಹಿನ್ನೆಲೆಯ ಮಂಟಪ ಸಿದ್ಧಪಡಿಸಿ ಶೋಭಾಯಾತ್ರೆಯಲ್ಲಿ ಪಾಲ್ಗೊಂಡರೆ, ಶ್ರೀ ದಂಡಿನ ಮಾರಿಯಮ್ಮ ದೇವಾಲಯದ 'ಭೂಲೋಕ ರಕ್ಷಣೆಗಾಗಿ ಪಾರ್ವತಿಯ ಶಾಖಾಂಭರಿ ರೂಪ' ಎಂಬ ಕಥಾಭಾಗವನ್ನು ಮಂಟಪದಲ್ಲಿ ಅಳವಡಿಸಿ, ಶೋಭಾಯಾತ್ರೆ ನಡೆಸಿತು.


ಶ್ರೀಕೋಟೆ ಮಹಾಗಣಪತಿ ದೇವಾಲಯ ಮಂಟಪದಲ್ಲಿ 'ಮಹಾ ಗಣಪತಿಗೆ ಸಿಂಧೂರ ಗಣಪತಿ ನಾಮ ಪ್ರಾಪ್ತಿ' ಎಂಬ ಕಥಾ ಸಾರಾಂಶವನ್ನು ಅಳವಡಿಸಲಾಗಿತ್ತು. ಶ್ರೀ ಕೋದಂಡ ರಾಮ ದೇವಾಲಯ ಷಣ್ಮುಖನಿಂದ ತಾರಾಕಾಸುರನ ವಧೆ' ಎಂಬ ಸಾರಾಂಶ ಹೊಂದಿದ್ದರೆ, ಶ್ರೀಕರವಲೆ ಭಗವತಿ ಮಹಿಷ ಮರ್ಧಿನಿ ದೇವಾಲಯದ ಗಣಪತಿಯಿಂದ ಗಜಾಸುರನ ವಧೆ, ದೇಚೂರು ಶ್ರೀ ರಾಮಮಂದಿರದ 'ವಿಷ್ಣುವಿನಿಂದ ಮಧುಕೈಟಬರ ಸಂಹಾರ' ಶ್ರೀ ಚೌಡೇಶ್ವರಿ ದೇವಾಲಯದ ಮಂಟಪದಲ್ಲಿ 'ಆದಿ ಶಕ್ತಿಯಿಂದ ಶುಂಭ ನಿಶುಂಭರ ಸಂಹಾರ' ಕಥಾಭಾಗವನ್ನು ಹೊಂದಿದ ಮಂಟಪಗಳು ಜನಮನವನ್ನು ಸೂರೆಗೊಂಡವು. ಎಲ್ಲಾ 10 ಮಂಟಪಗಳಲ್ಲೂ ಪೌರಾಣಿಕ ಕಥಾ ಹಂದರಕ್ಕೆ ತಕ್ಕಂತೆ ಕಲಾಕೃತಿಗಳನ್ನು ಅಳವಡಿಸಲಾಗಿತ್ತು. ಆಕರ್ಷಕ ದಿಂಡಿಗಲ್ ಲೈಟ್ ಬೋರ್ಡ್, ಕಥಾ ಸಾರಾಂಶದ ಕಲಾಕೃತಿಗಳ ಚಲನವಲನ ಆಧರಿಸಿ ಸ್ಪಾಟ್ ಲೈಟ್‌ಗಳು, ದೇವಾನುದೇವತೆಗಳು ಹಾಗೂ ದುಷ್ಟ ಶಕ್ತಿಗಳ ನಡುವಿನ ಸಂಹಾರ ಯುದ್ಧದ ಸನ್ನಿವೇಶಗಳಲ್ಲಿ ಭೂಮಿಯನ್ನೇ ನಡುಗಿಸುವ ರೀತಿಯಲ್ಲಿದ್ದ ಸಂಭಾಷಣೆಗೆ ಹೊಂದಿಕೆಯಾಗುವ ಡಿ.ಜೆ. ಸೌಂಡ್‌ಗಳನ್ನು ಅಳವಡಿಸಲಾಗಿತ್ತು. ದಶಮಂಟಪಗಳು ದುಷ್ಟ ಸಂಹಾರದ ಪ್ರದರ್ಶನ ನೀಡಿದ ಸಂದರ್ಭ ಎಲ್ಲೆಡೆ ಶಾಂತಿ ಮಂತ್ರ ಘೋಷ ಮೊಳಗಿದವು. ವಿಜಯದಶಮಿಯ ದಿನವಾದ ಬುಧವಾರ ಮಧ್ಯಾಹ್ನದವರೆಗೆ ಇದ್ದ ಬಿಸಿಲು ಬಳಿಕ ಮರೆಯಾಗಿ ಮೋಡ ಕವಿದ ವಾತಾವರಣ ನಿರ್ಮಾಣವಾಗಿತ್ತು. ಹೀಗಿದ್ದರೂ ನಿರೀಕ್ಷೆಯಂತೆ ಸಂಜೆಯ ಬಳಿಕ ಜಿಲ್ಲೆ ಹಾಗೂ ಹೊರ ಜಿಲ್ಲೆಗಳ ಸಹಸ್ರಾರು ಮಂದಿ ಐತಿಹಾಸಿಕ ನಗರಿ ಮಡಿಕೇರಿಗೆ ಆಗಮಿಸುವುದರೊಂದಿಗೆ ಮಂಜಿನ ನಗರಿಯ ದಸರಾ ಸಂಭ್ರಮದಲ್ಲಿ ತೇಲಿದರು.

ಬಿಗಿ ಬಂದೋಬಸ್ತ್: ಮಡಿಕೇರಿ ದಸರಾಕ್ಕೆ ಜನ ಪ್ರವಾಹವೇ ಹರಿದು ಬರುವ ನಿರೀಕ್ಷೆ ಇದ್ದ ಹಿನ್ನೆಲೆಯಲ್ಲಿ ಪೊಲೀಸ್ ಇಲಾಖೆ ಬಿಗಿ ಬಂದೋಬಸ್ತ್ ವ್ಯವಸ್ಥೆ ಮಾಡಿತ್ತು. ನಗರ ಪ್ರವೇಶಿಸುವ ಎಲ್ಲಾ ರಸ್ತೆಗಳಲ್ಲೂ ಚೆಕ್ ಪೋಸ್ಟ್, ಸಿ.ಸಿ. ಕ್ಯಾಮರಾ ಅಳವಡಿಕೆ ಮಾಡಲಾಗಿತ್ತು. ಮಂಟಪಗಳು ಹಾಗೂ ಜನ ದಟ್ಟಣೆ ಉಂಟಾಗುವ ಸ್ಥಳಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಲಾಗಿತ್ತು. ಶೋಭಾಯಾತ್ರೆ ಸುಗಮವಾಗಿ ಸಾಗಲು ಅನುಕೂಲವಾಗುವಂತೆ ರಸ್ತೆ ಬದಿಯಲ್ಲಿ ನಿಲ್ಲಿಸಿದ್ದ ಎಲ್ಲಾ ವಾಹನಗಳನ್ನು ತೆರವು ಮಾಡಿದ್ದರು. ಮಾತ್ರವಲ್ಲದೇ ಬುಧವಾರ ಮಧ್ಯಾಹ್ನದ ಬಳಿ ವಾಹನಗಳ ನಗರ ಪ್ರವೇಶವನ್ನು ತಡೆ ಹಿಡಿಯಲಾಗಿತ್ತು. ಸ್ಥಳೀಯರು ಮತ್ತು ತುರ್ತು ಸಂದರ್ಭಕ್ಕೆ ಮಾತ್ರವೇ ವಾಹನ ಸಂಚಾರಕ್ಕೆ ಅನುವು ಮಾಡಲಾಗಿತ್ತು. ಜನರಲ್ ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣ, ಆರ್.ಎಂ.ಸಿ. ಮೈದಾನ, ಸಂತ ಜೋಸೆಫರ ಶಾಲಾ ಮೈದಾನ, ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜು ಮೈದಾನಗಳಲ್ಲಿ ಹೊರ ಊರಿನ ಪ್ರವಾಸಿಗರ ವಾಹನಗಳ ಪಾರ್ಕಿಂಗ್ ಮಾಡಲು ಅವಕಾಶ ನೀಡಲಾಗಿತ್ತು.

ಬನ್ನಿ ಕಡಿಯುವ ಮೂಲಕ ದಸರಾ ಉತ್ಸವಕ್ಕೆ ತೆರೆ

ಮಡಿಕೇರಿ ದಸರಾದ ಮೂಲ ಕೇಂದ್ರ ಬಿಂದುವಾದ 4 ಶಕ್ತಿ ದೇವತೆಗಳ ಕರಗಗಳು ಬಣ್ಣಬಣ್ಣದ ಪುಷ್ಪಗಳಿಂದ ಅಲಂಕೃತಗೊಂಡು ತಮ್ಮ ಮೂಲ ಸ್ಥಾನದಲ್ಲಿ ಪೂಜೆ ಸಲ್ಲಿಸಿ ಬನ್ನಿ ಮಂಟಪದತ್ತ ತೆರಳಿದವು. ಶೋಭಾಯಾತ್ರೆಯಲ್ಲಿ ಸಾಗುತ್ತಿದ್ದ ದಶ ಮಂಟಪದಿಂದ ಕರಗಗಳು ಪೂಜೆ ಪಡೆದವು. ಬೆಳಗಿನ ಜಾವ ಬನ್ನಿ ಮಂಟಪಕ್ಕೆ ತೆರಳಿದ ಕರಗಗಳು ಮೊದಲು ಬನ್ನಿ ಕಡಿದು ತಮ್ಮ ಮೂಲ ಸ್ಥಾನಕ್ಕೆ ಆಗಮಿಸಿದವು. ಬಳಿಕ ದಶ ಮಂಟಪಗಳು ಬನ್ನಿ ಕಡಿಯುವ ಮೂಲಕ ದಸರಾ ಉತ್ಸವಕ್ಕೆ ತೆರೆ ಎಳೆದವು.





ಸುಗ್ರೀವಾಜ್ಞೆ ಮೂಲಕ ರಾಷ್ಟ್ರಪತಿಗಳು ಕೊಡವರ ಬೇಡಿಕೆ ಈಡೇರಿಸಲು ಸಿಎನ್‌ಸಿ ಆಗ್ರಹ



ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸುತ್ತಿರುವ ಕೊಡವ ನ್ಯಾಷನಲ್ ಕೌನ್ಸಿಲ್‌ನ ಪದಾಧಿಕಾರಿಗಳು.

ಮಡಿಕೇರಿ,ಅ.5– ಕೊಡವ ಲ್ಯಾಂಡ್ ಸ್ವಾಯತ್ತತೆ ಮತ್ತು ಕೇಂದ್ರಾಡಳಿತ ಪ್ರದೇಶ ಸೇರಿದಂತೆ ವಿವಿಧ ಬೇಡಿಕೆಗಳನ್ನು ರಾಷ್ಟ್ರಪತಿಗಳು ಸುಗ್ರೀವಾಜ್ಞೆಯ ಮೂಲಕ ಈಡೇರಿಸಬೇಕೆಂದು ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಮನವಿ ಮಾಡಿದೆ.

ಜಿಲ್ಲಾಧಿಕಾರಿಗಳ ಕಚೇರಿ ಎದುರು ಧರಣಿ ನಡೆಸಿದ ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಹಾಗೂ ಪ್ರಮುಖರು ಬುಡಕಟ್ಟು ಸಮುದಾಯದ ದ್ರೌಪದಿ ಮುರ್ಮು ಅವರು ರಾಷ್ಟ್ರಪತಿಯಾಗಿ ಅಧಿಕಾರ ಸ್ವೀಕರಿಸಿರುವುದನ್ನು ಕೊಡವ ಮೂಲ ವಂಶಸ್ತ ಜನಾಂಗೀಯ ಬುಡಕಟ್ಟು ಕುಲದ ಪರವಾಗಿ ಅಭಿನಂದನೆ ಸಲ್ಲಿಸುವುದಾಗಿ ತಿಳಿಸಿದರು. ಇವರ ಕಾಲದಲ್ಲಿ ಕೊಡವ ಬುಡಕಟ್ಟು ಜನಾಂಗದ ಬೇಡಿಕೆಗಳು ಈಡೇರಲಿವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸಂತಾಲ ಬುಡಕಟ್ಟು ಸಮುದಾಯದವರಾದ ತಾವು ರಾಷ್ಟ್ರದ ಅಧ್ಯಕ್ಷರಾಗಿ ಚುನಾಯಿತರಾಗಿ ಸಂವಿಧಾನದ ಮುಖ್ಯಸ್ಥರಾಗಿ ಅಧಿಕಾರ ವಹಿಸಿಕೊಂಡ ಸುದಿನವು ಕೊಡವರಂತಹ ಅತ್ಯಂತ ಸೂಕ್ಷ್ಮ ನಗಣ್ಯ ಬುಡಕಟ್ಟು ಸಮುದಾಯದವರ ಪಾಲಿಗೆ ಅವಿಸ್ಮರಣೀಯ ದಿನವಾಗಿದೆ. ಸಂವಿಧಾನ ಶಿಲ್ಪಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ರವರ ಆಶಯವಾದ ವೈವಿಧ್ಯಮಯ ಜನಾಂಗೀಯ ಬಿತ್ತಿಯೊಳಗಿನ ಭಾರತವೆನ್ನುವ ಸುಂದರ ಹೂತೋಟದ ಸರ್ವ ಪುಷ್ಪಗಳು ಸಮಾನಾಂತರವಾಗಿ ಅರೈಕೆಯಲ್ಲಿ ಅರಳುವ ಕಾಲ ಸನ್ನಿಹಿತವಾಗಿದೆ ಎಂದು ಅಭಿಪ್ರಾಯಪಟ್ಟರು.


ಬೇಡಿಕೆಗಳು: ಕೊಡವ ಲ್ಯಾಂಡ್ ಭೂ ರಾಜಕೀಯ ಸ್ವಾಯತ್ತತೆಯನ್ನು ಸಂವಿಧಾನ 371(ಕೆ) ವಿಧಿಯನ್ವಯ ಸ್ಥಾಪಿಸಬೇಕು. ಆಂತರಿಕ ರಾಜಕೀಯ ಸ್ವಯಂ ನಿರ್ಣಯ ಹಕ್ಕು ದಕ್ಕಬೇಕು. ಕೊಡವ ಮೂಲ ವಂಶಸ್ಥ ರೇಸ್‌ಗೆ ಸಂವಿಧಾನದ 340 ಮತ್ತು 342ನೇ ವಿಧಿಯನ್ವಯ ರಾಜ್ಯಾಂಗ ಖಾತ್ರಿ ನೀಡಬೇಕು. ಪ್ರಾಚೀನವು ಸಂಮೃದ್ಧವೂ ಮತ್ತು ಶ್ರೀಮಂತವೂ ಆದ ಕೊಡವತಕ್ಕನ್ನ ಸಂವಿಧಾನದ 8ನೇ ಶೆಡ್ಯೂಲ್‌ಗೆ ಸೇರಿಸಬೇಕು. ಕೊಡವ ತಕ್ಕನ್ನು ಸಂವಿಧಾನದ 347, 350, 350ಎ ಮತ್ತು 350 ಬಿ ವಿಧಿಗಳ ಪ್ರಕಾರ ಪಠ್ಯ ಕ್ರಮದಲ್ಲಿ ಮತ್ತು ಆಡಳಿತಾಂಗದಲ್ಲಿ ಅನುಷ್ಠಾನಗೊಳಿಸಬೇಕು. ಹಾಗೂ ಕರ್ನಾಟಕದ 3ನೇ ಭಾಷೆಯಾಗಿ ಕೊಡವ ತಕ್ಕನ್ನು ಪರಿಗಣಿಸಬೇಕು. ಕೊಡವರ ಧಾರ್ಮಿಕ ಸಂಸ್ಕಾರ ತೋಕ್‌ಗೆ ಸಿಖ್ ಸಮುದಾಯದ ಕಿರ್ಪಾಣ್ ಮಾದರಿಯಲ್ಲಿ ಸಂವಿಧಾನದ 25 ಮತ್ತು 26ನೇ ವಿಧಿ ಪ್ರಕಾರ ಶಾಶ್ವತ ಭದ್ರತೆಒದಗಿಸುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ ಹೆಚ್ಚುವರಿ ಜಿಲ್ಲಾಧಿಕಾರಿ ನಂಜುಂಡೇಗೌಡ ಅವರ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಪತ್ರ ಸಲ್ಲಿಸಿದರು.

ಧರಣಿ ಸತ್ಯಾಗ್ರಹದಲ್ಲಿ ಕೂಪದಿರ ಪುಷ್ಪ ಮುತ್ತಣ್ಣ, ಚೋಳಪಂಡ ಜ್ಯೋತಿ ನಾಣಯ್ಯ ಮತ್ತು ಲೆ.ಕರ್ನಲ್ ಬಿ.ಎಂ. ಪಾರ್ವತಿ, ಕಲಿಯಂಡ ಪ್ರಕಾಶ್, ಬಾಚರಣಿಯಂಡ ಚಿಪ್ಪಣ್ಣ, ಅಜ್ಜಿಕುಟ್ಟಿರ ಲೋಕೇಶ್, ಚೆಂಬಂಡ ಜನತ್‌ಕುಮಾರ್, ಬೊಟ್ಟಂಗಡ ಗಿರೀಶ್, ಅರೆಯಡ ಗಿರೀಶ್, ಬೇಪಡಿಯಂಡ ದಿನು, ಪಟ್ಟಮಾಡ ಕುಶ, ಪುಲ್ಲೇರ ಕಾಳಪ್ಪ, ಕಿರಿಯ ಮಾಡ ಶರೀನ್, ಮಂದಪಂಡ ಮನೋಜ್, ಚೀಯಬೇರ ಸತೀಶ್, ನಂದಿನೆರವಂಡ ವಿಜು, ಮೇದೂರ ಕಂಠಿ, ಕೂಪದೀರ ಸಾಬು, ನಂದಿನೆರವಂಡ ಅಪ್ಪಯ್ಯ, ನಂದಿನೆರವಂಡ ಅಯ್ಯಣ್ಣ, ಮಣುವಟ್ಟಿರ ಚಿಣ್ಣಪ್ಪ, ಪುಟ್ಟಿಚಂಡ ದೇವಯ್ಯ, ಚಂಗಂಡ ಚಾಮಿ ಪಾಲ್ಗೊಂಡಿದ್ದರು.

ಮಾದಪ್ಪನಿಗೆ ವಿಜಯದಶಮಿ ವಿಶೇಷ ಪೂಜೆ

ಬಿಳಿಕುದುರೆ ವಾಹನೋತ್ಸವ, ಉಯ್ಯಾಲೋತ್ಸವ, ಅರಸರ ಒಡವೆ ಅಲಂಕಾರ







ಹನೂರು, ಅ.5–ತಾಲೂಕಿನ ಪ್ರಸಿದ್ಧ ಯಾತ್ರಾ ಕ್ಷೇತ್ರ ಮಲೆಮಹದೇಶ್ವರ ಬೆಟ್ಟದಲ್ಲಿ ಮಾದಪ್ಪನಿಗೆ ವಿಜಯದಶಮಿಯ ಬಲಿಪೂಜೆ, ಬಿಳಿಕುದುರೆ ವಾಹನೋತ್ಸವ, ಉಯ್ಯಾಲೋತ್ಸವ, ಅರಸರ ಒಡವೆ ಅಲಂಕಾರ ಸೇರಿದಂತೆ ವಿವಿಧ ಉತ್ಸವ ಪೂಜಾ ಕೈಂಕರ್ಯ ಸಾಲೂರು ಮಠದ ಪೀಠಾಧ್ಯಕ್ಷ ಶ್ರೀ ಶಾಂತಮಲ್ಲಿಕಾರ್ಜುನಸ್ವಾಮಿಗಳ ನೇತೃತ್ವದಲ್ಲಿ ವಿಧಿ–ವಿಧಾನಗಳೊಂದಿಗೆ ವಿಜೃಂಭಣೆಯಿಂದ ನೆರವೇರಿದವು.

ಬೇಡಗಂಪಣ ಬುಡಕಟ್ಟು ಪರಂಪರೆಯ ಸಂಪ್ರದಾಯದಂತೆ ಮಾದಪ್ಪನಿಗೆ ದಸರಾ ಪೂಜೆ ಹಾಗೂ ಮಹಾನವಮಿಯ ಪೂಜಾ ಕಾರ್ಯಗಳು ನಡೆಸುವುದು ಪದ್ಧತಿ.

ಬಿಳಿಕುದುರೆ ಉತ್ಸವ: ವಿಜಯದಶಮಿಯ ಹಿನ್ನೆಲೆ ಬುಧವಾರ ಉತ್ಸವ ಮೂರ್ತಿಯನ್ನು ಬಿಳಿಕುದುರೆಯ ಮೇಲಿಟ್ಟು ಉಪವಾಸವಿದ್ದ ಸರದಿ ಸಾಲಿನ ಅರ್ಚಕರು ವಿಧಿ–ವಿಧಾನಗಳೊಂದಿಗೆ ಪೂಜಾ ಕೈಂಕರ್ಯ ನೆರವೇರಿಸಿದರು. ಇದರ ಮುನ್ನ ದಿನವಾದ ಆಯುಧ ಪೂಜೆಯಂದು ವಿಶೇಷವಾಗಿ ಪೂಜೆ ನೆರವೇರಿಸಿ ಇಡಲಾಗಿದ್ದ ಮಹದೇಶ್ವರರ ಪಟ್ಟದ ಕತ್ತಿಗೆ ಬೂದುಗುಂಬಳಕಾಯಿ ಬಲಿಕೊಡುವ ಮೂಲಕ ಬಿಳಿಕುದುರೆ ಉತ್ಸವಕ್ಕೆ ಇಂದು ಚಾಲನೆ ನೀಡಲಾಯಿತು. ಸತ್ತಿಗೆ, ಸುರಪಾನಿ, ಮಂಗಳವಾದ್ಯ ತಮಟೆ ಜಾಗಟೆ ಸಮೇತ ಬನ್ನಿ ಮರದ ವರೆಗೆ ಉತ್ಸವದೊಂದಿಗೆ ಸಾಗಿ ಬನ್ನಿ ಮರಕ್ಕೆ ಪೂಜೆ ನೆರವೇರಿಸಲಾಯಿತು. ಬಳಿಕ ಉತ್ಸವಮೂರ್ತಿಯನ್ನು ಮೆರವಣಿಗೆ ಮೂಲಕ ಮತ್ತೆ ದೇವಾಲಯಕ್ಕೆ ತಂದು ನೈವೇದ್ಯ ಕೈಂಕರ್ಯ ನೆರವೇರಿಸಿ, ದೇವಾಲಯದ ಸುತ್ತಲೂ ಮೂರು ಸುತ್ತು ಪ್ರದಕ್ಷಿಣೆ ಹಾಕುವ ಮೂಲಕ ಉತ್ಸವ ಸಮಾಪ್ತಿಯಾಯಿತು.

ಉಯ್ಯಾಲೆ ಸೇವೆ: ಆಯುಧಪೂಜೆಯಂದು ತ್ರಿಕಾಲ ಪೂಜೆ ನೆರವೇರಿಸಿ ಸ್ವಾಮಿಯ ಉತ್ಸವಮೂರ್ತಿಯನ್ನು ಧೂಪ–ದೀಪ, ಮರುಗ–ಮಲ್ಲಿಗೆ, ಜಾಜಿ–ಸಂಪಿಗೆ ಹೂವಿನ ಅಲಂಕಾರ ಮಾಡಿ, ಜಾಗಟೆ–ನಗಾರಿ, ದವಣೆ–ದೀವಟಿಗೆ ಸೇವೆ ಸಲ್ಲಿಸಿ, ಮಂಗಳ ವಾದ್ಯ ಸಮೇತವಾಗಿ ಮೆರವಣಿಗೆಯಲ್ಲಿ ತಂದು ಬಿದಿರಿನ ತೂಗು ಮಂಟಪದಲ್ಲಿರಿಸಲಾಯಿತು. ನಂತರ ಬೇಡಗಂಪಣರ ಸಾಂಪ್ರದಾಯ ಜೋಗುಳದ ಪದದೊಂದಿಗೆ ತೊಟ್ಟಿಲು ತೂಗಿ ಉಯ್ಯಾಲೋತ್ಸವ ಪೂಜೆ ನೆರವೇರಿಸಲಾಯಿತು.

ಅರಸರ ಒಡವೆಗಳ ಅಲಂಕಾರ...

ವಿಜಯದಶಮಿಯಂದು ಮಹದೇಶ್ವರಸ್ವಾಮಿಗೆ ಮೈಸೂರು ಸಂಸ್ಥಾನದ ಅರಸರು ಕೊಡುಗೆಯಾಗಿ ನೀಡಿದ ಒಡವೆಗಳನ್ನು ಅಲಂಕರಿಸಿ ಪೂಜೆ ಸಲ್ಲಿಸುವುದು ವಾಡಿಕೆ. ಅದರಂತೆ ಸ್ವಾಮಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್, ಮುಮ್ಮಡಿ ಕೃಷ್ಣರಾಜ ಒಡೆಯರ್, ಕೆಂಪು ಚೆಲುವಾಜಮ್ಮಣ್ಣಿ, ಜಯಚಾಮರಾಜೇಂದ್ರ ಒಡೆಯರ್ ಅವರು ನೀಡಿರುವ ಗಂಡಭೇರುಂಡ ಲಾಂಛನದ ಬಂಗಾರದ ಸರಗಳು, ಮೋಹನಮಾಲೆಯ ಬಂಗಾರದ ಹಾರ, ಎರಡು ಎಳೆಗಳ ಮುತ್ತಿನ ಹಾರ, ವಜ್ರದ ಪದಕ, ರತ್ನ ಖಚಿತ ಪಚ್ಚೆಮಣಿಯ ಪದಕ, ಏಳು ಎಳೆಯ ಮುತ್ತಿನಹಾರದ 15 ಪಚ್ಚೆಮಣಿಯ ಅಷ್ಟ ವಜ್ರದ ಪದಕ, 33 ಗುಂಡುಗಳ ಚಿನ್ನದ ಸರದ ಜೊತೆಗೆ 30 ಗುಂಡುಗಳ ನೀಲಿಹರಳಿನ ಪದಕ, ಬಹುರತ್ನ ವಂಕಿಹೂವಿನ ಕೀರಿಟ, ಶೇಷಣ್ಣ ಒಡೆಯರ ಬಂಗಾರದ ಕಿರೀಟ, ಮುಕ್ಕಣ್ಣು ಸೇರಿದಂತೆ ವಿವಿಧ ಆಭರಣಗಳಿಂದ ಅಲಂಕರಿಸಿ ಪೂಜೆ ಸಲ್ಲಿಸಲಾಯಿತು.

ಕರಡಕೆರೆಯಲ್ಲಿ ವಿಜಯದಶಮಿ ಮಿನಿ ದಸರಾ



ಭಾರತೀನಗರ.ಅ.5– ಇಲ್ಲಿಗೆ ಸಮೀಪದ ಕರಡಕೆರೆಯಲ್ಲಿ ವಿಜಯದಶಮಿಯಂದು ಶ್ರೀ ಆಂಜನೇಯಸ್ವಾಮಿ ದೇವರನ್ನು ಹೂವಿನ ಪಲ್ಲಕ್ಕಿಯಲ್ಲಿ ಕೂರಿಸಿ ಮಿನಿ ದಸರಾದಂತೆ ಹಬ್ಬವನ್ನು ಆಚರಿಸಲಾಯಿತು.

ಶ್ರೀ ಆಂಜನೇಯಸ್ವಾಮಿ ದೇವರನ್ನು ಹಬ್ಬದ 9 ದಿನದ ಮುಂಚಿತವಾಗಿ ಪಟ್ಟಕ್ಕೆ ಕೂರಿಸಿ ಪ್ರತಿದಿನವು ವಿಶೇಷ ಪೂಜೆ ನೆರವೇರಿಸಿದರು. ಹಬ್ಬದ ಪ್ರಯುಕ್ತ ಗ್ರಾಮವನ್ನು ವಿದ್ಯುತ್ ದೀಪಗಳಿಂದ ಅಲಂಕರಿಸಿ ದೇವಸ್ಥಾನಕ್ಕೆ ಹೂವಿನ ಅಲಂಕಾರವನ್ನು ಮಾಡಲಾಗಿತ್ತು.

ವಿಜಯ ದಶಮಿಯಂದು ಹನುಮಂತರಾಯ ದೇವರ ವಿಗ್ರಹ, ಬಸವಪ್ಪ ಕಲಾ ತಂಡಗಳೊಂದಿಗೆ ಗ್ರಾಮದ ಹೊರ ವಲಯದಲ್ಲಿರುವ ಬನ್ನಿಮಂಟಪಕ್ಕೆ ತೆರಳಿ ಅಲ್ಲಿ ವಿಶೇಷ ಪೂಜೆ ನೆರವೇರಿಸಿ ಬೃಹತ್ ಆಕಾರದ ಹೂವಿನ ಪಲ್ಲಕ್ಕಿ ರಥದಲ್ಲಿ ಆಂಜನೇಯಸ್ವಾಮಿ ದೇವರನ್ನು ಪ್ರತಿಷ್ಠಾಪಿಸಿ ಮತ್ತು ವಿವಿಧ ಗ್ರಾಮಗಳಿಂದ ಬಂದದೇವರು ಹಾಗೂ ಬಸವದೊಂದಿಗೆ ಪ್ರಮುಖ ಬೀದಿಗಳಲ್ಲಿ ಇಡೀ ರಾತ್ರಿ ಮೆರವಣಿಗೆ ನಡೆಸಲಾಯಿತು.

ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿದ ಹೂವಿನ ಪಲ್ಲಕ್ಕಿ ಉತ್ಸವಕ್ಕೆ ಸಿಡಿಮದ್ದುಗಳು, ಬಾಣಬಿರುಸುಗಳು ಮೆರುಗು ನೀಡಿತು. ಇದೇ ಸಂದರ್ಭ ಎಲ್ಲಾ ಮನೆಗಳಲ್ಲೂ ಪಲ್ಲಕ್ಕಿ ಉತ್ಸವದ ಸಂದರ್ಭ ಆರತಿ ನೀಡಿದರು. ಇದೇ ವೇಳೆ ವಿವಿಧ ಜನಪದ ಕಲಾತಂಡಗಳು ಮೆರವಣಿಗೆಯಲ್ಲಿ ಸಾಗಿತು. ಉತ್ಸವಕ್ಕೆ ವಾಡಿಕೆಯಂತೆ ಪ್ರಥಮ ವಾಗಿ ಮುದಗೆರೆ ಗ್ರಾಮಸ್ಥರು ಪೂಜೆ ಸಲ್ಲಿಸಿದರು. ಇದೇ ವೇಳೆ ಬಂದಂತಹ ಎಲ್ಲಾ ಭಕ್ತಾದಿಗಳಿಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು.

ಕಳೆಕಟ್ಟಿದ ಜಾತ್ರೆ ಮೈಸೂರು ದಸರಾದಲ್ಲಿ ವಸ್ತುಪ್ರದರ್ಶನವಾದರೆ ಇಲ್ಲಿ ಆಟಿಕೆಗಳು, ಮಹಿಳೆಯರಿಗೆ ಅಗತ್ಯವಿರುವ ವಸ್ತುಗಳನ್ನು ಹಾಕಿ ಮಾರಾಟ ಮಾಡುವವರೂ ಸಾಲುಗಟ್ಟಿದ್ದರು.

ಒಟ್ಟಾರೆ ಕರಡಕೆರೆಯಲ್ಲಿ ನಡೆದ ಶ್ರೀ ಆಂಜನೇಯಸ್ವಾಮಿ ದೇವರ ಉತ್ಸವ ಮಿನಿ ದಸರಾದಂತೆ ವಿಜೃಂಭಣೆಯಿಂದ ಝಗಮಗಿಸಿತು. ದಸರಾ ಹಬ್ಬದ ಅಂಗವಾಗಿ ನಡೆಸಲಾದ ನವರಾತ್ರಿ ಉತ್ಸವದ ಸಂದರ್ಭ ಸಾಂಸ್ಕೃತಿಕ ಕಾರ್ಯಕ್ರಮ ಮನಸೆಳೆಯಿತು. ಈ ಸಂದರ್ಭ ಸುಮಾರು 5 ಸಾವಿರಕ್ಕೂ ಹೆಚ್ಚು ಮಂದಿ ಪೂಜಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ದೇವರಿಗೆ ಹರಕೆ ಸಲ್ಲಿಸಿದರು.

ಮಿನಿದಸರಾಕ್ಕೆ ಸರ್ಕಾರ ಹಣ ನೀಡಲಿ: ರಾಜ್ಯ ಸರ್ಕಾರವು ಕೊಡಗು, ಶ್ರೀರಂಗಪಟ್ಟಣದಲ್ಲಿ ನಡೆಯುವ ಮಿನಿದಸರಾ ಉತ್ಸವಗಳಿಗೆ ಸಹಾಯ ಧನನೀಡುವಂತೆ ಜಿಲ್ಲೆಯಲ್ಲಿ ಹೆಸರುವಾಸಿಯಾದ ಗ್ರಾಮಾಂತರ ಪ್ರದೇಶಗಳಲ್ಲಿ ನಡೆಯುವ ಆಯ್ದ ಗ್ರಾಮಗಳಿಗೆ ಪ್ರೋತ್ಸಾಹ ಧನವನ್ನು ನೀಡಬೇಕೆಂದು ಕರಡಕೆರೆ ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ನಾಡ ಬಂದೂಕಿನೊಂದಿಗೆ ಅರಣ್ಯ ಪ್ರವೇಶ: ಮೂವರ ಬಂಧನ

ಹನೂರು, ಅ.5–ನಾಡ ಬಂದೂಕು ಹಿಡಿದು ಅಕ್ರಮವಾಗಿ ತಾಲೂಕಿನ ಗೋಪಿನಾಥಂ ಬಳಿ ಅರಣ್ಯ ಪ್ರವೇಶಿಸಿದ್ದ ಮೂವರನ್ನು ಅರಣ್ಯ ಇಲಾಖೆ ಸಿಬ್ಬಂದಿ ಬಂಧಿಸಿದ್ದಾರೆ.



ಹನೂರು ತಾಲೂಕಿನ ಹೊಗೇನಕಲ್ ಗ್ರಾಮದ ಮಾರಿಮುತ್ತು, ನಲ್ಲಾಂಪಟ್ಟಿ ಗ್ರಾಮದ ಕವಿನ್ ಕುಮಾರ್, ವಿಘ್ನೇಶ್ ಬಂಧಿತರು. ಹನೂರು ತಾಲೂಕಿನ ಗೋಪಿನಾಥಂ ಬಳಿಯ ಆಲಂಬಾಡಿ ಸಮೀಪದ ಅರಣ್ಯಕ್ಕೆ ಅಕ್ರಮವಾಗಿ ಪ್ರವೇಶ ಮಾಡಿ ಗನ್‌ಗಳೊಟ್ಟಿಗೆ ಓಡಾಡುತ್ತಿದ್ದ ಇವರನ್ನು ಅರಣ್ಯ ಇಲಾಖೆ ಸಿಬ್ಬಂದಿ ವಶಕ್ಕೆ ಪಡೆದಿದ್ದಾರೆ. ಬಂಧಿತರಲ್ಲಿ ಓರ್ವ ವೈದ್ಯನೂ ಇರುವುದಾಗಿ ಅರಣ್ಯ ಇಲಾಖೆ ಮೂಲಗಳು ತಿಳಿಸಿದ್ದು, ಮಲೆಮಹದೇಶ್ವರಬೆಟ್ಟ ಪೊಲೀಸ್ ಠಾಣೆಯಲ್ಲಿ ಬಂಧಿತರ ವಿಚಾರಣೆ ನಡೆಸಲಾಗುತ್ತಿದೆ.

ಇಂದಿನಿಂದ ಮಹದೇಶ್ವರ ಜ್ಯೋತಿ ಯಾತ್ರೆ

ಮಹದೇಶ್ವರಬೆಟ್ಟದಲ್ಲಿ ಯಾತ್ರೆಗೆ ಚಾಲನೆ

ಚಾಮರಾಜನಗರ, ಅ.5–ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲೂಕಿನ ಅಂಬಿಗರಹಳ್ಳಿಯ ತ್ರಿವೇಣಿ ಸಂಗಮದಲ್ಲಿ ಅ.14ರಿಂದ 16 ರವರೆಗೆ ಮಹಾಕುಂಭ ಮೇಳ ಪುಣ್ಯಸ್ನಾನ ನಡೆಯಲಿದ್ದು, ಈ ನಿಟ್ಟಿನಲ್ಲಿ ಅ.6ರಂದು ಮಹದೇಶ್ವರಬೆಟ್ಟದಲ್ಲಿ ಪೂಜೆ ಸಲ್ಲಿಸಿ ಜ್ಯೋತಿ ಯಾತ್ರೆಗೆ ಚಾಲನೆ ನೀಡಲಾಗುವುದು.

ಯಾತ್ರೆಯು ಚಾಮರಾಜನಗರ, ಮೈಸೂರು ಹಾಗೂ ಮಂಡ್ಯ ಜಿಲ್ಲೆಗಳಲ್ಲಿ ಸಂಚರಿಸಿ, ತ್ರಿವೇಣಿ ಸಂಗಮ ತಲುಪಲಿದೆ. ಯಾತ್ರೆಯ ಮೊದಲನೇ ವಾಹನ ಅ.6 ರಂದು ಶ್ರೀ ಮಲೆಮಹದೇಶ್ವರ ಬೆಟ್ಟದಿಂದ ಸಾಲೂರು ಮಠ– ಹನೂರು– ಕುಂತೂರು– ಕೊಳ್ಳೇಗಾಲದ ಮಾರ್ಗವಾಗಿ ಸಂಚರಿಸಿ ತಿ.ನರಸೀಪುರ ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಂಗಳ ಮಂಟಪದಲ್ಲಿ ವಾಸ್ತವ್ಯ ಹೂಡಲಿದೆ.

ಇಂದು ಐಕ್ಯತಾ ಯಾತ್ರೆಗೆ ಸೋನಿಯಾ ಸಾಥ್

ಮಂಡ್ಯ,ಅ.5– ಕಳೆದ ಎರಡು ದಿನಗಳಿಂದ ದಸರಾ ಹಬ್ಬದ ಹಿನ್ನಲೆಯಲ್ಲಿ ಭಾರತ್ ಜೋಡೋ ಯಾತ್ರೆಗೆ ವಿರಾಮ ಘೋಷಿಸಿದ್ದ ಕಾಂಗ್ರೆಸ್ ನಾಯಕ ರಾಹುಲ್‌ಗಾಂಧಿ ಗುರುವಾರದಿಂದ ಮತ್ತೆ ರ‍್ಯಾಲಿಯನ್ನು ಪುನರಾರಂಭ ಗೊಳಿಸಲಿದ್ದಾರೆ. ಮಗ ರಾಹುಲ್‌ಗಾಂಧಿಗೆ ಯಾತ್ರೆಯಲ್ಲಿ ಎಐಸಿಸಿ ಅಧ್ಯಕ್ಷೆ ಸೋನಿಯಾಗಾಂಧಿ ಸಾಥ್ ನೀಡಲಿದ್ದಾರೆ.

ಬೆಳಗ್ಗೆ ಸುಮಾರು 7 ಗಂಟೆಗೆ ಪಾದಯಾತ್ರೆ ಪಾಂಡವಪುರ ತಾಲೂಕಿನ ಬೆಳ್ಳಾಳೆಯಿಂದ ಆರಂಭವಾಗಲಿದ್ದು, ಗುರುವಾರ ರಾತ್ರಿ ಮಾಜಿ ಸಚಿವ ಚಲುವರಾಯಸ್ವಾಮಿ ತವರೂರು ನಾಗಮಂಗಲದ ಬ್ರಹ್ಮದೇವರಹಳ್ಳಿಯಲ್ಲಿ ಸ್ಥಗಿತಗೊಳ್ಳಲಿದೆ. ಇನ್ನು ಮಂಡ್ಯ ಜಿಲ್ಲೆಯಲ್ಲಿ ಸೋಮವಾರ ಆರಂಭವಾದ ಪಾದಯಾತ್ರೆಗೆ ಸೋನಿಯಾಗಾಂಧಿ ಸ್ವಾಗತಿಸಲು ತೆರಳಿದ್ದರಿಂದ ಗೈರಾಗಿದ್ದ ವಿಪಕ್ಷ ನಾಯಕ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸಹ ಗುರುವಾರ ಭಾಗಿಯಾಗಲಿದ್ದು, ಇವರೊಂದಿಗೆ ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ.ವೇಣುಗೋಪಾಲ್, ರಣದೀಪ್ ಸಿಂಗ್ ಸುರ್ಜೇವಾಲಾ, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಸಲೀಂ ಅಹ್ಮದ್, ಧ್ರುವ ನಾರಾಯಣ್, ರಾಮಲಿಂಗಾರೆಡ್ಡಿ, ಮಾಜಿ ಸಚಿವರಾದ ಎನ್.ಚಲುವರಾಯಸ್ವಾಮಿ, ಎಂ.ಎಸ್.ಆತ್ಮಾನಂದ, ಪಿ.ಎಂ. ನರೇಂದ್ರಸ್ವಾಮಿ ಸೇರಿದಂತೆ ರಾಜ್ಯ ಹಾಗೂ ಮಂಡ್ಯ ಜಿಲ್ಲೆಯ ಅನೇಕ ನಾಯಕರುಗಳು ಪಾಲ್ಗೊಳ್ಳಲಿದ್ದಾರೆ.

ಸೋನಿಯಾ ಮೇಲುಕೋಟೆ ಭೇಟಿ ಸಾಧ್ಯತೆ: ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ ಪಾಂಡವಪುರ ತಾಲೂಕಿನ ಐತಿಹಾಸಿಕ ದೇಗುಲ ಮೇಲುಕೋಟೆಗೆ ಭೇಟಿ ನೀಡಿ ಚಲುವನಾರಾಯಣಸ್ವಾಮಿ ದರ್ಶನ ಪಡೆಯುವ ಸಾಧ್ಯತೆ ಇದೆ. ಈ ನಿಟ್ಟಿನಲ್ಲಿ ಮೈಸೂರಿನ ಕಬಿನಿ ರೆಸಾರ್ಟ್‌ನಿಂದ ಹೊರಟು ಹೆಲಿಕಾಪ್ಟರ್ ಮೂಲಕ ಬೆಳಿಗ್ಗೆ 8 ಗಂಟೆಗೆ ಪಾಂಡವಪುರ ತಾಲೂಕಿನ ಹೊನ್ನೇಮಡು ಗ್ರಾಮದ ಹೆಲಿಪ್ಯಾಡ್ ತಲುಪಲಿದ್ದಾರೆ. ಅಲ್ಲಿಂದ ಮೇಲುಕೋಟೆಗೆ ಭೇಟಿ ನೀಡಿ ಬಳಿಕ 9 ಗಂಟೆ ಸುಮಾರಿಗೆ ಕ್ಯಾತನಹಳ್ಳಿ ಗ್ರಾಮದಿಂದ ರಾಹುಲ್ ಜೊತೆಗೆ ಐಕ್ಯತಾಯಾತ್ರೆಯಲ್ಲಿ ಹೆಜ್ಜೆ ಹಾಕಲಿದ್ದಾರೆ. ರಾಹುಲ್ ಎಂದಿನಂತೆ 6 ಗಂಟೆಗೆ ಪಾಂಡವಪುರಕ್ಕೆ ಬರಲಿದ್ದು, 6.30ರಿಂದ ಪಾದಯಾತ್ರೆ ಆರಂಭಿಸಲಿದ್ದಾರೆ.

ಗೂಡ್ಸ್ ವಾಹನ ಉರುಳಿ ಓರ್ವ ಸಾವು

ಕೆ.ಆರ್.ಪೇಟೆ, ಅ.5– ಗೂಡ್ಸ್ ವಾಹನವೊಂದು ಚಾಲಕನ ನಿಯಂತ್ರಣ ತಪ್ಪಿ ಹಳ್ಳಕ್ಕೆ ಉರುಳಿ ಬಿದ್ದ ಪರಿಣಾಮ ಓರ್ವ ಮೃತಪಟ್ಟು, ಚಾಲಕ ಸೇರಿ ಇತರೆ ಮೂವರು ಗಂಭೀರವಾಗಿ ಗಾಯಗೊಂಡಿರುವ ಘಟನೆ ಕೆ.ಆರ್.ಪೇಟೆ ತಾಲೂಕಿನ ಮುರುಕನಹಳ್ಳಿತೊರೆ ಹಳ್ಳದ ಬಳಿ ಸೋಮವಾರ ರಾತ್ರಿ ನಡೆದಿದೆ. ಮುರುಕನಹಳ್ಳಿ ಗ್ರಾಮದ ಕುಮಾರ್ ಅವರ ಮಗ ಸಚಿನ್(25) ಮೃತಪಟ್ಟ ಯುವಕ. ಅದೇ ಗ್ರಾಮದ ಸುನಿಲ್, ರವಿ, ಹರೀಶ್ ಗಾಯಗೊಂಡ ವರು.

ಘಟನೆ ವಿವರ: ಆಯುಧ ಪೂಜೆ ಹಬ್ಬದ ಹಿನ್ನೆಲೆಯಲ್ಲಿ ಸಚಿನ್, ಸುನಿಲ್, ರವಿ, ಹರೀಶ್ ಅವರು ತಮ್ಮ ಗೂಡ್ಸ್ ವಾಹನವನ್ನು ಸರ್ವೀಸ್ ಮಾಡಿಸಿ ಕೊಂಡು ಗ್ರಾಮಕ್ಕೆ ಹಿಂದಿರು ಗುತ್ತಿದ್ದಾಗ ಮುರುಕನಹಳ್ಳಿ ತೊರೆಹಳ್ಳದ ಸೇತುವೆ ಬಳಿ ಎಲ್. ಮಾದರಿಯ ಅಪಾಯ ಕಾರಿ ತಿರುವಿನಲ್ಲಿ ವಾಹನ ಚಾಲಕನ ನಿಯಂತ್ರಣ ತಪ್ಪಿ ಹಳ್ಳಕ್ಕೆ ಮಗುಚಿ ಬಿದ್ದಿದೆ.

ಪರಿಣಾಮ ಸಚಿನ್ ಹಳ್ಳದ ನೀರಿಗೆ ಸಿಲುಕಿ ಸ್ಥಳದಲ್ಲೇ ಮೃತ ಪಟ್ಟಿದ್ದಾನೆ.

ಉಳಿದ ಮೂವರಿಗೆ ಗಂಭೀರ ಗಾಯ ಗಳಾಗಿದ್ದು, ಕೆ.ಆರ್.ಪೇಟೆ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಪಡೆದು ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್. ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಘಟನೆ ಕುರಿತು ಕೆ.ಆರ್.ಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೃತ ಸಚಿನ್ ಪತ್ನಿ, ತಂದೆ, ತಾಯಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.



ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಮಂಡ್ಯದಲ್ಲಿ ರೈತರು ಎತ್ತಿನ ಗಾಡಿ, ಜಾನುವಾರುಗಳೊಂದಿಗೆ ಹೆದ್ದಾರಿ ತಡೆ ನಡೆಸಿದರು.

ಮೂರನೇ ಪುಟದಿಂದ

ಅದ್ಧೂರಿ ಜಂಬೂಸವಾರಿ

ವಿ.ಸುನೀಲ್‌ಕುಮಾರ್, ರಾಜ ವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಮೇಯರ್ ಶಿವಕುಮಾರ್, ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್ ಹಾಗೂ ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ ಉಪಸ್ಥಿತರಿದ್ದು, ಈ ಧಾರ್ಮಿಕ ಕೈಂಕರ್ಯದಲ್ಲಿ ಪಾಲ್ಗೊಂಡರು. ಅಲಂಕೃತ ಚಿನ್ನದ ಅಂಬಾರಿಯಲ್ಲಿ ವಿರಾಜಮಾನಳಾಗಿದ್ದ ಅಧಿದೇವತೆ ತಾಯಿ ಶ್ರೀ ಚಾಮುಂಡೇಶ್ವರಿ ದೇವಿಯ ಉತ್ಸವ ಮೂರ್ತಿಯನ್ನು ಹೊತ್ತು ಅಭಿಮನ್ಯು ಅರಮನೆ ಆವರಣದಲ್ಲಿ ಅಡಿಯಿಡುತ್ತಿದ್ದಂತೆ ನೆರೆದಿದ್ದ ಸಹಸ್ರಾರು ಮಂದಿ ಕಣ್ತುಂಬಿಕೊಂಡು ಭಕ್ತಿಪರವಶರಾಗಿ, ಕೈ ಮುಗಿದರು.

ಮುಖ್ಯಮಂತ್ರಿಗಳು ಪುಷ್ಪಾರ್ಚನೆ ನೆರವೇರಿಸುತ್ತಿದ್ದಂತೆಯೇ ಅರಮನೆ ಆವರಣದಲ್ಲಿ ರಾಷ್ಟ್ರಗೀತೆ ಮೊಳಗಿತು. ಇದೇ ವೇಳೆ 21 ಸುತ್ತು ಕುಶಾಲ ತೋಪುಗಳನ್ನು ಸಿಡಿಸಲಾಯಿತು. ಈ ವೇಳೆ ನೆರೆದಿದ್ದ ಸಹಸ್ರಾರು ಮಂದಿ ಎದ್ದುನಿಂತು ನಾಡದೇವತೆ ತಾಯಿ ಶ್ರೀ ಚಾಮುಂಡೇಶ್ವರಿ ದೇವಿಗೆ ಗೌರವ ಸಮರ್ಪಿಸಿದರು. ಹಸಿರು ಸೀರೆ ಧರಿಸಿ, ವಿವಿಧ ಪುಷ್ಪಗಳಿಂದ ಅಲಂಕಾರ ಮಾಡಿದ್ದ ಅಧಿದೇವತೆಯನ್ನು ಚಿನ್ನದ ಅಂಬಾರಿಯಲ್ಲಿ ಹೊತ್ತು ಅಭಿಮನ್ಯು ಗಾಂಭೀರ್ಯದಿಂದ ಹೆಜ್ಜೆ ಹಾಕಿದ. ಎಡಭಾಗಕ್ಕೆ ಚೈತ್ರ ಹಾಗೂ ಬಲಬದಿ ಕಾವೇರಿ ಅಭಿಮನ್ಯುವಿಗೆ ಮೆರವಣಿಗೆಯಲ್ಲಿ ಸಾಥ್ ನೀಡಿದವು.

ಅರಮನೆ ಆವರಣದಿಂದ ಹೊರಟ ಅಭಿಮನ್ಯು ನಿರಾಳವಾಗಿ ಹೆಜ್ಜೆ ಹಾಕಿ, ಚಾಮರಾಜ ವೃತ್ತ, ಕೆ.ಆರ್. ಸರ್ಕಲ್, ಸಯ್ಯಾಜಿರಾವ್ ರಸ್ತೆ, ಬಂಬೂಬಜಾರ್, ಹೈವೇ ಸರ್ಕಲ್ ಮೂಲಕ ರಾತ್ರಿ 8.05ಕ್ಕೆ ಬನ್ನಿಮಂಟಪದ ಪಂಜಿನ ಕವಾಯತು ಮೈದಾನ ತಲುಪಿದ. ಮೆರವಣಿಗೆಯುದ್ದಕ್ಕೂ ಇಕ್ಕೆಲಗಳಲ್ಲಿ ಕಿಕ್ಕಿರಿದು ನೆರೆದಿದ್ದ ಜನಸ್ತೋಮ ಅಲಂಕೃತ ಚಿನ್ನದ ಅಂಬಾರಿಯಲ್ಲಿ ವಿರಾಜಮಾನಳಾಗಿದ್ದ ಶ್ರೀ ಚಾಮುಂಡೇಶ್ವರಿ ದೇವಿಯನ್ನು ಕಣ್ತುಂಬಿಕೊಂಡು, ಭಕ್ತಿಪರವಶರಾದರು. ಮಾರ್ಗದುದ್ದಕ್ಕೂ ಕಟ್ಟಡ, ಮರಗಳ ಮೇಲೆ ನಿಂತು ಲಕ್ಷಾಂತರ ಮಂದಿ ಈ ವೈಭವದ ಐತಿಹಾಸಿಕ ಜಂಬೂ ಸವಾರಿ ಮೆರವಣಿಗೆಯನ್ನು ವೀಕ್ಷಿಸಿ, ಪುನೀತರಾದರು. ಇದಕ್ಕೂ ಮೊದಲು ನಿಶಾನೆ ಆನೆಗಳೊಂದಿಗೆ ವೀರಗಾಸೆ, ನಾದಸ್ವರ ವಾದನ, ನಂದಿಧ್ವಜ ಸೇರಿದಂತೆ 48 ಸ್ತಬ್ಧಚಿತ್ರಗಳು ಹಾಗೂ 62 ವಿವಿಧ ಜಾನಪದ ಕಲಾತಂಡಗಳು, ಇಂಗ್ಲಿಷ್ ಬ್ಯಾಂಡ್, ಪೊಲೀಸ್ ಅಶ್ವದಳ, ಫಿರಂಗಿ ಗಾಡಿಗಳು, ಅರಣ್ಯ ಇಲಾಖೆ ವೈದ್ಯರ ತಂಡ, ಅಗ್ನಿಶಾಮಕ ಸಿಬ್ಬಂದಿ ಹಾಗೂ ತುರ್ತು ಚಿಕಿತ್ಸಾ ವಾಹನಗಳು ಮೆರವಣಿಗೆಯಲ್ಲಿ ಸಾಗಿದವು. ಈ ವೈಭವೋಪೇತ ವಿಜಯದಶಮಿ ಮೆರವಣಿಗೆಯನ್ನು ಲಕ್ಷಾಂತರ ಮಂದಿ ವೀಕ್ಷಿಸಿ ವಿಶ್ವ ಪ್ರಸಿದ್ಧ ನಾಡಹಬ್ಬಕ್ಕೆ ಸಾಕ್ಷಿಯಾದರು. ನಂತರ ರಾತ್ರಿ ಬನ್ನಿಮಂಟಪದ ಟಾರ್ಚ್‌ಲೈಟ್ ಪರೇಡ್ ಮೈದಾನದಲ್ಲಿ ಆಕರ್ಷಕ ಪಂಜಿನ ಕವಾಯತು ಪ್ರದರ್ಶನ ನಡೆಯಿತು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಸಚಿವರುಗಳಾದ ವಿ. ಸುನೀಲ್‌ಕುಮಾರ್, ಬಿ.ಸಿ. ಪಾಟೀಲ್, ಮೇಯರ್ ಶಿವಕುಮಾರ್ ಸೇರಿದಂತೆ ಗಣ್ಯಾತಿಗಣ್ಯರು ಪಾಲ್ಗೊಂಡು ಗೌರವ ವಂದನೆ ಸ್ವೀಕರಿಸಿದರು. ಇದರೊಂದಿಗೆ ಈ ಸಾಲಿನ ಐತಿಹಾಸಿಕ ಮೈಸೂರು ದಸರಾ ನವರಾತ್ರಿ ಉತ್ಸವಕ್ಕೆ ತೆರೆಬಿದ್ದಂತಾಗಿದೆ.

ಹ್ಯಾಟ್ರಿಕ್ ಸಾಧನೆ ಮೆರೆದ ಅಭಿಮನ್ಯು

ಎರಡು ವರ್ಷ ಸರಳ ಹಾಗೂ ಸಾಂಪ್ರದಾಯಿಕ ದಸರಾ ಆಚರಿಸಿದ್ದರಿಂದ ಅರಮನೆ ಆವರಣಕ್ಕಷ್ಟೇ ಸೀಮಿತವಾಗಿ ಅಂಬಾರಿ ಹೊತ್ತಿತ್ತು. ಆದರೆ, ಈ ಬಾರಿ ಅದ್ಧೂರಿ ಆಚರಣೆ ಹಿನ್ನೆಲೆಯಲ್ಲಿ ಪೂರ್ಣ ಪ್ರಮಾಣದ ಜಂಬೂಸವಾರಿ ಮೆರವಣಿಗೆಯಲ್ಲಿ ಅಂಬಾರಿ ಹೊತ್ತು ಸಾಗುವ ಮೂಲಕ ತನ್ನ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿಭಾಯಿಸಿದ್ದಾನೆ.

ತಡವಾಗಲು ಕಾರಣ: ಅಭಿಮನ್ಯು ತಾಲೀಮಿನ ವೇಳೆ 1100 ಕೆಜಿ ಭಾರ ಹೊತ್ತು, 1.15 ಗಂಟೆಯಲ್ಲಿ ಸಾಗಿದ್ದ. ಆದರೆ ಇಂದು ಸ್ತಬ್ಧಚಿತ್ರ ಹಾಗೂ ಕಲಾ ತಂಡಗಳು ಮೆರವಣಿಗೆಯಲ್ಲಿ ಸಾಗುತ್ತಿದ್ದ ಹಿನ್ನೆಲೆಯಲ್ಲಿ ಅಭಿಮನ್ಯುವಿನ ವೇಗದ ನಡಿಗೆಗೆ ಅಡಚಣೆ ಉಂಟಾಗಿ ಇದು ಒಂದು ಗಂಟೆ ತಡವಾಗಲು ಕಾರಣವಾಯಿತು. ಇಲ್ಲದಿದ್ದರೆ 1.15 ಗಂಟೆಯಲ್ಲೇ ಕ್ರಮಿಸುತ್ತಿದ್ದ ಎಂದು ಅಧಿಕಾರಿಗಳು ಅಭಿಪ್ರಾಯಪಟ್ಟರು.

ಅಭಿಮನ್ಯು ಪರಿಚಯ: 57 ವರ್ಷದ ಅಭಿಮನ್ಯು ಮತ್ತಿಗೋಡು ಆನೆ ಶಿಬಿರದ ವಾಸಿ. 1977ರಲ್ಲಿ ಕೊಡಗಿನ ಹೆಬ್ಬಾಳ ಅರಣ್ಯ ಪ್ರದೇಶದಲ್ಲಿ ಗುಂಡಿಗೆ ಬೀಳಿಸಿ ಸೆರೆ ಹಿಡಿಯಲಾಗಿತ್ತು. 2.72 ಮೀ. ಎತ್ತರ, 3.51 ಮೀ ಉದ್ದವಿದ್ದು, ಸುಮಾರು 5000 ಕೆಜಿ ತೂಕ ಹೊಂದಿದ್ದಾನೆ. 21 ವರ್ಷದಿಂದ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುತ್ತಿರುವ ಅಭಿಮನ್ಯುವಿಗೆ ಮಾವುತ ಜೆ.ಎಸ್.ವಸಂತ ಹಾಗೂ ಕಾವಾಡಿ ಜೆ.ಕೆ.ರಾಜು ಆರೈಕೆ ಮಾಡುತ್ತಿದ್ದಾರೆ. ಮಹಾರಾಷ್ಟ್ರ, ಕೇರಳ, ಆಂಧ್ರಪ್ರದೇಶ ಹಾಗೂ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಕಾಡಾನೆಗಳನ್ನು ಸೆರೆ ಹಿಡಿಯುವ ಕಾರ್ಯಾಚರಣೆಯಲ್ಲಿ ಪಾಲ್ಗೊಂಡು ಸೈ ಎನಿಸಿಕೊಂಡಿದ್ದಾನೆ.

ಮನರಂಜಿಸಿದ ಡ್ರೋಣ್ ಚಮತ್ಕಾರ

ತುಕಡಿಗಳ ಪರಿವೀಕ್ಷಣೆ: ಕೋವಿಡ್ ಕಾರಣದಿಂದ ರಾಜ್ಯಪಾಲರು ಈ ಬಾರಿ ಪಂಜಿನ ಕವಾಯತಿಗೆ ಗೈರಾಗಿದ್ದರು. ಹಾಗಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಕನ್ನಡ ಮತ್ತು ಸಂಸ್ಕೃತಿ ಸಚಿವ ಸುನಿಲ್ ಕುಮಾರ್ ಇನ್ನಿತರ ಸ್ಥಳೀಯ ಜನಪ್ರತಿನಿಧಿಗಳನ್ನೊಳಗೊಂಡಂತೆ ಗಣ್ಯರ ಆಗಮನವಾದ ಬಳಿಕ ರಾತ್ರಿ 8.10ಕ್ಕೆ ಕಾರ್ಯಕ್ರಮ ಆರಂಭವಾಯಿತು. ಅಶ್ವಾರೋಹಿ ದಳದ ಪ್ರಧಾನ ದಳಪತಿ ನಾಗರಾಜು ಅವರು ಗಣ್ಯರಿಗೆ ಗೌರವ ವಂದನೆ ಸಲ್ಲಿಸಿ, 'ಪಂಜಿನ ಕವಾಯತು ತುಕಡಿಗಳು ತಮ್ಮ ಪರಿವೀಕ್ಷಣೆಗೆ ಸಿದ್ಧವಾಗಿವೆ' ಎಂದು ಅವರನ್ನು ಆಹ್ವಾನಿಸಿದರು. ನಂತರ ಮುಖ್ಯಮಂತ್ರಿ ಬೊಮ್ಮಾಯಿ ಅವರು ತೆರೆದ ವಾಹನದಲ್ಲಿ ಮೈದಾನ ಸುತ್ತುಹಾಕಿ ನಿಶ್ಚಲ ತುಕಡಿಗಳ ಪರಿವೀಕ್ಷಣೆ ನಡೆಸಿ, ವೇದಿಕೆಗೆ ಆಗಮಿಸಿದರು. ಸಚಿವರಾದ ಎಸ್.ಟಿ.ಸೋಮಶೇಖರ್, ಸುನಿಲ್ ಕುಮಾರ್, ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ಮುಖ್ಯಮಂತ್ರಿಗಳೊಂದಿಗಿದ್ದರು.

ಎದೆ ಝಲ್ ಎನಿಸಿದ ಕುಶಾಲತೋಪು: ಪರೇಡ್ ಕಮಾಂಡರ್ ನಾಗರಾಜು ಗಣ್ಯರಿಗೆ ಶಸ್ತ್ರ ವಂದನೆ ಸಲ್ಲಿಸಿದ ನಂತರ ಅವರ ಅನುಮತಿಯೊಂದಿಗೆ ನಾಗಾಲೋಟದಲ್ಲಿ ಮೈದಾನದ ನಿಗದಿತ ಸ್ಥಳಕ್ಕೆ ತೆರಳಿ ಕುಶಾಲುತೋಪು ಸಿಡಿಸಲು ಸೂಚನೆ ನೀಡಿದರು. ಬಳಿಕ ಮೂರು ಹಂತಗಳಲ್ಲಿ 21 ಸುತ್ತು ಕುಶಾಲತೋಪು ಸಿಡಿಸಿದ್ದು ಎದೆ ಝಲ್ ಎನಿಸಿತು. ಇದೇ ವೇಳೆ ಮೈದಾನದಲ್ಲಿ ಸಾಲುಗಳಲ್ಲಿ ನಿಂತಿದ್ದ ಪೊಲೀಸರು ಶಿಸ್ತುಬದ್ಧವಾಗಿ ಬಲದಿಂದ ಎಡಕ್ಕೆ ಚಾಲಿಸುವಂತೆ ಗಾಳಿಯಲ್ಲಿ ಗುಂಡು ಹಾರಿಸಿದರು. ಈ ನಡುವೆ ಪೊಲೀಸ್ ವಾದ್ಯವೃಂದದವರು ರಾಷ್ಟ್ರಗೀತೆ ನುಡಿಸಿದರು. ಈ ಸಂದರ್ಭದಲ್ಲಿ ನೆರೆದಿದ್ದವರೆಲ್ಲಾ ಎದ್ದು ನಿಂತು ಗೌರವ ಸೂಚಿಸಿದರು.

ಶಿಸ್ತುಬದ್ಧ ಪಥಸಂಚಲನ: ಬಳಿಕ ಖಡ್ಗಧಾರಿ ಪರೇಡ್ ಕಮಾಂಡರ್ ನಾಗರಾಜು ಹಾಗೂ ಉಪಕಮಾಂಡರ್ ಸಾಸನೂರವರ್ ಗಣ್ಯರಿಗೆ ಖಡ್ಗ ವಂದನೆ ಸಲ್ಲಿಸಿ ಆಕರ್ಷಕ ಪಥ ಸಂಚಲವನ್ನು ಮುನ್ನಡೆಸಿದರು. ಅಶ್ವಾರೋಹಿ ದಳ, ಕೆಎಸ್‌ಆರ್‌ಪಿ, ಸಿಎಆರ್, ರೈಲ್ವೆ ರಕ್ಷಣಾ ದಳ, ಗೃಹ ರಕ್ಷಕ ದಳ, ಎನ್‌ಸಿಸಿ ನೌಕಾಪಡೆ ಹಾಗೂ ವಾಯುಪಡೆ, ಪೊಲೀಸ್ ಪಬ್ಲಿಕ್ ಸ್ಕೂಲ್ ಬಾಲಕರು ಹಾಗೂ ಬಾಲಕಿಯರು, ಜವಾಹರ್ ನವೋದಯ ವಿದ್ಯಾಲಯ, ಮೈಸೂರು ಸ್ಕೌಟ್ ಅಂಡ್ ಗೈಡ್ಸ್, ಭಾರತ ಸೇವಾದಳದ ಬಾಲಕರು, ಬಾಲಕಿಯರು, ಪೊಲೀಸ್ ಬ್ಯಾಂಡ್ ತಂಡ ಸೇರಿ ಒಟ್ಟು 18 ತುಕಡಿಗಳು ಶಿಸ್ತುಬದ್ಧ ಪಥಸಂಚಲನದ ಮೂಲಕ ಗಣ್ಯರಿಗೆ ಗೌರವ ವಂದನೆ ಸಲ್ಲಿಸಿದರು. ರಿವ್ಯೂ ಆರ್ಡರ್‌ನಲ್ಲಿ ಶಸ್ತ್ರ ವಂದನೆ ಸಲ್ಲಿಸಿ, ರಾಷ್ಟ್ರಗೀತೆ ನುಡಿಸಿ ಗಣ್ಯರ ಅನುಮತಿಯೊಂದಿಗೆ ಎಲ್ಲಾ ತುಕಡಿಗಳೂ ಅಭಿಮುಖವಾಗಿ ಪಥಸಂಚಲನದಿಂದ ನಿರ್ಗಮಿಸಿದವು.

ಸಾಂಸ್ಕೃತಿಕ ವೈಭವ: ಪಥಸಂಚನದ ನಂತರ ನಾಡಗೀತೆಗೆ ನೆರೆದಿದ್ದವರೆಲ್ಲಾ ಎದ್ದುನಿಂತು ಗೌರವ ಸೂಚಿಸಿದರು. ಬಳಿಕ ಬನ್ನಿಮಂಟಪ ಮೈದಾನದಲ್ಲಿ ಸಾಂಸ್ಕೃತಿಕ ವೈಭವ ಮೇಳೈಸಿತು. ಆರಂಭದಲ್ಲಿ ಶಬ್ದ ಮತ್ತು ಬೆಳಕು(ಸೌಂಡ್ ಅಂಡ್ ಲೈಟ್ಸ್) ಪ್ರಸ್ತುತಿ ನೆರೆದಿದ್ದವರ ಗಮನ ಸೆಳೆಯಿತು. ಬಳಿಕ 25 ಮಂದಿ ಸಾರಥ್ಯದಲ್ಲಿ 250 ಕಲಾವಿದರು ವೈವಿಧ್ಯಮಯ ಸಾಂಸ್ಕೃತಿಕ ಲೋಕ ಸೃಷ್ಟಿಸಿದರು. 'ಕನ್ನಡ ನಾಡಿನ ಜೀವನದಿ ಈ ಕಾವೇರಿ...', 'ಐಗಿರಿ ನಂದಿನಿ...', 'ಬೊಂಬೆ ಹೇಳುತೈತೆ...', 'ಈ ಕನ್ನಡ ಮಣ್ಣನು ಮರೀಬೇಡ...', 'ಸಂತೋಷಕ್ಕೆ ಹಾಡು ಸಂತೋಷಕ್ಕೆ...', 'ತೂಫಾನ್ ತೂಫಾನ್...', 'ಅಲೆಲೆ ಅಂಬಾರಿ...', 'ಭಾರಿಸು ಕನ್ನಡ ಡಿಂಡಿಮವ...', 'ಎಲ್ಲಾದರೂ ಇರು ಎಂತಾದರೂ ಇರು...' ಹೀಗೆ ಹಲವು ಗೀತೆಗಳಿಗೆ ನಾಡಿನ ವಿವಿಧ ಕಲಾಪ್ರಕಾರಗಳನ್ನು ಅನಾವರಣಗೊಳಿಸಿದರು. ಬಳಿಕ ಬೆಂಗಳೂರಿನ 'ಡಿಎನ್‌ಎ ಎಂಟರ್‌ಟೈನ್‌ಮೆಂಟ್ ನೆಟ್‌ವರ್ಕ್ಸ್ ಪ್ರೈವೇಟ್ ಲಿಮಿಟೆಡ್' ಸಂಸ್ಥೆಯ ಕಲಾವಿದರು ಶಂಕನಾದದೊಂದಿಗೆ ಕಾರ್ಯಕ್ರಮ ಆರಂಭಿಸಿ, ಜೊಂಬೆ, ಚಂಡೆ, ಕೊಳಲು, ಡ್ರಮ್ ವಾದ್ಯಗಳ ಸಮ್ಮಿಲನದ ಮೂಲಕ ನೆರೆದಿದ್ದವರನ್ನು ರಂಜಿಸಿದರು.

ರೋಚಕ ಟೆಂಟ್ ಪೆಗ್ಗಿಂಗ್: ಅಶ್ವಾರೋಹಿ ದಳದ ಸಿಬ್ಬಂದಿ 9 ಕುದುರೆಗಳೊಂದಿಗೆ ನಡೆಸಿಕೊಟ್ಟ ಟೆಂಟ್ ಪೆಗ್ಗಿಂಗ್ ಅತಿರೋಚಕವಾಗಿತ್ತು. ನಾಗಾಲೋಟದ ಕುದುರೆ ಸವಾರಿಯೊಂದಿಗೆ ನೆಲದಲ್ಲಿ ನೆಟ್ಟಿದ್ದ ಉರಿಯುವ ಗೂಟವನ್ನು ಭರ್ಜಿಯಿಂದ ಚುಚ್ಚಿ ಅದನ್ನು ಮೇಲಕ್ಕೆತ್ತುವ ಸಾಹಸ ಮೈನವಿರೇಳಿಸಿತು. ಕಮಾಚೋ ಅಶ್ವದಲ್ಲಿ ಎಂ.ಎಸ್.ಆನಂದ್‌ಸಿಂಗ್, ವಿಂದ್ಯಾ ಅಶ್ವದಲ್ಲಿ ರುದ್ರಪ್ಪ, ಫಿನಿಷಿಂಗ್ ಟಚ್ ಅಶ್ವದಲ್ಲಿ ಹೆಚ್.ಚಂದ್ರ, ಭದ್ರ ಅಶ್ವದಲ್ಲಿ ಹೆಚ್.ಕೆ.ಸೋಮಣ್ಣ, ಫರ್ನಿಂಡಾದಲ್ಲಿ ಮಲ್ಲಿಕಾರ್ಜುನಸ್ವಾಮಿ, ಸಂಧ್ಯಾ ಅಶ್ವದಲ್ಲಿ ಮಹೇಶ್, ಕಾರುಣಿ ಅಶ್ವದಲ್ಲಿ ಸಂದೇಶ್, ಗೌರಿ ಅಶ್ವದಲ್ಲಿ ಸುರೇಶ್ ಹಾಗೂ ಕ್ಯಾಡಿ ಅಶ್ವದಲ್ಲಿ ರಮೇಶ್ ರಾವ್ ನಾಗಾಲೋಟದಲ್ಲಿ ಸವಾರಿ ನಡೆಸಿ ಬೆಂಕಿಯ ಗೂಟವನ್ನು ಭರ್ಜಿಯಲ್ಲಿ ಮೇಲೆತ್ತಿದರು. ಸೆಕ್ಷನ್ ವೈಸ್, ಇಂಡಿಯನ್ ಫೈರ್ ಎಂಬ ಸಾಮೂಹಿಕ ಟೆಂಟ್ ಪೆಗ್ಗಿಂಗ್‌ನಲ್ಲೂ ಯಶಸ್ವಿಯಾದರು.

ಪಂಜಿನ ಬರಹ: ಪ್ರಮುಖ ಆಕರ್ಷಣೆ ಪಂಜಿನ ಕವಾಯತು ಎಂದಿನಂತೆ ನೆರೆದಿದ್ದವರ ಮನಸೂರೆಗೊಂಡಿತು. ಬೆಂಗಳೂರಿನ ತಣಿಸಂದ್ರ ಪೊಲೀಸ್ ತರಬೇತಿ ಕೇಂದ್ರದ 300 ಪ್ರಶಿಕ್ಷಣಾರ್ಥಿಗಳು ಅತ್ಯುತ್ತಮವಾಗಿ ಪಂಜಿನ ಕವಾಯತು ನಡೆಸಿದರು. ವೆಲ್‌ಕಮ್, ಕರ್ನಾಟಕ ಪೊಲೀಸ್, ವೆಲ್ ಕಮ್ ಟು ಆಲ್, ಹ್ಯಾಪಿ ದಸರಾ, ಜೈ ಚಾಮುಂಡಿ, 75ನೇ ಸ್ವಾತಂತ್ರ್ಯೋತ್ಸವ ಎಂಬ ಇಂಗ್ಲಿಷ್ ಬರಹವನ್ನು ಪಂಜಿನಲ್ಲಿ ಮೂಡಿಸಿದರು. ಹಾಗೆಯೇ 'ನಮ್ಮ ಮೈಸೂರು' ಹಾಗೂ 'ನಮ್ಮ ಹೆಮ್ಮೆ' ಪದ ಜೋಡಣೆ ಅತ್ಯಮೋಘವಾಗಿತ್ತು. ಇದರ ನಡುವೆ ಪೊಲೀಸ್ ವಾದ್ಯವೃಂದದಿಂದ ಮೂಡಿದ ಪ್ರಸಿದ್ಧ ಚಿತ್ರಗೀತೆಗಳ ಹಿಮ್ಮೇಳದಲ್ಲಿ ಕ್ರಾಸ್‌ಕಟ್, ಸ್ವಸ್ತಿಕ್ ಇನ್ನಿತರ ಆಕೃತಿಗಳು ಮೂಡುವಂತೆ 8 ಬಗೆಯ ಎಕ್ಸರ್‌ಸೈಜ್ ಪ್ರಸ್ತುತಪಡಿಸಿದರು.

ಬಾಣ ಬಿರುಸಿನ ಚಿತ್ತಾರ: ಮೊದಲ ಬಾರಿ ಪ್ರಸ್ತುತಗೊಂಡ 'ಡ್ರೋಣ್ ಶೋಟ್' ಬಳಿಕ ಬಾಣ ಬಿರುಸುಗಳು ಆಗಸದಲ್ಲಿ ಬಣ್ಣ ಬಣ್ಣದ ಚಿತ್ತಾರ ಮೂಡಿಸಿದವು. ಪಟಾಕಿ ಸದ್ದು ಹಾಗೂ ಬಣ್ಣದ ಸೊಬಗಿನೊಂದಿಗೆ ಈ ಬಾರಿಯ ನಾಡಹಬ್ಬ ಮೈಸೂರು ದಸರೆಗೆ ಅದ್ದೂರಿ ತೆರೆ ಬಿದ್ದಿತು. ಶಾಸಕರಾದ ತನ್ವೀರ್ ಸೇಠ್, ಎಲ್.ನಾಗೇಂದ್ರ ನಿರಂಜನ್, ಡಾ.ಡಿ.ತಿಮ್ಮಯ್ಯ, ಮೇಯರ್ ಎಂ.ಶಿವಕುಮಾರ್ ಮತ್ತಿತರರ ಗಣ್ಯರು ಕಾರ್ಯಕ್ರಮಕ್ಕೆ ಸಾಕ್ಷಿಯಾಗಿದ್ದರು.

ಕಣ್ಮನ ಸೆಳೆದ ನಾಡಿನ ಕಲೆ, ಸಂಸ್ಕೃತಿ ಅನಾವರಣಗೊಳಿಸಿದ ಜಾನಪದ ಕಲಾತಂಡಗಳು



















ಮೈಸೂರು: ಜಂಬೂಸವಾರಿ ಮೆರವಣಿಗೆಯಲ್ಲಿ ನಾಡಿನ ಕಲೆ, ಸಂಸ್ಕೃತಿ, ನೃತ್ಯ, ಜಾನಪದ ಹಾಗೂ ಪರಂಪರೆಯನ್ನು ಬಿಂಬಿಸುವ 62 ಜಾನಪದ ಕಲಾತಂಡಗಳು ಪಾಲ್ಗೊಂಡಿದ್ದವು. ಮಹದೇವಪ್ಪ ಉಡಿಗಾಲ ಮತ್ತು ಮಲ್ಲೇಶಯ್ಯ ನೇತೃತ್ವದ ನಂದಿಧ್ವಜ, ಅಂಬಳೆ ಶಿವಣ್ಣ ಅವರ ತಂಡದ ವೀರಗಾಸೆ ಕುಣಿತ, ವೀರಪ್ಪ ಫಕೀರಪ್ಪ ಮರಳಿಹಳ್ಳಿ ಅವರ ಪುರವಂತಿಕೆ, ಸಿ.ಹೆಚ್. ಶಿವಕುಮಾರ್ ಹಾಗೂ ಬಿ.ಕೆ. ನರಸಿಂಹರಾಜು ನೇತೃತ್ವದ ಕೊಂಬು ಕಹಳೆ, ಪಟ ಕುಣಿತ, ಕೀಲು ಕುದುರೆ, ಕೋಲಾಟ, ಚಿಟ್‌ಮೇಳ, ಕಣಿ ವಾದನ, ಹೂವಿನ ನೃತ್ಯ, ಹೆಜ್ಜೆ ಮೇಳೆ, ತಮಟೆ ನಗಾರಿ, ಯಕ್ಷಗಾನ ಗೊಂಬೆ, ಪೂಜಾ ಕುಣಿತ, ಲಂಬಾಣಿ ನೃತ್ಯ, ಹಗಲುವೇಷ, ತಮಟೆ ವಾದನ, ದಟ್ಟಿ ಕುಣಿತ, ಕುಡುಬಿ ನೃತ್ಯ, ಸಿಂಗಾರಿ ಮೇಳ, ಮರಗಾಲು ಕುಣಿತ, ದೊಣ್ಣೆವರಸೆ, ಜಗ್ಗಲಗಿ ಮೇಳ, ಹಾಲಕ್ಕಿ ಸುಗ್ಗಿ, ಗೇರ್ ನೃತ್ಯ, ಜಡೆ ಕೋಲಾಟ, ಮಲೆನಾಡು ಸುಗ್ಗಿ ಕುಣಿತ, ಬೇಡರ ವೇಷ, ಉರುಮೆ ವಾದ್ಯ, ನವಿಲು ನೃತ್ಯ, ಮುಳ್ಳು ಕುಣಿತ, ಸಂಬಾಳ ಮೇಳ, ಕರಡಿ ಮಜಲು, ಝಾಂಜ್ ಫಥಕ್, ಕಥಕಳಿ ಗೊಂಬೆ, ಗೊರವರ ಕುಣಿತ, ಡೊಳ್ಳು ಕುಣಿತ, ಗುಮಟಪಾಂಗ, ನಂದಿಕೋಲು, ಚಿನ್ನಿಕೋಲು, ಕಂಗಿಲು ನೃತ್ಯ, ಸೋಮನ ಕುಣಿತ, ಕೋಳಿ ನೃತ್ಯ, ಪೂಜಾ ಕುಣಿತ, ರಾಕ್ಷಸ ವೇಷ, ಚಂಡೇ ವಾದನ, ಢಮಾಯಿ ನೃತ್ಯ, ರಾಜಸ್ತಾನ ಮತ್ತು ಪಶ್ಚಿಮ ಬಂಗಾಳದ ಗೂಮರ್ ನೃತ್ಯ, ಪುರ್ಲಿಯಾಚಾವ ನೃತ್ಯ, ತೆಲಂಗಾಣದ ಮಥುರಿ ನೃತ್ಯ, ಪಂಜಾಬ್‌ನ ಚಿಂದುವಾ ನೃತ್ಯ, ಜಮ್ಮು-ಕಾಶ್ಮೀರದ ಡೋಂಗ್ರಿ ನೃತ್ಯ, ತಮಿಳುನಾಡಿನ ತಪ್ಪಟಂ ನೃತ್ಯ ಸೇರಿದಂತೆ ರಾಜ್ಯ ಹಾಗೂ ಹೊರ ರಾಜ್ಯಗಳ ಕಲಾತಂಡಗಳು ವಿಶಿಷ್ಟ ಕಲೆ ಮತ್ತು ಸಂಸ್ಕೃತಿಯನ್ನು ಅನಾವರಣಗೊಳಿಸಿದವು.

ಮೈನವಿರೇಳಿಸಿದ ಮುಳ್ಳಿನ ಕುಣಿತ



ಮೈಸೂರು,ಅ.5(ಪಿಎಂ)- ಜಂಬೂಸವಾರಿ ಮೆರವಣಿಗೆಯಲ್ಲಿ ಕಲಾವಿದರ ತಂಡವೊಂದು ಮುಳ್ಳಿನಿಂದ ಮಾಡಿದ ಚೌಕಗಳ ನಡುವೆ ಹೆಜ್ಜೆ ಹಾಕಿ ಮೈನವಿರೇಳಿಸಿತು. ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲೂಕಿನ ಗೋವನಕೊಪ್ಪದ ತಂಡವು 'ಮುಳ್ಳು ಕುಣಿತ' ಕಲಾ ಪ್ರದರ್ಶನದೊಂದಿಗೆ ನೋಡುಗರು ಉಸಿರು ಬಿಗಿ ಹಿಡಿಯುವಂತೆ ಮಾಡಿತು. ಮಂಜುನಾಥ ವೆಂಕಪ್ಪದ್ಯಾವಣ್ಣನವರ ನೇತೃತ್ವದ ಕಾವೇರಿ ಕಲಾ ತಂಡ ಇಂತಹ ರೋಚಕ ನೃತ್ಯದ ಮೂಲಕ ನೋಡುಗರಲ್ಲಿ ರೋಮಾಂಚನ ಉಂಟುಮಾಡಿತು. ಒಟ್ಟು 20 ಮಂದಿಯ ಕಲಾತಂಡದಲ್ಲಿ ಐವರು ತಮಟೆ ಬಾರಿಸಿದರೆ, ಉಳಿದವರು ಮುಳ್ಳಿನ ಚೌಕಗಳ ನಡುವೆ ಕಾಲಿಗೆ ಮುಳ್ಳುಗಳು ತಾಗದಂತೆ ಉಪಾಯದ ಹೆಜ್ಜೆ ಹಾಕಿ, ರೋಮಾಂಚನಗೊಳಿಸಿದರು.

ಡೊಳ್ಳು-ತಮಟೆ ಸದ್ದಿಗೆ ಮಕ್ಕಳ ನರ್ತನ



ಮೈಸೂರು,ಅ.5(ಪಿಎಂ)- ಕಲಾತಂಡಗಳ ಡೊಳ್ಳು-ತಮಟೆ ಸದ್ದಿಗೆ ರಸ್ತೆ ಇಕ್ಕೆಲಗಳಲ್ಲಿ ಮೆರವಣಿಗೆ ವೀಕ್ಷಿಸುತ್ತಿದ್ದ ಹಲವು ಮಕ್ಕಳು ನರ್ತಿಸಿ, ಸಂಭ್ರಮಿಸಿದರು. ಮಟಾಣಿಗಳು ಹಾಕುತ್ತಿದ್ದ ಹೆಜ್ಜೆ ಕಂಡು ಕಲಾವಿದರೂ ಮತ್ತಷ್ಟು ಉತ್ಸಾಹದಲ್ಲಿ ತಮ್ಮ ಕಲಾ ಕೌಶಲ್ಯ ಮೆರೆದರು.

ಮೆರವಣಿಗೆ ಉದ್ದಕ್ಕೂ ಬರುತ್ತಿದ್ದ ವಿವಿಧ ಕಲಾತಂಡಗಳ ಕಲಾ ಪ್ರದರ್ಶನ ಕಂಡ ಮಕ್ಕಳಲ್ಲಿ ಅಲ್ಲಲ್ಲಿ ತಮ್ಮದೇ ಶೈಲಿಯ ನೃತ್ಯದೊಂದಿಗೆ ಉತ್ಸಾಹ ವ್ಯಕ್ತಪಡಿಸಿದರು. ಅಲ್ಲದೆ, ಹಲವು ಕಲಾವಿದರೂ ಮಕ್ಕಳ ಬಳಿ ಹೋಗಿ ಅವರ ಸಮೀಪದಲ್ಲೇ ತಮ್ಮ ಕಲಾ ಪ್ರದರ್ಶನ ನೀಡುವ ಮೂಲಕ ಅವರಲ್ಲಿ ಮತ್ತಷ್ಟು ಹುರುಪು ತುಂಬಿದರು.

ಸೆಲ್ಫಿಗೆ ಮುಗಿಬಿದ್ದ ಯುವ ಜನತೆ

ಮೈಸೂರು,ಅ.5(ಎಸ್‌ಪಿಎನ್)-'ಮಳೆ ನಿಂತರೂ, ಮರದ ಹನಿ ನಿಲ್ಲುವುದಿಲ್ಲ' ಎಂಬ ಗಾದೆ ಮಾತಿನಂತೆ ಜಂಬೂ ಸವಾರಿ ತೆರಳಿದ ನಂತರವೂ ಯುವಕ-ಯುವತಿಯರು ರಾಜಪಥದ ಮಧ್ಯೆದಲ್ಲೇ ನಿಂತು ಸೆಲ್ಫಿಗೆ ಮುಗಿಬಿದ್ದ ದೃಶ್ಯ ಕಂಡುಬಂತು.



ಅಂಬಾರಿ ಕೆ.ಆರ್. ವೃತ್ತದಿಂದ ಮುಂದೆ ಸಾಗಿದ ನಂತರ ಅರಮನೆ ಆವರಣ, ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನ ಮುಂಭಾಗ ಹಾಗೂ ಚಾಮರಾಜ ಒಡೆಯರ್ ವೃತ್ತ ಮತ್ತು ರಸ್ತೆ ಇಕ್ಕೆಲಗಳಲ್ಲಿ ನೆರದಿದ್ದ ಭಕ್ತರು ಕೃಷ್ಣರಾಜ ಒಡೆಯರ್ ಪ್ರತಿಮೆ ಮತ್ತು ಚಾಮರಾಜ ಒಡೆಯರ್ ಪ್ರತಿಮೆ ಬಳಿ ಆಗಮಿಸಿ ಸೆಲ್ಫಿ ತೆಗೆದುಕೊಳ್ಳುತ್ತಿದ್ದರು.

ಮೊದಮೊದಲು ರಾಜಪಥದಲ್ಲಿ ಬರುತ್ತಿದ್ದ ಸಾರ್ವಜನಿಕರನ್ನು ಪೊಲೀಸರು ತಡೆಗಟ್ಟುವ ಪ್ರಯುತ್ನ ಮಾಡಿದರು. ಕ್ರಮೇಣ ಸಾಗರೋಪಾದಿಯಲ್ಲಿ ಕೆ.ಆರ್.ವೃತ್ತಕ್ಕೆ ಆಗಮಿಸಿದ ಜನ ಸಮೂಹವನ್ನು ಕಂಡು ಪೊಲೀಸರು ಮೌನಕ್ಕೆ ಶರಣಾದರು. ಇನ್ನೊಂದೆಡೆ ಜಾನಪದ ಕಲಾವಿದರು ಜಂಬೂಸವಾರಿ ಮೆರವಣಿಗೆಯಲ್ಲಿ ಬನ್ನಿಮಂಟಪ ತಲುಪಿ, ಪುನಃ ಅದೇ ಮಾರ್ಗದಲ್ಲಿ ಆಗಮಿಸುತ್ತಿದ್ದ ವೇಳೆ ಕೆಲ ಕಲಾವಿದರೊಂದಿಗೆ ಸಾರ್ವಜನಿಕರು ಸೆಲ್ಫಿ ತೆಗೆದುಕೊಳ್ಳಲು ಮುಂದಾಗುತ್ತಿದ್ದರು. ಇನ್ನು ಕೆಲವರು ರಸ್ತೆ ಮಧ್ಯೆಯಲ್ಲಿ ಬೈಕ್ ನಿಲ್ಲಿಸಿಕೊಂಡು ಭಾವಚಿತ್ರ ತೆಗೆದು ಖುಷಿಪಟ್ಟರೆ, ಇನ್ನು ಕೆಲವರು, ದೀಪಾಲಂಕಾರ ಎಲ್‌ಇಡಿ ಗುಚ್ಛಗಳನ್ನು ಹಿಡಿದು ಭಾವಚಿತ್ರ ತೆಗೆಸಿಕೊಳ್ಳುತ್ತಿದ್ದರು. ಈ ದೃಶ್ಯ ಸಂಜೆ 7ರಿಂದ 9ರವರೆಗೂ ಕಂಡು ಬಂತು.

ನೂಕಾಟಕ್ಕೆ ಹೈರಾಣ



ಮೈಸೂರು,ಅ.5(ಪಿಎಂ)-ಪ್ರತಿವರ್ಷ ಸಯ್ಯಾಜಿರಾವ್ ರಸ್ತೆಗೆ ಸಂಪರ್ಕ ಕಲ್ಪಿಸುವ ರಸ್ತೆಗಳಲ್ಲಿ ನೂಕು ನುಗ್ಗಲು ಉಂಟಾಗುತ್ತಿದ್ದು, ಇದನ್ನು ನಿಯಂತ್ರಿಸುವ ಬಗ್ಗೆ ಗಂಭೀರ ಕ್ರಮ ಅಗತ್ಯವಿದೆ ಎಂಬುದು ಹಲವು ಪ್ರಜ್ಞಾವಂತ ನಾಗರಿಕರ ಅಭಿಪ್ರಾಯ. ಇಲ್ಲವಾದರೆ ಮುಂದೊಂದು ಸಂದರ್ಭದಲ್ಲಿ ಇದರಿಂದ ಭಾರೀ ಅನಾಹುತ ಎದುರಾಗುವ ಸಾಧ್ಯತೆ ತಳ್ಳಿ ಹಾಕುವಂತಿಲ್ಲ ಎಂಬ ಆತಂಕ ವ್ಯಕ್ತಪಡಿಸಿದ್ದಾರೆ. ಈ ಸಂಪರ್ಕ ರಸ್ತೆಗಳಲ್ಲಿ ಜಂಬೂಸವಾರಿಯಂದು ಸಂಚಾರಕ್ಕೆ ನಿರ್ಬಂಧ ವಿಧಿಸಲಾಗುತ್ತದೆ. ಈ ಹಿನ್ನೆಲೆಯಲ್ಲಿ ಇಂತಹ ರಸ್ತೆಗಳಲ್ಲಿ ಸಾಕಷ್ಟು ದೂರದವರೆಗೆ ಜನ ದಟ್ಟಣೆ ಪ್ರತಿವರ್ಷ ಸರ್ವೇ ಸಾಮಾನ್ಯ. ಇಲ್ಲಿ ಸೇರುವ ಭಾರೀ ಜನತೆಯನ್ನು ನಿಯಂತ್ರಿಸಲು ಒಬ್ಬರ ಮೇಲೆ ಒಬ್ಬರು ಬೀಳದಂತೆ ಬ್ಯಾರಿಕೇಡ್ ಅಳವಡಿಸುವ ಜೊತೆಗೆ ಈ ರಸ್ತೆಗಳಲ್ಲಿ ವಾಹನಗಳ ನಿಲುಗಡೆಗೆ ನಿಷೇಧ ವಿಧಿಸಬೇಕೆಂಬುದು ಕಳಕಳಿವುಳ್ಳ ನಾಗರಿಕರ ಆಗ್ರಹವಾಗಿದೆ.

ಈ ಬಾರಿ ಹೈವೇ ವೃತ್ತದ ಜೋಡಿ ತೆಂಗಿನಮರ ರಸ್ತೆಯಲ್ಲಿ ಸಾಕಷ್ಟು ನೂಕು ನುಗ್ಗಲು ಉಂಟಾಗಿದ್ದು, ಅದೃಷ್ಟವಶಾತ್ ಯಾವುದೇ ಅನಾಹುತ ಸಂಭವಿಸಿಲ್ಲ. ಹೈವೆ ವೃತ್ತದಲ್ಲಿ ಸಾಗಿ ಹೋಗುವ ಜಂಬೂಸವಾರಿ ಮೆರವಣಿಗೆ ವೀಕ್ಷಿಸಲು ಭಾರೀ ಸಂಖ್ಯೆಯಲ್ಲಿ ಜನರಿದ್ದರಿಂದ ಇಲ್ಲಿ ಆಗಾಗ್ಗೆ ನೂಕು ನುಗ್ಗಲು ಉಂಟಾಗುತ್ತಲೇ ಇತ್ತು. ಇದನ್ನು ನಿಯಂತ್ರಿಸಲು ಪೊಲೀಸರು ಪರದಾಡುತ್ತಿದ್ದರೆ, ಇಲ್ಲಿದ್ದ ಮಹಿಳೆಯರು, ವೃದ್ಧರು, ಮಕ್ಕಳು ಹಿಂಬದಿಯಿಂದ ತಳ್ಳುತ್ತಿದ್ದರಿಂದ ಸಾಕಷ್ಟು ಯಾತನೆ ಅನುಭವಿಸಿದರು. ಅಲ್ಲದೆ, ಕೆಲ ಪುಂಡರು, ಮದ್ಯಪಾನಿಗಳ ಉಪಟಳದಿಂದ ಹಿರಿಯರು, ಮಕ್ಕಳು ಸಾಕಷ್ಟು ಕಿರಿಕಿರಿ ಅನುಭವಿಸಿದರು.

ವಹಿವಾಟಿನೊಂದಿಗೆ ಜಂಬೂಸವಾರಿ ಕಣ್ತುಂಬಿಕೊಂಡ ಮಳಿಗೆ ಮಾಲೀಕರು

ಮೈಸೂರು,ಅ.5(ಪಿಎಂ)- ಸಯ್ಯಾಜಿರಾವ್ ರಸ್ತೆಯಲ್ಲಿ ಕೆಲವು ಮಳಿಗೆಗಳು ತೆರೆದು ವಹಿವಾಟು ನಡೆಸಿದವು. ಚಿಲ್ಲರೆ ಅಂಗಡಿ, ಚಹಾ ಮಳಿಗೆ, ಬೇಕರಿ ಮೊದಲಾದ ಕೆಲ ಮಳಿಗೆಗಳು ಈ ರಸ್ತೆಯ ಇಕ್ಕೆಲಗಳ ಜನಜಂಗುಳಿ ನಡುವೆಯೂ ತೆರೆದು, ವ್ಯಾಪಾರ ನಡೆಸಿದವು.



ಆ ಮೂಲಕ ವ್ಯಾಪಾರದ ಜೊತೆಗೆ ಜಂಬೂಸವಾರಿಯನ್ನೂ ಮಳಿಗೆ ಮಾಲೀಕರು ಕಣ್ತುಂಬಿಕೊಂಡರು. ಜಂಬೂಸವಾರಿ ಮೆರವಣಿಗೆಯಂದು ಈ ರಸ್ತೆಯ ಬಹುತೇಕ ಎಲ್ಲಾ ಮಳಿಗೆಗಳು ಮುಚ್ಚುವುದು ಸಾಮಾನ್ಯ. ಆದರೆ ಕೆಲವರು ಅಲ್ಲಲ್ಲಿ ತಮ್ಮ ಮಳಿಗೆ ತೆರೆದು ವ್ಯಾಪಾರದೊಂದಿಗೆ ಮೆರವಣಿಗೆಯನ್ನೂ ನೋಡಿ ಸಂಭ್ರಮಿಸಿದರು. ಅಷ್ಟೇ ಅಲ್ಲದೆ, ವ್ಯಾಪಾರವೂ ಜೋರಾಗಿಯೇ ಇತ್ತು.

ಇದೇ ಮೊದಲು ದೀಪಾಲಂಕಾರದ ನಡುವೆ ಸಾಗಿದ ಜಂಬೂಸವಾರಿ

ಮೈಸೂರು, ಅ.5-ದಸರಾ ಮಹೋತ್ಸವದ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಜಂಬೂಸವಾರಿ ಮೆರವಣಿಗೆಯು ವರ್ಣರಂಜಿತ ದೀಪಾಲಂಕಾರದ ನಡುವೆ ಸಾಗಿ ಬಂದಿದೆ.

ಇಂದು ಚಿನ್ನದ ಅಂಬಾರಿಯಲ್ಲಿ ಆಸೀನಳಾಗಿರುವ ಚಾಮುಂಡೇಶ್ವರಿ ದೇವಿಗೆ ಪುಷ್ಪಾರ್ಚನೆ ಮಾಡುವ ಶುಭ ಘಳಿಗೆಯನ್ನು ಸಂಜೆ 5.07 ರಿಂದ 5.15ರವರೆಗೆ ನಿಗದಿಪಡಿಸಿದ ಕಾರಣ ಕತ್ತಲಾವರಿಸಿದ್ದರಿಂದ ದೀಪಾಲಂಕಾರದ ನಡುವೆ ಜಂಬೂಸವಾರಿ ಮೆರವಣಿಗೆ ಸಾಗಿದೆ. ಈ ಬಾರಿ ಜಂಬೂಸವಾರಿಯು ದೀಪಾಲಂಕಾರದ ನಡುವೆಯೇ ನಡೆಯಲಿದೆ ಎಂಬುದನ್ನು ಮನಗಂಡಿದ್ದ ಅರಣ್ಯ ಇಲಾಖೆ ಅಧಿಕಾರಿಗಳು, ಜಂಬೂಸವಾರಿಯಲ್ಲಿ ಸಾಗಿ ಬರುವ ಗಜಪಡೆಗೆ ಪ್ರಜ್ವಲಿಸುವ ಬೆಳಕಿನ ಪರಿಚಯವಾಗಬೇಕೆಂಬ ಕಾರಣದಿಂದ ದೀಪಾಲಂಕಾರವನ್ನು ಮೂರು ದಿನ ಮುಂಚಿತವಾಗಿಯೇ ಆರಂಭಿಸಬೇಕೆಂದು ಚೆಸ್ಕಾಂಗೆ ಮನವಿ ಮಾಡಿದ್ದರು. ಅದರಂತೆ ಪ್ರಜ್ವಲಿಸುವ ವಿದ್ಯುತ್ ದೀಪಗಳ ನಡುವೆ ಹೆಜ್ಜೆ ಹಾಕುವ ತಾಲೀಮನ್ನೂ ಕೂಡ ಗಜಪಡೆಗೆ ನಡೆಸಲಾಗಿತ್ತು.



ಅದ್ದೂರಿ ದಸರಾದಲ್ಲೂ ಕಿರಿಕಿರಿ ಮಾರಾಯ್ರೆ...!



ಮೈಸೂರು, ಅ.5– ಈ ಬಾರಿಯ ದಸರಾ ಉತ್ಸವ ಮುಗಿದಿದೆ. ಅದ್ದೂರಿಯಾಗಿ ಯಶಸ್ವಿಯೂ ಆಗಿದೆ. ಕಳೆದ ಎರಡು ವರ್ಷದಿಂದ ಕೊರೊನಾ ಕಂಟಕದಿಂದ ಸರಳ ಹಾಗೂ ಸಾಂಪ್ರದಾಯಿಕ ಆಚರಣೆಗೆ ಸೀಮಿತವಾಗಿತ್ತು. ಆದರೆ ಈ ಬಾರಿ ಅದ್ದೂರಿ ದಸರಾ ಆಚರಣೆ ಎಂದು ಸರ್ಕಾರ ಘೋಷಿಸುತ್ತಿದ್ದಂತೆ ರಾಜ್ಯ, ದೇಶದ ಜನರು ಮೈಸೂರಿನತ್ತ ಮುಖ ಮಾಡಿದ್ದರು. ಯಾವುದೇ ಅದ್ದೂರಿ ಉತ್ಸವ, ಮನರಂಜನೆ ಇಲ್ಲದೇ ಕೊರೊನಾ ಭೀತಿಯಿಂದ ತತ್ತರಿಸಿದ್ದ ಜನತೆ ಈ ಬಾರಿಯ ಮೈಸೂರು ದಸರಾ ಅದ್ದೂರಿ ಆಚರಣೆಯಲ್ಲಿ ಸಂಭ್ರಮಿಸಲು ಮೈಸೂರಿಗೆ ಲಗ್ಗೆ ಇಟ್ಟರು. ಎರಡು ವರ್ಷದ ಜನ ಒಂದೇ ಬಾರಿಗೆ ಮೈಸೂರಿಗೆ ಆಗಮಿಸಿದ್ದಂತೆ ಭಾಸವಾಗುತ್ತಿತ್ತು. ಎಲ್ಲಿ ನೋಡಿದರಲ್ಲಿ ಜನಸಾಗರ ಕಂಡು ಬರುತ್ತಿತ್ತು.

ಸ್ಥಳೀಯರು ಆರಂಭದಿಂದಲೂ ನಾನಾ ಸಾಂಸ್ಕೃತಿಕ ಕಾರ್ಯಕ್ರಮಗಳು, ಸ್ಪರ್ಧೆಗಳಲ್ಲಿ ಆಸಕ್ತಿಯಿಂದ ಭಾಗವಹಿಸಿದ್ದರು. ಈ ಸಲ ಅಧಿಕ ಪ್ರಮಾಣದಲ್ಲಿ ದೀಪಾಲಂಕಾರ ಮಾಡಿದ್ದರಿಂದ ರಾತ್ರಿ ಅಂದದ ಬೆಳಕಿನ ಸೊಬಗನ್ನು ಸವಿದರು. ಆಹಾರ ಮೇಳದಲ್ಲಿ ಇಷ್ಟದ ಖಾದ್ಯ ಸವಿದರು. ಅರಮನೆ ಅಂದಕ್ಕೆ ಮಾರುಹೋದರೆ, ಕ್ರೀಡಾಕೂಟದಲ್ಲಿ ಅದರಲ್ಲೂ ಕುಸ್ತಿ ಪಂದ್ಯಾವಳಿಯಲ್ಲಿ ಸೆಣಸಾಟ ಕಂಡು ರೋಚಕ ಅನುಭವ ಪಡೆದರು. ಜೊತೆಗೆ ಕವಿಗೋಷ್ಠಿಗಳಲ್ಲಿ ಪಾಲ್ಗೊಂಡು ಬುದ್ಧಿ ಕಸರತ್ತು ಮೆರೆದರು. ಮಕ್ಕಳು, ಮಹಿಳೆಯರೂ ಸಂಭ್ರಮಿಸಿದರು. ಸಾಕು ಪ್ರಾಣಿಗಳ ಪ್ರದರ್ಶನ ಮುದ ನೀಡಿದರೆ, ಫಲಪುಷ್ಪ ಪ್ರದರ್ಶನ ಮನಸೂರೆಗೊಂಡಿದೆ. ಕೊನೆಗೆ ಜಂಬೂ ಸವಾರಿ ಧರೆಯಲ್ಲಿ ದೇವಲೋಕವನ್ನೇ ದರ್ಶಿಸಿದೆ. ಈ ಬಾರಿಯ ದಸರಾ ಮಹೋತ್ಸವ ಅವಲೋಕಿಸಿದರೆ ಹಲವು ಸಂಗತಿಗಳು ಜನರಲ್ಲಿ ಸವಿಯ ಜೊತೆಗೆ ಕಹಿ ಅನುಭವವನ್ನು ನೀಡಿದೆ.

ದಸರಾವೂ 'ಪಕ್ಷ'ಪಾತ: ಈ ಬಾರಿಯ ದಸರಾ ಮಹೋತ್ಸವದಲ್ಲಿ ರಾಜ್ಯದ ಆಡಳಿತಾರೂಢ ಬಿಜೆಪಿಯ ಮುಖಂಡರು ಹಾಗೂ ಕಾರ್ಯಕರ್ತರು ಎಲ್ಲಾ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡರು. ಕೆಲವೊಂದು ಕಾರ್ಯಕ್ರಮಗಳಿಗೆ ಚಾಲನೆ ನೀಡಬೇಕಾದ ಸಂಬಂಧಪಟ್ಟ ಸಚಿವರು ಗೈರು ಹಾಜರಾದರು. ಅದನ್ನು ಮೈಸೂರು ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ನಿಭಾಯಿಸಿಕೊಂಡು ಬಂದರು. ವಿಪಕ್ಷಗಳಾದ ಕಾಂಗ್ರೆಸ್ ಮತ್ತು ಜೆಡಿಎಸ್ ಮುಖಂಡರೂ ಹಾಗೂ ಕಾರ್ಯಕರ್ತರು ಹೆಚ್ಚಾಗಿ ಕಂಡು ಬರಲಿಲ್ಲ. ಆದರೆ, ಚಾಮುಂಡೇಶ್ವರಿ ಕ್ಷೇತ್ರದ ಶಾಸಕರಾದ ಜಿ.ಟಿ.ದೇವೇಗೌಡ ಹಾಗೂ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಬಹುತೇಕ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದರು. ಉಳಿದಂತೆ ಅವರವರ ಕ್ಷೇತ್ರದಲ್ಲಿ ರೈತ ದಸರಾ ಸೇರಿದಂತೆ ಕೆಲವೊಂದು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಆಯಾ ಕ್ಷೇತ್ರದ ಶಾಸಕರು ನೇತೃತ್ವ ವಹಿಸಿದ್ದರು. ನಾಡಹಬ್ಬ ನಾಡಿನ ಜನತೆಯ ಹಬ್ಬವಾಗಬೇಕಿತ್ತು. ಆದರೆ 'ರಾಜಕಾರಣ' ಇದರಲ್ಲೂ ನುಸುಳಿ ದಸರಾವೂ ಇತ್ತೀಚಿನ ವರ್ಷಗಳಲ್ಲಿ 'ಪಕ್ಷ'ಪಾತವಾಗುತ್ತಿದೆ ಎಂದು ಜನ ದೂರಿದ್ದಾರೆ.

ಬೈಕ್ ಸವಾರರ ಹಾವಳಿ: ಮೈಸೂರಿನ ಬಹುತೇಕ ರಸ್ತೆ ಹಾಗೂ ವೃತ್ತಗಳಿಗೆ ದೀಪಾಲಂಕಾರ ಮಾಡಿದ್ದರಿಂದ, ಜನ ಬೆಳಕಿನ ಸವಿ ಸಮಯ ಕಳೆಯುವ ಸಲುವಾಗಿ ವಾಹನಗಳಲ್ಲಿ ಸುತ್ತು ಹಾಕುವ ಪ್ರಯತ್ನ ಮಾಡಿದರು. ಇದರಿಂದ ಎಲ್ಲೆಡೆ ಟ್ರಾಫಿಕ್ ಜಾಮ್ ಉಂಟಾಗಿತ್ತು. ಸಿಗ್ನಲ್‌ಗಳಲ್ಲಿ ಕಿಲೋ ಮೀಟರ್‌ಗಟ್ಟಲೆ ವಾಹನಗಳು ಸಾಲುಗಟ್ಟಿದ್ದವು. ಇಂತಹ ಸಂದರ್ಭದಲ್ಲಿ ಹಲವೆಡೆ ಕೆಲವು ಬೈಕ್ ಸವಾರರು, ಭಾರೀ ಸದ್ದು ಮಾಡುತ್ತಾ, ಕೇಕೆ ಹಾಕುತ್ತಾ ವಾಹನಗಳ ನಡುವೆ ನುಸುಳಿಕೊಂಡು ಹೋಗುವ ಪ್ರಯತ್ನ ಮಾಡಿದ್ದಲ್ಲದೇ, ಅನೇಕ ವಾಹನಗಳಿಗೆ ಸಣ್ಣಪುಟ್ಟದಾಗಿ ಹಾನಿಯನ್ನೂ ಮಾಡಿದ ಬಗ್ಗೆ ಸಾರ್ವಜನಿಕರು ದೂರಿದ್ದಾರೆ. ಕೆಲವು ಸಿಗ್ನಲ್‌ಗಳಲ್ಲಿ ಏಕಾಏಕಿ ಬೈಕ್ ನುಗ್ಗಿಸಿ ಕೊಂಡು ಹೋದ ಬಗ್ಗೆಯೂ ವರದಿಯಾಗಿದೆ.

ಬಹುತೇಕ ರಸ್ತೆ ಧೂಳುಮಯ: ಮೈಸೂರಲ್ಲಿ ಬಹುತೇಕ ಕಡೆಗಳಲ್ಲಿ ಒಂದಲ್ಲಾ ಒಂದು ಕಾಮಗಾರಿ ನಡೆಯುತ್ತಿದೆ. ಒಳಚರಂಡಿ, ಖಾಸಗಿ ಕಂಪನಿಗಳ ಕೇಬಲ್, ಮನೆ–ಮನೆಗೆ ಗ್ಯಾಸ್ ಸಂಪರ್ಕ ಪೈಪ್, ನೀರಿನ ಪೈಪ್ ಅಳವಡಿಕೆ ಹೀಗೆ ನಾನಾ ಕಾರಣಕ್ಕೆ ರಸ್ತೆಯನ್ನು ಅಗೆದು ಕಾಮಗಾರಿ ಮುಗಿದ ನಂತರ ಮಣ್ಣಿಂದ ಮುಚ್ಚಲಾಗಿದೆ. ವಾಹನಗಳು ಇದರ ಮೇಲೆ ಹಾದು ಹೋದಾಗ ಧೂಳು ಏಳುತ್ತದೆ. ಹಿಂದೆ ಬರುವಂತಹ ವಾಹನಗಳಿಗೆ ಅರೆ ಕ್ಷಣ ಮುಂದಿನ ದಾರಿಯೇ ಕಾಣದಷ್ಟು ದಟ್ಟ ಧೂಳು ಆವರಿಸುತ್ತಿದೆ. ಇದರಿಂದ ಬಹುತೇಕ ವಾಹನ ಸವಾರರು ಹಿಡಿಶಾಪ ಹಾಕಿದ್ದಾರೆ. ದಸರಾ ಸಂದರ್ಭದಲ್ಲಾದರೂ ರಸ್ತೆಗಳು ಸುಸ್ಥಿತಿಯಲ್ಲಿ ಇರಬಾರದೇ? ಅಧಿಕಾರಿಗಳಿಗೆ ಬುದ್ಧಿ ಇಲ್ಲವೇ ಎಂದು ಕಿಡಿಕಾರಿದ್ದಾರೆ.

ವಾಹನಗಳದ್ದೇ ಕಾರುಬಾರು: ಈ ಬಾರಿಯ ದಸರಾದಲ್ಲಿ ಮೈಸೂರು ರಸ್ತೆಗಳಲ್ಲಿ ವಾಹನಗಳದ್ದೇ ಕಾರುಬಾರು. ಈಗಾಗಲೇ ಮೈಸೂರಲ್ಲಿ ವಾಹನಗಳ ಸಂಖ್ಯೆ ಹೆಚ್ಚಾಗಿದೆ. ದಸರಾ ದೀಪಾಲಂಕಾರ ಹಾಗೂ ವಿವಿಧ ಕಾರ್ಯಕ್ರಮಗಳ ವೀಕ್ಷಿಸಲು ಬರುವವರು ವಾಹನಗಳಲ್ಲಿ ಆಗಮಿಸಿದ್ದರಿಂದ ಎಲ್ಲೆಡೆ ಪ್ರತಿನಿತ್ಯ ಟ್ರಾಫಿಕ್‌ಜಾಮ್ ಉಂಟಾಗುತ್ತಿತ್ತು. ಇದರಿಂದ ಗಂಟೆಗಟ್ಟಲೆ ವಾಹನ ಸಂಚಾರ ವ್ಯತ್ಯಯವಾಗುತ್ತಿತ್ತು. ಇದನ್ನು ನಿವಾರಿಸಲು ಸಂಚಾರಿ ಪೊಲೀಸರು ಹರಸಾಹಸಪಡಬೇಕಾದ ಪರಿಸ್ಥಿತಿ ಉಂಟಾಗಿತ್ತು.

ಪ್ರಚಾರದ ಕೊರತೆ: ಈ ಬಾರಿಯ ದಸರಾ ಮಹೋತ್ಸವದಲ್ಲಿ ಪ್ರಚಾರದ ಕೊರತೆ ಎದ್ದು ಕಾಣುತ್ತಿತ್ತು. ಕಾರ್ಯಕ್ರಮಗಳ ಬಗ್ಗೆ ಜನರಿಗೆ ಸುಲಭವಾಗಿ ಮಾಹಿತಿ ಲಭ್ಯವಾಗುವಂತಿರಲಿಲ್ಲ. ಹಿಂದೆಲ್ಲಾ ದಸರಾ ಸಂದರ್ಭದಲ್ಲಿ ಪ್ರತೀ ಕಾರ್ಯಕ್ರಮಕ್ಕೆ ಪತ್ರಿಕೆಗಳಲ್ಲಿ ಜಾಹೀರಾತು ನೀಡುವ ಮೂಲಕ ಹೆಚ್ಚಿನ ಪ್ರಚಾರ ನೀಡಲಾಗುತ್ತಿತ್ತು. ಆದರೆ ಈ ಬಾರಿ ದಸರಾ ಆರಂಭ ಮತ್ತು ಕೊನೆಗೆ ಜಂಬೂ ಸವಾರಿಗೆ ಪತ್ರಿಕೆಗಳಿಗೆ ಜಾಹೀರಾತು ನೀಡಿದ್ದನ್ನು ಬಿಟ್ಟರೆ, ಉಳಿದಂತೆ ಯಾವುದೇ ಕಾರ್ಯಕ್ರಮಗಳಿಗೆ ಸರಿಯಾದ ಪ್ರಚಾರ ಸಿಗದ ಕಾರಣ ಅದೆಷ್ಟೋ ಜನ ತಮ್ಮ ಮೆಚ್ಚಿನ ಕಾರ್ಯಕ್ರಮಗಳಿಂದ ವಂಚಿತರಾಗಬೇಕಾಗಿ ಬಂತು.

ಕವಿಗೋಷ್ಠಿಯಲ್ಲೂ ಅಪಸ್ವರ: ಈ ಬಾರಿ ದಸರಾ ಕವಿಗೋಷ್ಠಿಯಲ್ಲೂ ಅಪಸ್ವರ ಕೇಳಿ ಬಂತು. ರಾಜ್ಯದ ನಾನಾ ಭಾಗದಿಂದ ಬಂದಿದ್ದಂತಹ ಕವಿಗಳಿಗೆ ಊಟ ಮತ್ತು ವಸತಿ ಸೌಕರ್ಯ ಕಲ್ಪಿಸಿರಲಿಲ್ಲ ಎಂಬ ದೂರುಗಳು ಕೇಳಿಬಂದವು. ಅಚ್ಚರಿಯ ಸಂಗತಿ ಎಂದರೆ ಕವಿಗೋಷ್ಠಿ ಆಹ್ವಾನ ಪತ್ರಿಕೆಯಲ್ಲಿ ಹೆಸರು ಪ್ರಕಟವಾಗಿದ್ದರೂ ಅವರಲ್ಲಿ ಕೆಲವರಿಗೆ ಮಾಹಿತಿಯೇ ಹೋಗಿರಲಿಲ್ಲ ಎಂಬ ವಿಷಯವನ್ನು ಬಹಿರಂಗವಾಗಿಯೇ ಕೆಲವರು ತೋಡಿಕೊಂಡು ಅವ್ಯವಸ್ಥೆಯ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಇತ್ತೀಚೆಗೆ ನಡೆದ ಪ್ರಧಾನ ಕವಿಗೋಷ್ಠಿಯಲ್ಲಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ. ಚಂದ್ರಶೇಖರ ಕಂಬಾರ ಅವರ ಎದುರೇ ಕೆಲವರು ಊಟ, ವಸತಿ ಅವ್ಯವಸ್ಥೆ ಬಗ್ಗೆ ಅಸಮಾಧಾನ ತೋಡಿಕೊಂಡರು.

ಕ್ರೀಡಾಪಟುಗಳ ಅಸಮಾಧಾನ: ದಸರಾ ಕ್ರೀಡಾಕೂಟದಲ್ಲೂ ಅವ್ಯವಸ್ಥೆಯ ದೂರುಗಳು ಕೇಳಿಬಂದವು. ಸರಿಯಾದ ಊಟ, ವಸತಿ ಹಾಗೂ ಬಹುಮಾನದ ಬಗ್ಗೆ ಪ್ರಶ್ನಿಸಿದ ಕೆಲವರಿಗೆ ಕ್ರೀಡಾಕೂಟದ ಉಪ ಸಮಿತಿಯವರು ಬಜೆಟ್ ಕಾರಣ ನೀಡಿ, ಬಾಯಿ ಮುಚ್ಚಿಸುವ ಪ್ರಯತ್ನ ಮಾಡಿದ್ದಾರೆ. ಎಂದು ಹೇಳಲಾಗಿದೆ. ಆದರೆ ರಾಜ್ಯದ ವಿವಿಧ ಭಾಗಗಳಿಂದ ಬಂದಿದ್ದಂತಹ ಬಹುತೇಕ ಕ್ರೀಡಾಪಟುಗಳು ಸಮಸ್ಯೆಗಳಿಗೆ ಹೆಚ್ಚು ತಲೆ ಕೆಡಿಸಿಕೊಳ್ಳದೇ ಕ್ರೀಡಾ ಸ್ಫೂರ್ತಿ ಮೆರೆದಿದ್ದಾರೆ.

ದೀಪಾಲಂಕಾರದಿಂದ ಬಚಾವಾದ ಜನತೆ!

ಮೈಸೂರು ನಗರದಲ್ಲಿ ಇತ್ತೀಚೆಗೆ ಸುರಿದ ಮಳೆಯಿಂದಾಗಿ ಬಹುತೇಕ ರಸ್ತೆಗಳು ಗುಂಡಿಗಳಿಂದ ಕೂಡಿದ್ದು, ವಾಹನ ಚಾಲಕರು ಮತ್ತು ಸವಾರರಿಗೆ ಸಿಂಹಸ್ವಪ್ನವಾಗಿ ಕಾಡುತ್ತಿವೆ. ಇಂತಹದ್ದರಲ್ಲಿ ಅದೃಷ್ಟವಶಾತ್ ಈ ಬಾರಿ ಮಾಮೂಲಿಗಿಂತಲೂ ಹೆಚ್ಚಿನ ವಿಸ್ತೀರ್ಣಕ್ಕೆ ದೀಪಾಲಂಕಾರ ಮಾಡಿದ್ದರಿಂದ ವಾಹನ ಸವಾರರೂ ಹಾಗೂ ಚಾಲಕರು ಸಾಗುವಾಗ ಗುಂಡಿಗಳನ್ನು ಗುರುತಿಸಲು ಸಾಧ್ಯ ವಾಯಿತು. ದೀಪಾಲಂಕಾರದ ಬೆಳಕಿನಲ್ಲಿ ಎಚ್ಚರಿಕೆಯಿಂದ ವಾಹನ ಚಾಲನೆ ಮಾಡಿದ್ದರಿಂದ ನಾವು ಬಚಾವಾದೆವು ಎಂದು ಹಲವು ವಾಹನ ಚಾಲಕರು ಹಾಗೂ ಸವಾರರು ಮಾಧ್ಯಮಗಳ ಮುಂದೆ ಹೇಳಿಕೊಂಡಿದ್ದಾರೆ.

ಅರಮನೆ ಆವರಣದಲ್ಲಿ ಜನರಿಗೆ ಲಂಗು–ಲಗಾಮಿಲ್ಲ: ಪುಷ್ಪಾರ್ಚನೆ ವಿಳಂಬ

ಮೈಸೂರು, ಅ. 5(ಆರ್‌ಕೆ)– ಇಂದು ನಡೆದ ಜಂಬೂಸವಾರಿ ಮೆರವಣಿಗೆ ವೇಳೆ ಅರಮನೆ ಆವರಣದಲ್ಲಿ ಜನರೇ ಅಡ್ಡಾಡುತ್ತಿದ್ದರಿಂದ ಜಾನಪದ ಕಲಾತಂಡಗಳು ಹಾಗೂ ಸ್ತಬ್ಧಚಿತ್ರಕ್ಕೆ ಅಲ್ಲಲ್ಲಿ ತೀವ್ರ ಅಡಚಣೆ ಉಂಟಾಗಿ, ಅವ್ಯವಸ್ಥೆಯ ಆಗರವಾಗಿತ್ತು.

ಇದೇ ಮೊದಲ ಬಾರಿಗೆ ಬ್ಯಾರಿಕೇಡ್ ದಾಟಿ ಹೊರಬಂದು ಅಂಬಾರಿ ಬಳಿ ಸೆಲ್ಫಿ ಫೋಟೋ ತೆಗೆದುಕೊಳ್ಳುತ್ತಿದ್ದರಿಂದ ಗೊಂದಲ ಸೃಷ್ಟಿಯಾಯಿತು. ಅಲ್ಲದೇ, ವಿವಿಧ ಉಪಸಮಿತಿಗಳ ಸದಸ್ಯರೆಂದು ಹೇಳಿಕೊಂಡು ಗುಂಪು ಗುಂಪಾಗಿ ಜನರು ಮೆರವಣಿಗೆಯಲ್ಲಿ ಅತ್ತಿಂದಿತ್ತಾ ಅಲೆಯುತ್ತಿದ್ದರಿಂದ ಹಿಂದೆ ಬ್ಯಾರಿಕೇಡ್ ಒಳಗೆ ಎನ್‌ಕ್ಲೋಸರ್‌ಗಳಲ್ಲಿ ಕುಳಿತಿದ್ದ ಜನರಿಗೆ ಸ್ತಬ್ಧಚಿತ್ರಗಳು ಮತ್ತು ಜಾನಪದ ಕಲಾತಂಡಗಳನ್ನು ನೋಡಲು ಅಡ್ಡಿಯಾಗಿ, ಅಲ್ಲಿದ್ದವರು ಕೂಗಾಡುತ್ತಿದ್ದ ಪ್ರಸಂಗವೂ ನಡೆಯಿತು. ಅರಮನೆ ಆವರಣದಿಂದ ಮೆರವಣಿಗೆ ಆರಂಭವಾಗುತ್ತಿದ್ದಂತೆಯೇ ಪೊಲೀಸರನ್ನೂ ಲೆಕ್ಕಿಸದೇ ಓಡಾಡುತ್ತಿದ್ದ ಜನರನ್ನು ಬದಿಗೆ ಕಳುಹಿಸುವ ಗೋಜಿಗೂ ಯಾರೂ ಹೋಗಲಿಲ್ಲ. ಜೊತೆಗೆ ಅಂಬಾರಿಯನ್ನು ಹೊತ್ತು ಅಭಿಮನ್ಯು ಬರುತ್ತಿದ್ದಾಗ ಏಕಾಏಕಿ ಪುಷ್ಪಾರ್ಚನೆ ನಡೆಯುವ ವೇದಿಕೆವರೆಗೂ ಜನರು ನುಗ್ಗಿದರು. ಅದರಿಂದಾಗಿ ಸ್ಥಳದಲ್ಲಿ ತೀವ್ರ ಗೊಂದಲ ಉಂಟಾದಾಗ ಎಚ್ಚೆತ್ತ ಪೊಲೀಸರು ಅವರನ್ನು ಹಿಂದೆ ಸರಿಸಲು ಹರಸಾಹಸಪಡಬೇಕಾಯಿತು.

ಪಾಸ್‌ಗಳದ್ದು ಯಥಾ ಅಧ್ವಾನ

ಈ ಸಲವೂ ಪಾಸ್‌ಗಳದ್ದೇ ಗೊಂದಲ, ಅಧ್ವಾನ. ಜಂಬೂ ಸವಾರಿಗೆ 3 ದಿನ ಇರುವಂತೆ ಪಾಸ್‌ಗಳ ಬೇಟೆಗಿಳಿದ ಜನರು, ತಮ್ಮ ನಾಯಕರು ಹಾಗೂ ಅಧಿಕಾರಿಗಳನ್ನು ಪೀಡಿಸಲಾರಂಭಿಸಿದ್ದರು. ಆಡಳಿತ ಪಕ್ಷ ಬಿಜೆಪಿ ಸಂಸದರು, ಶಾಸಕರು ಹಾಗೂ ಇನ್ನಿತರ ಜನಪ್ರತಿನಿಧಿಗಳು ತಮ್ಮ ಬೆಂಬಲಿಗರಿಗೆ ಇಂತಿಷ್ಟು ಪಾಸ್‌ಗಳನ್ನು ನೀಡಲೇಬೇಕಿರುವ ಅನಿವಾರ್ಯತೆಯನ್ನು ಮುಖ್ಯಮಂತ್ರಿಗಳವರೆಗೂ ಕೊಂಡೊಯ್ದರು. ಆದರೆ ಅವರಿಗೆ ದಕ್ಕಿದ ಪಾಸ್‌ಗಳೆಷ್ಟು ಎಂಬುದರ ಮಾಹಿತಿ ಇಲ್ಲ. ಆದರೆ ಇತರೆ ಪಕ್ಷಗಳ ಶಾಸಕರು ಹಾಗೂ ಇನ್ನಿತರ ಜನಪ್ರತಿನಿಧಿಗಳಿಗಿಂತ ಹೆಚ್ಚಿನ ಪಾಸ್‌ಗಳು ಯಾರಿಗೆ ದಕ್ಕಿರಬಹುದು ಎಂಬುದರ ಬಗ್ಗೆ ಜನರೇ ಲೆಕ್ಕಚಾರ ಮಾಡುತ್ತಿದ್ದರು. ಪಾಸ್‌ಗಾಗಿ ಸಂಸದರು, ಶಾಸಕರು ಹಾಗೂ ಇತರ ಜನಪ್ರತಿನಿಧಿಗಳ ಮನೆ, ಕಚೇರಿಗಳಿಗೂ ಎಡತಾಕಿದ್ದಾರೆ. ಅವರಲ್ಲಿ ಕೆಲವರಿಗೆ ಸಿಕ್ಕರೆ, ಮತ್ತೆ ಕೆಲವರು ನಿರಾಶೆಯಿಂದ ವಾಪಸ್ಸಾಗಿದ್ದಾರೆ. ಈ ಮಧ್ಯೆ ನಂಜನಗೂಡು ಶಾಸಕರಾದ ಹರ್ಷವರ್ಧನ್, ತಮಗೆ ಕಡಿಮೆ ಪಾಸ್ ನೀಡಲಾಗಿದೆ ಎಂದು ಅಸಮಾಧಾನಗೊಂಡು, ನೀಡಿದ್ದ ಪಾಸ್‌ಗಳನ್ನು ಮಂಗಳವಾರ ರಾತ್ರಿ ಡಿಸಿ ಕಚೇರಿಗೆ ಖುದ್ದು ತೆರಳಿ ಮರಳಿಸಿದ್ದೂ ಉಂಟು.

ವಿಪಕ್ಷಗಳ ಶಾಸಕರು ಹಾಗೂ ಇನ್ನಿತರ ಜನಪ್ರತಿನಿಧಿಗಳಿಗೆ ಕಡಿಮೆ ಪಾಸ್ ನೀಡಲಾಗಿದೆ ಎಂಬ ಅಸಮಾಧಾನ ವ್ಯಕ್ತವಾಗಿದೆ. ಆದರೆ ನಗರ ಪಾಲಿಕೆ, ಕಾಂಗ್ರೆಸ್ ಮತ್ತು ಜೆಡಿಎಸ್ ಸದಸ್ಯರು ತಮಗೆ ಬರೀ 10 ಪಾಸ್ ನೀಡಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದು ಬಹಿರಂಗವಾಯಿತು.

ಅಂಬಾರಿ ಸುತ್ತಮುತ್ತ ಜನರ ದಂಡೇ ದಂಡು!



ಆರಂಭದಿಂದ ಕೊನೇವರೆಗೂ ಜಂಬೂಸವಾರಿ ಮೆರವಣಿಗೆ ಮಾರ್ಗದಲ್ಲಿ ಜನರು ಅಡ್ಡಾಡುತ್ತಿದ್ದರೂ ಸ್ಥಳದಲ್ಲೇ ಇದ್ದ ಪೊಲೀಸರಾಗಲೀ ಅಥವಾ ಅಧಿಕಾರಿಗಳಾಗಲೀ ಅತ್ತ ಗಮನಹರಿಸಲೇ ಇಲ್ಲ. ಎರಡೂ ಬದಿಗಳಲ್ಲಿ ಅವರೇ ನಿಂತಿದ್ದರಿಂದ ಜನರು ಜೋರಾಗಿ ಕೂಗತೊಡಗಿದರೂ, ಅವರನ್ನು ಸರಿಸುವ ಗೋಜಿಗೇ ಹೋಗಲಿಲ್ಲ. ಆದ್ದರಿಂದ ಅಂತಿಮ ಘಳಿಗೆಯಲ್ಲಿ ಚಿನ್ನದ ಅಂಬಾರಿಯಲ್ಲಿ ಆಸೀನಳಾಗಿದ್ದ ಚಾಮುಂಡೇಶ್ವರಿ ದೇವಿಯನ್ನು ಹೊತ್ತು ಚೈತ್ರ ಮತ್ತು ಕಾವೇರಿಯೊಂದಿಗೆ ಅಭಿಮನ್ಯು ವೇದಿಕೆಯತ್ತ ಬಂದಾಗಲಂತೂ ಜನರು ಏಕಾಏಕಿ ನುಗ್ಗಿ ಫೋಟೋ ಕ್ಲಿಕ್ಕಿಸಿಕೊಳ್ಳತೊಡಗಿದಾಗ ಪರಿಸ್ಥಿತಿಯ ಗಂಭೀರತೆ ಅರಿತ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ ಅವರೇ ಓಡಿಬಂದು ಜನರನ್ನು ಹಿಂದೆ ಸರಿಸಿ, ಪೊಲೀಸ್ ತುಕಡಿಗಳು ಹಾಗೂ ಅಂಬಾರಿ ಮುಂದೆ ಸಾಗಲು ಅನುವು ಮಾಡಿಕೊಟ್ಟರು. ಒಟ್ಟಾರೆ ದಸರಾ ಮಹೋತ್ಸವ ಅತ್ಯಂತ ಯಶಸ್ವಿಯಾಯಿತಾದರೂ, ಜಂಬೂ ಸವಾರಿ ವೇಳೆ ಅರಮನೆ ಆವರಣದಲ್ಲಿ ಉಂಟಾದ ಅವ್ಯವಸ್ಥೆ, ಗೊಂದಲದ ಬಗ್ಗೆ ಜನರು ತೀವ್ರ ಅಸಮಾಧಾನ ವ್ಯಕ್ತಪಡಿಸುತ್ತಿದ್ದರು.

ದಸರಾ ಕ್ರೀಡಾ ಸಮಿತಿ ಎಡವಟ್ಟು



ಕ್ರೀಡೆಗಳಲ್ಲಿ ಭಾಗವಹಿಸುವ ಸ್ಪರ್ಧಿಗಳಿಗೆ ನೀಡುವ ಐಡಿ ಕಾರ್ಡ್‌ಗಳ ಟ್ಯಾಗ್‌ನ ಮುದ್ರಣದಲ್ಲಿ ಲೋಪವಾಗಿದ್ದರೂ ಕಣ್ಮುಚ್ಚಿ ವಿತರಿಸಿದ್ದಾರೆ. ದಸರಾ ಎಂಬುದರ ಬದಲಾಗಿ ದರಸಾ ಎಂದು ಟ್ಯಾಗ್ ಮೇಲೆ ಮುದ್ರಣವಾಗಿದ್ದರೂ ಪರಿಶೀಲಿಸದೆ ಸ್ಪರ್ಧಿಗಳಿಗೆ ವಿತರಿಸಿದ್ದಾರೆ. ಈ ಬಾರಿಯ ದಸರಾ ಮಹೋತ್ಸವ ಕಂಡಲ್ಲೆಲ್ಲ ಎಡವಟ್ಟುಗಳ ಸರಮಾಲೆಯಾಗಿತ್ತು.

ಮೈಸೂರಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂಗೆ ಹಂಚ್ಯಾ ಬಳಿ 19 ಎಕರೆ ಭೂಮಿ ನೀಡಲು ಸಿಎಂ ಬೊಮ್ಮಾಯಿ ಒಪ್ಪಿಗೆ

ಸಂಸದ ಪ್ರತಾಪ್ ಸಿಂಹ ಮನವಿಗೆ ತಕ್ಷಣ ಸಮ್ಮತಿಸಿದ ಸಿಎಂ



ಅಂತರರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂಗೆ ಹಂಚ್ಯಾ ಬಳಿ ಭೂಮಿ ಮಂಜೂರು ಮಾಡುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬಳಿ ಮಂಗಳವಾರ ಸಂಸದ ಪ್ರತಾಪ್‌ಸಿಂಹ ಮನವಿ ಮಾಡಿದರು. ಈ ವೇಳೆ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಶಾಸಕ ಜಿ.ಟಿ. ದೇವೇಗೌಡ, ಮೇಯರ್ ಶಿವಕುಮಾರ್ ಇತರರು ಉಪಸ್ಥಿತರಿದ್ದಾರೆ.

ಮೈಸೂರು, ಅ. 5– ಮೈಸೂರಿನಲ್ಲಿ ಅಂತರರಾಷ್ಟ್ರೀಯ ಮಟ್ಟದ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣಕ್ಕಾಗಿ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಗೆ ಹಂಚ್ಯಾ–ಸಾತಗಳ್ಳಿ 'ಬಿ' ಬಡಾವಣೆಯಲ್ಲಿ 19ರಿಂದ 20 ಎಕರೆ ಭೂಮಿ ಮಂಜೂರು ಮಾಡಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಒಪ್ಪಿಗೆ ಸೂಚಿಸಿದ್ದಾರೆ.

ಈ ಸಂಬಂಧ ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಅವರು ಸಲ್ಲಿಸಿದ ಮನವಿಗೆ ಸ್ಪಂದಿಸಿದ ಮುಖ್ಯಮಂತ್ರಿಗಳು, ಈ ವಿಷಯವನ್ನು ಸಂಪುಟ ಸಭೆಯ ಮುಂದಿಡಲಾಗುವುದು ಎಂದು ನೋಟ್ ಬರೆಯುವ ಮೂಲಕ ಗ್ರೀನ್ ಸಿಗ್ನಲ್ ನೀಡಿದ್ದಾರೆ. ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯು ಮೈಸೂರಿನಲ್ಲಿ ಅಂತರರಾಷ್ಟ್ರೀಯ ಮಟ್ಟದ ಕ್ರಿಕೆಟ್ ಸ್ಟೇಡಿಯಂ ನಿರ್ಮಿಸಲು ಉದ್ದೇಶಿಸಿದ್ದು, ಅದಕ್ಕೆ ಅಗತ್ಯವಿರುವ ಭೂಮಿ ಮಂಜೂರು ಮಾಡುವಂತೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿದೆ ಎಂಬುದನ್ನು ಪ್ರತಾಪ್ ಸಿಂಹ ಅವರು ಮುಖ್ಯಮಂತ್ರಿಗಳಿಗೆ ಸಲ್ಲಿಸಿದ ಮನವಿಯಲ್ಲಿ ಉಲ್ಲೇಖಿಸಿದ್ದಾರೆ.

ಈ ಸಂಬಂಧ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಸಲ್ಲಿಸಲಾಗಿರುವ ಪ್ರಸ್ತಾವನೆಯಂತೆ ಸಾತಗಳ್ಳಿ ಗ್ರಾಮದ ಸರ್ವೇ ನಂಬರ್ 106ರಲ್ಲಿರುವ 2.20 ಎಕರೆ ಜಾಗವನ್ನು ಬದಲಾಯಿಸಿ, ಸದರಿ ಜಾಗಕ್ಕೆ ಹತ್ತಿರದಲ್ಲಿರುವ 16 ಸಾವಿರ ಚದರ ಮೀಟರ್ ಅಳತೆಯ ಸಿಎ ನಿವೇಶನವನ್ನು ಕೂಡ ಅಂತರರಾಷ್ಟ್ರೀಯ ಮಟ್ಟದ ಕ್ರಿಕೆಟ್ ಸ್ಟೇಡಿಯಂಗಾಗಿ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಗೆ ತುರ್ತಾಗಿ ಮಂಜೂರು ಮಾಡಬೇಕೆಂದು ಪ್ರತಾಪ್ ಸಿಂಹ ಕೋರಿದ್ದರು.

ಭೀಮನಕೊಲ್ಲಿ ದೇವಸ್ಥಾನಕ್ಕೆ ಸೋನಿಯಾ ಗಾಂಧಿ ಭೇಟಿ

ಮೈಸೂರು, ಅ.5– ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ಅವರು ವಿಜಯ ದಶಮಿ ಹಬ್ಬದ ಹಿನ್ನೆಲೆಯಲ್ಲಿ ಹೆಚ್.ಡಿ.ಕೋಟೆ ತಾಲೂಕಿನಲ್ಲಿರುವ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದ್ದಾರೆ.



ಕಬಿನಿ ಹಿನ್ನೀರಿನಲ್ಲಿರುವ ಭೀಮನಕೊಲ್ಲಿ ದೇವಸ್ಥಾನಕ್ಕೆ ಭೇಟಿ ನೀಡಿದ ಸೋನಿಯಾ ಗಾಂಧಿ ಮಹದೇಶ್ವರನ ದರ್ಶನ ಪಡೆದರು. ದೇವಸ್ಥಾನಕ್ಕೆ 500 ವರ್ಷಗಳ ಇತಿಹಾಸವಿದೆ. ಇಲ್ಲಿ ದೇವರ ಮೂರ್ತಿಯನ್ನು ತಂದು ಪ್ರತಿಷ್ಠೆ ಮಾಡಿದ್ದಲ್ಲ, ಇದು ಉದ್ಭವ ಮೂರ್ತಿ ಎಂಬ ನಂಬಿಕೆಯಿದೆ. ದೇವಸ್ಥಾನಕ್ಕೆ ಭೇಟಿ ನೀಡಿದ ಸೋನಿಯಾಗೆ ಅನುಷಾ ಎಂಬುವವರು ಮಹದೇಶ್ವರ ಸ್ವಾಮಿ ದೇವಸ್ಥಾನ ಹಿನ್ನೆಲೆಯ ಬಗ್ಗೆ ವಿವರಣೆ ನೀಡಿದ್ದಾರೆ. ಸೋನಿಯಾ ಗಾಂಧಿ ಭೇಟಿ ವೇಳೆ ಸ್ಥಳೀಯ ಶಾಸಕ ಅನಿಲ್ ಚಿಕ್ಕಮಾದು ಸಾಥ್ ನೀಡಿದರು. ಸೋನಿಯಾ ಗಾಂಧಿ ಅವರು ತಮ್ಮ ಪುತ್ರ ರಾಹುಲ್ ಗಾಂಧಿ ಅವರ ಭಾರತ್ ಜೋಡೋ ಯಾತ್ರೆಯಲ್ಲಿ ಪಾಲ್ಗೊಳ್ಳಲು ಸೋಮವಾರ ಆಗಮಿಸಿದ್ದಾರೆ.

ಮೈಸೂರು ಮಿತ್ರ 43 ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ನರಸೀಪುರದಲ್ಲಿ ಎನ್. ರಾಚಯ್ಯ ಸ್ಮಾರಕ ಭವನಕ್ಕೆ ಭೂಮಿ ಪೂಜೆ

ಕೌಶಲ್ಯ ಅಭಿವೃದ್ಧಿ, ಸ್ಪರ್ಧಾತ್ಮಕ ಪರೀಕ್ಷೆ ತರಬೇತಿ ಕೇಂದ್ರವಾಗಿ ಬಳಕೆ



ತಿ.ನರಸೀಪುರ ಅ.5(ಎಸ್.ಕೆ)– ರಾಜ್ಯ ಸರ್ಕಾರದ ವಿಶೇಷ ಅನುದಾನ ಒಂದು ಕೋಟಿ ರೂ.ಗಳ ವೆಚ್ಚದಲ್ಲಿ ತಲೆಯೆತ್ತಲಿರುವ ಹಿರಿಯ ಮುತ್ಸದ್ಧಿ ರಾಜಕಾರಣಿ, ದಲಿತರ ಧ್ವನಿ ಎನ್.ರಾಚಯ್ಯ ಸ್ಮಾರಕ ಭವನವನ್ನು ಮಹಿಳೆಯರಿಗೆ ಕೌಶಲ್ಯ ಅಭಿವೃದ್ಧಿ ತರಬೇತಿ ಹಾಗೂ ವಿದ್ಯಾವಂತ ಯುವತಿ, ಯುವಕರಿಗೆ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ನೀಡುವ ಕೇಂದ್ರವನ್ನಾಗಿ ಮಾಡಲಾಗುವುದು ಎಂದು ಕೆಪಿಸಿಸಿ ಪರಿಶಿಷ್ಟ ಜಾತಿ ವಿಭಾಗದ ರಾಜ್ಯಾಧ್ಯಕ್ಷರೂ ಆದ ವಿಧಾನಪರಿಷತ್ ಮಾಜಿ ಸದಸ್ಯ ಆರ್.ಧರ್ಮಸೇನಾ ತಿಳಿಸಿದ್ದಾರೆ.

ಪಟ್ಟಣದ ಗೋಪಾಲಪುರದ ಬಳಿ ಇರುವ ಎನ್.ರಾಚಯ್ಯ ಗದ್ದುಗೆಯಲ್ಲಿ ಬುಧವಾರ ಸ್ಮಾರಕ ಭವನ ನಿರ್ಮಾಣ ಕಾಮಗಾರಿಯ ಭೂಮಿ ಪೂಜೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ರಾಜಕೀಯ ಅಧಿಕಾರವಿದ್ದಾಗ ದಲಿತ ಪರ ಕಾಳಜಿಯನ್ನು ಹೊಂದಿದ್ದ ಎನ್.ರಾಚಯ್ಯ ಅವರು ಬಡವರು ಮತ್ತು ನಿರ್ಗತಿಕರ ಪ್ರಗತಿಯ ಬಗ್ಗೆ ಮಹತ್ವದ ಯೋಜನೆಗಳನ್ನು ಜಾರಿಗೆ ತಂದಿದ್ದರು. ಅಂತಹವರ ಸ್ಮಾರಕ ಆರ್ಥಿಕವಾಗಿ ಸಂಕಷ್ಟಕ್ಕೆ ಸಿಲುಕಿದ ಮಹಿಳೆಯರಿಗೆ ಬದುಕನ್ನು ಕಟ್ಟಿಕೊಳ್ಳಲು ಕೌಶಲ್ಯ ತರಬೇತಿ ಕಲ್ಪಿಸಬೇಕು. ಬಡತನವಿರುವ ವಿದ್ಯಾವಂತ ಯುವಕ ಯುವತಿಯರಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಚಿತ ತರಬೇತಿಯನ್ನು ನೀಡುವ ಅಧ್ಯಯನ ಕೇಂದ್ರವಾಗಬೇಕು ಎಂದರು.

ವಿಪಕ್ಷ ನಾಯಕ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆಗಿದ್ದಾಗ ಸ್ಮಾರಕ ನಿರ್ಮಾಣಕ್ಕೆ 1 ಕೋಟಿ ರೂ.ಗಳ ಅನುದಾನವನ್ನು ಮಂಜೂರು ಮಾಡಿದ್ದರು. ಅಂದಿನ ಸರ್ಕಾರ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಎನ್.ರಾಚಯ್ಯ ಅವರ ಅಧ್ಯಯನ ಕೇಂದ್ರ ತೆರೆದು, ಮೈಸೂರಿನ ನರಸೀಪುರ ಮಾರ್ಗದ ಹೆದ್ದಾರಿ ರಸ್ತೆಗೆ ಅವರ ಹೆಸರನ್ನು ನಾಮಕರಣ ಮಾಡಿದೆ. ಕೆಲವು ತಾಂತ್ರಿಕ ಕಾರಣಗಳಿಂದ ಆರು ವರ್ಷಗಳ ಬಳಿಕ ಕಾಮಗಾರಿಯನ್ನು ಆರಂಭಿಸಲಾಗುತ್ತಿದ್ದು, ಅಂದಿನ ಕಾಮಗಾರಿ ದರಕ್ಕೂ ಈಗಿನ ದರಕ್ಕೂ ವ್ಯತ್ಯಾಸವಿದೆ. ಆದ್ದರಿಂದ ಈಗಿನ ಸರ್ಕಾರ, ಸಚಿವರು ಹಾಗೂ ಶಾಸಕರು ಹೆಚ್ಚುವರಿ ಅನುದಾನವನ್ನು ಬಿಡುಗಡೆ ಮಾಡಬೇಕು ಎಂದು ಧರ್ಮಸೇನಾ ಮನವಿ ಮಾಡಿದರು.

ಸ್ಮಾರಕ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಿದ ವಾಟಾಳು ಮಠದ ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ನೇರ ನಿಷ್ಠೂರತೆಗೆ ಹೆಸರಾಗಿದ್ದ ಎನ್. ರಾಚಯ್ಯ ಅವರು ಹಲವು ದಶಕಗಳ ಕಾಲ ಶಾಸಕ, ಸಂಸದ, ವಿವಿಧ ಖಾತೆಗಳ ಸಚಿವ ಹಾಗೂ ರಾಜ್ಯಪಾಲರಾಗಿಯೂ ಸೇವೆಯನ್ನು ಸಲ್ಲಿಸಿ ಹತ್ತಾರು ಶಾಶ್ವತ ಯೋಜನೆಗಳನ್ನು ಜಾರಿಗೆ ತಂದು ರಾಜಕಾರಣಕ್ಕೆ ಮಾದರಿಯಾಗಿದ್ದಾರೆ. ಅಂತಹ ಮುತ್ಸದ್ದಿ ನಾಯಕರ ಸ್ಮಾರಕವನ್ನ ಪಟ್ಟಣದಲ್ಲಿ ನಿರ್ಮಾಣವಾಗುತ್ತಿರುವುದು ಹೆಮ್ಮೆಯ ವಿಷಯವಾಗಿದೆ. ಸ್ಮಾರಕ ಕೌಶಲ್ಯ ಮತ್ತು ಶೈಕ್ಷಣಿಕ ತರಬೇತಿಗಳನ್ನು ನೀಡುವ ಜನೋಪಯೋಗಿ ಕೇಂದ್ರವಾಗಿ ಅಭಿವೃದ್ಧಿಗೊಳ್ಳಲಿ ಎಂದು ಶುಭ ಹಾರೈಸಿದರು.

ಪುರಸಭಾ ಸದಸ್ಯ ಎಲ್. ಮಂಜುನಾಥ್, ಡಿಸಿಸಿ ವೈದ್ಯರ ವಿಭಾಗದ ಜಿಲ್ಲಾಧ್ಯಕ್ಷ ಡಾ.ಬಿ. ಪ್ರದೀಪ್, ಕೆಪಿಸಿಸಿ ಪರಿಶಿಷ್ಟ ಜಾತಿ ವಿಭಾಗದ ರಾಜ್ಯ ಸಂಚಾಲಕ ಕಾಳಯ್ಯ, ಮೈಸೂರು ನಗರಾಧ್ಯಕ್ಷ ಕೆ. ರಮೇಶ್, ಪ್ರಧಾನ ಕಾರ್ಯದರ್ಶಿ ಶ್ರೀಕಾಂತ್, ಗರ್ಗೇಶ್ವರಿ ಗ್ರಾಪಂ ಸದಸ್ಯ ನಿರಂಜನ್, ಮಾಜಿ ಸದಸ್ಯ ಮಹದೇವಸ್ವಾಮಿ ಸೇರಿದಂತೆ ಗೋಪಾಲಪುರ ಯಜಮಾನರು ಹಾಗೂ ನಿವಾಸಿಗಳು ಹಾಜರಿದ್ದರು.

ಖರ್ಗೆ ಎಐಸಿಸಿ ಅಧ್ಯಕ್ಷರಾದರೆ ಪಕ್ಷಕ್ಕೆ ಚೈತನ್ಯ

ಕಾಂಗ್ರೆಸ್ಸಿನ ಹಿರಿಯ ನಾಯಕ, ರಾಜ್ಯಸಭಾ ಸದಸ್ಯ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಅಖಿಲ ಭಾರತ ಕಾಂಗ್ರೆಸ್ ಸಮಿತಿಯಲ್ಲಿ ಅಧ್ಯಕ್ಷ ಸ್ಥಾನ ನೀಡಿರುವುದು ಕಾಂಗ್ರೆಸ್ ಪಕ್ಷಕ್ಕೆ ಚೈತನ್ಯವನ್ನು ನೀಡಿದೆ. ದಮನಿತ, ದಲಿತ ಸಮುದಾಯಗಳ ನಾಯಕರಾಗಿರುವ ಖರ್ಗೆಯವರಿಗೆ ಪಕ್ಷದ ಉನ್ನತ ಸ್ಥಾನವನ್ನು ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಅವರು ನೀಡಿರುವುದು ನಿಜಕ್ಕೂ ಹೆಮ್ಮೆಯ ವಿಷಯವಾಗಿದೆ. ಖರ್ಗೆಯವರ ನಾಯಕತ್ವದಲ್ಲಿ ಕೇಂದ್ರ ಹಾಗೂ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದೆ.

-ಆರ್.ಧರ್ಮಸೇನಾ, ಕೆಪಿಸಿಸಿ ಪರಿಶಿಷ್ಟ ಜಾತಿ ವಿಭಾಗದ ರಾಜ್ಯಾಧ್ಯಕ್ಷ

ಶ್ರೀ ಲಕ್ಷ್ಮೀ ನರಸಿಂಹ ದೇವಸ್ಥಾನದಲ್ಲಿ ವಿಜಯದಶಮಿ ಆಚರಣೆ



ಸರಗೂರು, ಅ.5– ವಿಜಯದಶಮಿ ದಿನವಾದ ಬುಧವಾರ ಪಟ್ಟಣದಲ್ಲಿ ಲಕ್ಷ್ಮೀ ನರಸಿಂಹ ದೇವಸ್ಥಾನದಲ್ಲಿ ಬೆಳಗ್ಗಿನಿಂದಲೇ ಹೋಮ–ಹವನ, ಪೂಜಾ ಕೈಂಕರ್ಯ ನಡೆಸಲಾಯಿತು.

ಸಂಜೆ ಉತ್ಸವ ಹೊರುವ ಮಂಟಪವನ್ನು ಸಿಂಗರಿಸಿ ವಾಸುದೇವಮೂರ್ತಿಯನ್ನು ಕೂರಿಸಿ ವಿವಿದ ಹೂವಿನಿಂದ ಅಲಂಕರಿಸಿ ನಂತರ ಭಕ್ತರು ಕೆಇಬಿ ಇಲಾಖೆಯಲ್ಲಿರುವ ಬನ್ನಿ ಮರಕ್ಕೆ ಹಾಗೂ ಉತ್ಸವ ಮೂರ್ತಿಗೆ ವಿಶೇಷವಾಗಿ ಪೂಜೆ ಸಲ್ಲಿಸಿ, ಭಕ್ತರಿಗೆ ಮಹಾ ಮಂಗಳಾರತಿ ನೀಡಿ ತೀರ್ಥಪ್ರಸಾದ ವಿನಿಯೋಗ ಮಾಡಿದರು.

ನಂತರ ಮಂಗಳ ವಾದ್ಯ, ಸತ್ತಿಗೆ, ಚಪ್ಪರಗಳ ಮೂಲಕ ಉತ್ಸವ ಮೂರ್ತಿಯನ್ನು ಭಕ್ತರು ಪ್ರಮುಖ ರಸ್ತೆಯಲ್ಲಿ ಮೆರವಣಿಗೆ ಮಾಡಿ ದೇವಾಲಯಕ್ಕೆ ತಂದು ಭಜನೆ ನಡೆಸಿ ವಿಶೇಷವಾಗಿ ಪೂಜೆ ನಡೆಸಿ ವಿಜೃಂಭಣೆಯಿಂದ ವಿಜಯದಶಮಿಯನ್ನು ಆಚರಣೆ ಮಾಡಿದರು. ದೇವಾಲಯದ ಪ್ರಧಾನ ಅರ್ಚಕ ಕಸ್ತೂರಿರಂಗನ್, ಕೇಶವ ಶರ್ಮ, ಗಂಧರ್ವ, ಪೂಜಾ ಕೈಂಕರ್ಯ ನಡೆಸಿದರು,

ಮುಖಂಡರಾದ ಪ್ರಭು ಸಿ, ನಿವೃತ್ತ ದಫೇದಾರ್ ಬಸವನಾಯಕ, ವೆಂಕಟೇಶ್, ಜನಾರ್ಧನ್, ನಾರಾಯಣ್, ನರಸಿಂಹ, ಹರೀಶ್, ಎಂ.ನಾಗರಾಜು, ರವಿ, ಈರಪ್ಪ, ನಾಗಾರ್ಜನ, ಪೇಪರ್ ಹರ್ಷ, ಮೋಹನ್ ಕುಮಾರ್, ಹರಿಗಣೇಶ್, ರೋಹಿತ್ ಹಾಗೂ ಪುಟ್ಟ ಮಕ್ಕಳು, ಭಾಗವಹಿಸಿದ್ದರು.



ಸಾಕಾನೆ, ಅರಣ್ಯ ಇಲಾಖೆ ವಾಹನಗಳಿಗೆ ವಿಶೇಷ ಪೂಜೆ

ಹನಗೋಡು, ಅ.5– ನಾಗರಹೊಳೆ ರಾಷ್ಟ್ರೀಯ ಉದ್ಯಾನ ವನದ ಆನೆ ಶಿಬಿರದಲ್ಲಿ ಆಯುಧ ಪೂಜೆ ಅಂಗವಾಗಿ ಸಾಕಾನೆ ಹಾಗೂ ಅರಣ್ಯ ಇಲಾಖೆಯ ವಾಹನಗಳಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು.

ಆನೆ ಚೌಕೂರು ವಲಯದ ಮತ್ತಿಗೋಡು ಆನೆ ಶಿಬಿರದಲ್ಲಿರುವ ಬಲರಾಮ,ಗಣೇಶ, ಸೂರ್ಯ, ಮಣಿಕಂಠ, ಮಹಾರಾಷ್ಟ್ರ ಭೀಮಾ ಸಾಕಾನೆ ಸೇರಿದಂತೆ ಅರಣ್ಯ ಇಲಾಖೆಯ ಸಫಾರಿ ಹಾಗೂ ಗಸ್ತು ವಾಹನಗಳಿಗೆ ವಿಶೇಷ ಪೂಜೆ ಸಲ್ಲಿಸಿ ಸಾಕಾನೆಗಳಿಗೆ ಫಲತಾಂಬೂಲ ನೀಡಲಾಯಿತು.

ಪೂಜಾ ಕಾರ್ಯದಲ್ಲಿ ಆನೆ ಚೌಕೂರು ವಲಯದ ಆರ್‌ಎಫ್‌ಓ ಗಣರಾಜ್ ಪಟಗಾರ್, ಸಾಕಾನೆ ಶಿಬಿರದ ಮೇಲ್ವಿಚಾರಕಿ ಶಾರದಮ್ಮ, ಡಿಆರ್‌ಎಫ್‌ಓಗಳಾದ ವಿನೋದ್, ಮನೋಹರ್ ನಂದಕುಮಾರ್ ಸೇರಿದಂತೆ ಸಿಬ್ಬಂದಿ ವರ್ಗ ಇದ್ದರು.

ವಿದ್ಯುತ್ ತಗುಲಿ ಕರು ಬಲಿ

ಮಲ್ಕುಂಡಿ, ಅ.5– ವಿದ್ಯುತ್ ಸ್ಪರ್ಶಿಸಿ ಕರು ಬಲಿಯಾಗಿರುವ ಘಟನೆ ನಂಜನಗೂಡು ತಾಲೂಕಿನ ಹುಚ್ಚಗಣಿ ಗ್ರಾಮದಲ್ಲಿ ನಡೆದಿದೆ. ಗ್ರಾಮದ ಚಂದ್ರು ಎಂಬುವವರಿಗೆ ಸೇರಿದ ಕರು ಮಂಗಳವಾರ ಹೊರ ವಲಯದಲ್ಲಿ ಮೇಯಲು ತೆರಳಿದ್ದ ಸಂದರ್ಭದಲ್ಲಿ ಆಕಸ್ಮಿಕವಾಗಿ ವಿದ್ಯುತ್ ತಗುಲಿ ಸ್ಥಳದಲ್ಲೇ ಮೃತ ಪಟ್ಟಿದೆ.

ಗ್ರಾಮದೇವತೆ ದೇವಸ್ಥಾನದಲ್ಲಿ ನವರಾತ್ರಿ ಪೂಜೆ



ಬೆಟ್ಟದಪುರ, ಅ.5– ಗ್ರಾಮದೇವತೆ ಶಾಂತವೀರಮ್ಮ ದೇವಾಲಯದಲ್ಲಿ 9 ದಿನಗಳ ಕಾಲ ನವರಾತ್ರಿಯ ವಿಶೇಷ ಅಲಂಕಾರ ಹಾಗೂ ಪೂಜೆಗಳನ್ನು ನೆರವೇರಿಸಲಾಯಿತು.

ಗ್ರಾಮದೇವತೆ ಶಾಂತವೀರಮ್ಮ ದೇವರಿಗೆ ಪ್ರಧಾನ ಅರ್ಚಕ ಮಂಜು, ತಂಡದವರು ಮತ್ತು ಗ್ರಾಮದ ಮುಖಂಡರುಗಳು ವಿಶೇಷ ಪೂಜೆ ಸಲ್ಲಿಸಿದರು. ದೇವಸ್ಥಾನ ಸಮಿತಿ ಅಧ್ಯಕ್ಷ ಪ್ರಭಾಶಂಕರ್, ಖಜಾಂಚಿ ಸುರೇಶ್ ಹಾಗೂ ನಿರ್ದೇಶಕರು ಗ್ರಾಮದ ಭ್ರಮರಾಂಭ ಮಹಿಳಾ ಸಂಘದ ಮಹಿಳೆಯರು ಪ್ರತಿದಿನ ವಿಶೇಷ ಪೂಜೆ ನಂತರ ಭಜನೆ ನಡೆಸಿಕೊಟ್ಟರು.

ಅಕ್ಕಮಹಾದೇವಿ ಮಹಿಳಾ ತಂಡದವರಿಂದ ವಿಶೇಷ ಪೂಜೆ ಹಾಗೂ ಪ್ರಸಾದ ವಿನಿಯೋಗ ಮಾಡಲಾಯಿತು. ಗ್ರಾಮದ ಸುಕನ್ಯಾ, ಲತಾ, ಶೋಭಾ, ಶೀಲಾ, ಗಾಯತ್ರಿ, ತನುಶ್ರೀ, ನೇತ್ರಾವತಿ, ವೀಣಾ, ಮೀನಾ, ಶಿವದೇವ್, ಮಹದೇವ್, ರಾಜೇಂದ್ರ, ಲಾಯರ್ ಅಪ್ಪಣ್ಣ, ನಟೇಶ್ ಸೇರಿದಂತೆ ಗ್ರಾಮಸ್ಥರು ಹಾಗೂ ಮಹಿಳೆಯರು ಹಾಜರಿದ್ದರು.

ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿ ಹಣ ನೈಜ ಕಾರ್ಮಿಕರಿಗೆ ಬಳಕೆಯಾಗಬೇಕು



ತಿ.ನರಸೀಪುರ, ಅ.5– ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಕಾರ್ಮಿಕರ ಕಲ್ಯಾಣಕ್ಕೆ ಮೀಸಲಿಟ್ಟಿರುವ 12,000 ಕೋಟಿ ಹಣ ನೈಜ ಕಾರ್ಮಿಕರಿಗೆ ಬಳಕೆಯಾಗಬೇಕು. ಅನ್ಯ ಕಾರ್ಮಿಕರಿಗೆ ಬಳಸುವುದಕ್ಕೆ ಸರ್ಕಾರ ಕಡಿವಾಣ ಹಾಕಬೇಕು ಎಂದು ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್ಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ, ಸಿ.ಬಿ. ನವೀನ್ ಕುಮಾರ್ ಹೇಳಿದರು.

ತಾಲೂಕಿನ ಕುಪ್ಯ ಗ್ರಾಮದಲ್ಲಿ ಬುಧವಾರ ಸಿ ಐ ಟಿ ಯು ಸಂಯೋಜಿತ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್ಸ್ ಘಟಕವನ್ನು ಉದ್ಘಾಟಿಸಿ ಮಾತನಾಡಿದ ಅವರು ಕಟ್ಟಡ ಕಾರ್ಮಿಕರು ಸಂಘಟಿತರಾಗದಿದ್ದರಿಂದ ಕಲ್ಯಾಣ ಮಂಡಳಿಯ ಹಣ ಅನ್ಯರ ಅಭಿವೃದ್ಧಿಗೆ ಬಳಕೆಯಾಗುತ್ತಿದೆ. ಜಿಲ್ಲೆಯಲ್ಲಿ ಸಂಘಟನೆಯನ್ನು ಬಲಪಡಿಸುತ್ತಿರುವ ಹಿನ್ನೆಲೆಯಲ್ಲಿ 1.04 ಕೋಟಿ ಅನುದಾನವನ್ನು ಹಲವು ಕಾರ್ಮಿಕರಿಗೆ ಕೊಡಿಸಿದ್ದೇವೆ. ಎಲ್ಲಾ ವಿಧದ ಸರ್ಕಾರಿ ಸಾರಿಗೆ ಬಸ್ಸುಗಳಲ್ಲಿ ಉಚಿತ ಬಸ್‌ಪಾಸ್‌ಗಳನ್ನು ನೀಡುವಂತೆ ಹೋರಾಟವನ್ನು ಮಾಡುತ್ತಿದ್ದೇವೆ ಎಂದರು.

ದೇಶಾದ್ಯಂತ ಕಾರ್ಮಿಕ ಸಂಘಟನೆಯನ್ನು ಬಲಪಡಿಸುವ ಉದ್ದೇಶದಿಂದ ಹಾಗೂ ಎಲ್ಲಾ ವಿಭಾಗದ ಕಾರ್ಮಿಕರ ಸಮಸ್ಯೆಗಳನ್ನ ಒಂದೇ ವೇದಿಕೆಯಲ್ಲಿ ಚರ್ಚಿಸಲು ಮುಂದಿನ 2023ರ ಜನವರಿ 18 ರಿಂದ 22 ರವರೆಗೆ ಐದು ದಿನಗಳ ಕಾಲ ಬೆಂಗಳೂರಿನಲ್ಲಿ ಅಖಿಲ ಭಾರತ ಸಮ್ಮೇಳನವನ್ನು ಆಯೋಜಿಸಲಾಗಿದೆ. ಡಿಸೆಂಬರ್ ಮಾಸಾಂತ್ಯದ ಒಳಗೆ 7000 ಸದಸ್ಯತ್ವ ನೋಂದಣಿ ಗುರಿಯನ್ನು ಹೊಂದಿದ್ದೇವೆ. ಆದ್ದರಿಂದ ರಾಜ್ಯದ ಆಯಾಯ ತಾಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿರುವ ಸಂಘಟನೆ ಯಲ್ಲಿ ಕಟ್ಟಡ ಕಾರ್ಮಿಕರು ನೋಂದಣಿ ಯಾಗಬೇಕು ಎಂದು ಸಿ.ಬಿ. ನವೀನ್ ಕುಮಾರ್ ಮನವಿ ಮಾಡಿದರು.

ತಾಲೂಕು ಖಜಾಂಚಿ ವಿಜಯಕುಮಾರ್ ಮಾತನಾಡಿದರು. ಪ್ರಧಾನ ಕಾರ್ಯದರ್ಶಿ ಕೃಷ್ಣ, ಮೈಸೂರು ತಾಲ್ಲೂಕು ಅಧ್ಯಕ್ಷ ಬಸವರಾಜು, ಗ್ರಾಮ ಘಟಕ ಅಧ್ಯಕ್ಷ ಶಿವಮಲ್ಲು, ಉಪಾಧ್ಯಕ್ಷ ಗವಿಸಿದ್ದಯ್ಯ, ಖಜಾಂಚಿ ಶಂಕರ, ನಾಡಗೌಡ ದೊಡ್ಡಬಸವೇಗೌಡ, ಯಜಮಾನ್ ಶಿವಣ್ಣ ರೈತ ಮುಖಂಡ ಜಯರಾಮ್ ಹಾಗೂ ಇನ್ನಿತರರು ಹಾಜರಿದ್ದರು.



ನಂಜನಗೂಡು ತಾಲೂಕಿನ ಹೆಡತಲೆ ಗ್ರಾಪಂನಲ್ಲಿ ಗಾಂಧಿ ಜಯಂತಿ ಆಚರಿಸಲಾಯಿತು. ಅಧ್ಯಕ್ಷೆ ಗೀತಾ ಗಾಂಧೀಜಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಈ ವೇಳೆ ಉಪಾಧ್ಯಕ್ಷ ಮಣಿಕಂಠ, ಸದಸ್ಯರಾದ ಜೆ.ಮಹದೇವ ನಾಯಕ, ರವಿ, ರಾಜು, ನಾಗಶೆಟ್ಟಿ, ರತ್ನಮ್ಮ, ತುಳಸಮ್ಮ, ಸವಿತಾ, ಪಿಡಿಓ ಸುರೇಶ್ ಹಾಗೂ ಗ್ರಾಪಂ ಸಿಬ್ಬಂದಿ ವರ್ಗ ಹಾಜರಿದ್ದರು.

ಗಾಂಧೀಜಿಯವರ ತತ್ವಾದರ್ಶ ನಮಗೆ ದಾರಿದೀಪ

ನರಚನಹಳ್ಳಿಯಲ್ಲಿ ಗಾಂಧಿ ಜಯಂತಿ ಅಂಗವಾಗಿ ಸ್ವಚ್ಛ ಭಾರತ್ ಅಭಿಯಾನ



ಭೇರ್ಯ, ಅ.5– ಮಹಾತ್ಮ ಗಾಂಧೀಜಿಯವರ ತತ್ವಾದರ್ಶಗಳು ನಮಗೆ ದಾರಿದೀಪ ಎಂದು ನರಚನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ವಡ್ಡರಕೊಪ್ಪಲು ಮೋಹನ್‌ಕುಮಾರ್ ತಿಳಿಸಿದರು.

ಸಾಲಿಗ್ರಾಮ ತಾಲೂಕಿನ ನರಚನಹಳ್ಳಿ ಗ್ರಾಪಂ ಆವರಣದಲ್ಲಿ ಹಮ್ಮಿಕೊಂಡಿದ್ದ ಮಹಾತ್ಮ ಗಾಂಧಿ ಜಯಂತಿ ಮತ್ತು ಸ್ವಚ್ಛ ಭಾರತ್ ಅಭಿಯಾನ ಸೇರಿದಂತೆ ವಿವಿಧ ಕಾರ್ಯಕ್ರಮಗಳಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಗ್ರಾಮದಲ್ಲಿ ಸ್ವಚ್ಛತೆ ಕಾಪಾಡುವ ಮೂಲಕ ಆರೋಗ್ಯವಂತ ಸಮಾಜ ನಿರ್ಮಾಣ ಮಾಡಲು ಸಾಧ್ಯ. ಈ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಸ್ವಚ್ಛತೆಗೆ ಸಹಕಾರ ನೀಡಬೇಕೆಂದು ಮನವಿ ಮಾಡಿದ ಅವರು, ನಮ್ಮ ಬದುಕು ಇತರರಿಗೆ ಆದರ್ಶಪ್ರಾಯವಾಗಬೇಕು ಎಂಬ ತತ್ವದಲ್ಲಿ ಗಾಂಧೀಜಿಯವರು ನಂಬಿಕೆ ಇಟ್ಟಿದ್ದರು ಎಂದರು.

ಗ್ರಾಪಂನಿಂದ ನಡೆದಿರುವ ನರೇಗಾ ಯೋಜನೆ ಕಾಮಗಾರಿಗಳ ಬಗ್ಗೆ ಸಮಗ್ರವಾಗಿ ಮಾಹಿತಿ ನೀಡಿದ ಅಧ್ಯಕ್ಷ ಮೋಹನ್ ಕುಮಾರ್, ಗ್ರಾಮದ ಸ್ವಚ್ಛತೆ ಮತ್ತು ನೈರ್ಮಲ್ಯದ ದೂರದೃಷ್ಟಿ ಇಟ್ಟುಕೊಂಡು ಈಗಾಗಲೇ ತ್ಯಾಜ್ಯ ವಿಲೇವಾರಿ ಘಟಕ ಆರಂಭಿಸಲು ಸಂಬಂಧಪಟ್ಟ ಕಂದಾಯ ಅಧಿಕಾರಿಗಳಿಗೆ ನಿವೇಶನ ನೀಡುವಂತೆ ಪತ್ರ ಬರೆಯಲಾಗಿದೆ ಎಂದರು.

ನಮ್ಮ ಗ್ರಾಪಂ ವ್ಯಾಪ್ತಿಯ ಪ್ರತಿಯೊಂದು ಮನೆಗಳಿಗೂ ಹಸಿ ಮತ್ತು ಒಣಕಸ ಹಾಕುವ ಕಸದ ಬುಟ್ಟಿಗಳನ್ನು ವಿತರಿಸಲಾಗಿದ್ದು, ಅದೇ ರೀತಿ ತ್ಯಾಜ್ಯ ಕಸ ತುಂಬಿಕೊಂಡು ಹೋಗಲು ವಾಹನವನ್ನು ಸಹ ಖರೀದಿಸಲಾಗಿದೆ. ಗ್ರಾಮಗಳ ಸ್ವಚ್ಛತೆ ಹಾಗೂ ನೈರ್ಮಲ್ಯ ಕಾಪಾಡುವುದಕ್ಕೆ ಗ್ರಾಮಸ್ಥರ ಸಹಕಾರ ಅಗತ್ಯ ಎಂದರು.

ಗ್ರಾಮಗಳ ಅಭಿವೃದ್ಧಿಗೆ ಪಂಚಾಯಿತಿ ಸದಾ ಸಿದ್ಧವಾಗಿದೆ ಎಂದು ಪ್ರಕಟಿಸಿದ ಅವರು ಶೇ.25 ಮತ್ತು ಶೇ.5ರ ಅಡಿ ಫಲಾನುಭವಿಗಳಿಗೆ ಸಹಾಯಧನದ ಚೆಕ್ ವಿತರಿಸಿ ನಂತರ ಪ್ರಧಾನಮಂತ್ರಿ ಆವಾಜ್ ಯೋಜನೆ ಆಯ್ಕೆ ಕುರಿತು ಗ್ರಾಮಸಭೆಯಲ್ಲಿ ಪಟ್ಟಿ ಮಾಡಲಾಯಿತು. ಮಹಾತ್ಮ ಗಾಂಧಿ ಉದ್ಯೋಗ ಖಾತರಿ ಯೋಜನೆಯಡಿ ವಿವಿಧ ಕಾಮಗಾರಿಗಳ ಪಟ್ಟಿಯನ್ನು ಮಾಡಲಾಯಿತು.

ಈ ವೇಳೆ ಪಿಡಿಓ ಗೋವಿಂದರಾಜು, ಉಪಾಧ್ಯಕ್ಷೆ ನಾಗಮಣಿ, ಸದಸ್ಯರಾದ ರಾಘವೇಂದ್ರ, ನವೀನ, ಶಿವಮ್ಮ ರುಕ್ಮಿಣಿ, ಲತಾ, ಸುಪ್ರಿಯ, ಸಿಬ್ಬಂದಿ ಮಹೇಶ್ ಇತರರಿದ್ದರು.



ಬೆಟ್ಟದಪುರ ಹೋಬಳಿ ಕಿತ್ತೂರು ಗ್ರಾಪಂ ವತಿಯಿಂದ ಆಯೋಜಿಸಿದ್ದ ಸ್ವಚ್ಛತಾ ಆಂದೋಲನಕ್ಕೆ ಪಿಡಿಓ ರಾಜಶೇಖರ್ ಚಾಲನೆ ನೀಡಿದರು. ಈ ವೇಳೆ ಅಧ್ಯಕ್ಷೆ ನಳಿನಿ, ಉಪಾಧ್ಯಕ್ಷೆ ಕೆ.ಆರ್.ವೀಣಾ, ಸದಸ್ಯರಾದ ದಿನೇಶ್.ಕೆ, ಜಗದೀಶ್, ದೀಪಾ, ರಾಜಮಣಿ, ವಸಂತಮ್ಮ, ಶಿಲ್ಪಾ, ರತ್ನಮ್ಮ, ಬಸವಣ್ಣ ಮತ್ತಿತರರಿದ್ದರು.

ಮೂಗೂರಲ್ಲಿ ಹೋಬಳಿ ಮಟ್ಟದ ಗ್ರಾಮೀಣ ಮಕ್ಕಳ ದಸರಾ ಪ್ರವಾಸ ಕಾರ್ಯಕ್ರಮಕ್ಕೆ ಸರ್ಕಾರಿ ಕರ್ನಾಟಕ ಪಬ್ಲಿಕ್ ಶಾಲೆ ಉಪಾಧ್ಯಕ್ಷ ಎಂ.ಕೆ. ಸಿದ್ದರಾಜು ಚಾಲನೆ ನೀಡಿದರು. ಸಿಆರ್‌ಪಿ ಮಹದೇವಸ್ವಾಮಿ, ಶಿಕ್ಷಕರಾದ ಕೇಶವ್, ತಳವಾರ್, ಶಿಕ್ಷಣ ಇಲಾಖೆ ಸಿಬ್ಬಂದಿ ವರ್ಗ ಹಾಜರಿದ್ದರು.



ಮೈಸೂರು ರೇಸುಗಳು–2022

12ನೇ ದಿನ, ಗುರುವಾರ 6–10–2022

ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 1.30 ಗಂಟೆಗೆ)

I. ಚಿರಾಪುಂಜಿ ಪ್ಲೇಟ್–1400 ಮೀ. ರೇಟೆಡ್ 20 ರಿಂದ 45. ಮ.1.30ಕ್ಕೆ
1. ದಿ ರೆಸ್‌ಪಾನ್ಸ್ 2. ಕ್ಯಾಪಿಟಲ್ ಗೇನ್ 3. ಬ್ರಹ್ಮಾಸ್ತ್ರಂ

II. ಒನ್ ಲೈಫ್ ಟು ಲೌವ್ ಪ್ಲೇಟ್–1200 ಮೀ. ರೇಟೆಡ್ 40 ರಿಂದ 65. ಮ.2.00ಕ್ಕೆ
1. ಅಮಾಜೋನಿಯಾ 2. ವೆಂಚಂಗ್ 3. ದಿ ಸ್ಟ್ರೆಂಥ್

III. ಅರಸ್ ಕಾರ್ ಟ್ರೋಫಿ ಡಿ2–1400 ಮೀ. 3 ವರ್ಷ (ಟರ್ಮ್ಸ್). ಮ.2.30ಕ್ಕೆ
1 ಸ್ಟಾಮ್ ಪೋರ್ಡ್ ಬ್ರಿಡ್ಜ್ 2 ಬ್ರೂಸ್ ಆಲ್‌ಮೈಟಿ 3. ಓಡಿನ್

IV. W.T. ಕ್ರೇಗ್ ಜೋನ್ಸ್ ಮೆಮೋರಿಯಲ್ ಟ್ರೋಫಿ–1600 ಮೀ. ರೇಟೆಡ್ 20 ರಿಂದ 45. (No Whip) ಮ.3.00ಕ್ಕೆ
1. ಏಂಜಲ್ ಬ್ಲಿಸ್ 2. ಟೈಕೂನ್‌ನಿಸ್ಟ್ 3. ಫಾರೆಸ್ಟ್ ವ್ಯೂ

V. ಅರಸ್ ಕಾರ್ ಟ್ರೋಫಿ ಡಿ1–1400 ಮೀ. 3 ವರ್ಷ (ಟರ್ಮ್ಸ್). ಮ.3.30ಕ್ಕೆ
1. ಶಿರ್‌ಬ್ಲಿಸ್ 2. ಎರಿಡ್ಯಾನಿ 3. ಸರ್‌ದಾರ್


VI. ಮೈಸೂರ್ ದಸರಾ ಸ್ಪ್ರಿಂಟ್ ಚಾಂಪಿಯನ್‌ಶಿಪ್–1200 ಮೀ. 3 ವರ್ಷ (ಟರ್ಮ್ಸ್). ಸಂ.4.00ಕ್ಕೆ
1. ಆಸ್ಕೋವಾನ್ 2. ಸ್ಟಾರ್ ಗ್ಲೋರಿ

VII. ಫ್ಲೀಟ್ ಇಂಡಿಯನ್ ಪ್ಲೇಟ್–2000 ಮೀ. ರೇಟೆಡ್ 60 ರಿಂದ 85. ಸಂ.4.30ಕ್ಕೆ
1 ಕೆನ್‌ಸಿಂಗ್ ಟನ್ 2 ಸಿಲ್ವರಿಯಸ್

VIII. ಆಟಮನ್ ಬ್ಲೂ ಪ್ಲೇಟ್–1400 ಮೀ. ರೇಟೆಡ್ 40 ರಿಂದ 65. ಸಂ.5.00ಕ್ಕೆ
1 ಬ್ರಾಕ್ಸ್‌ಟಾನ್ 2. ಜಾನಿಬ್ರಾವೋ 3. ಸರ್‌ಕ್ಯಾಲಿಕ್ಯೂಲಸ್


ದಿನದ ಅತ್ಯುತ್ತಮ	: ಶಿರ್ ಬ್ಲಿಸ್
ಡಬ್ಬಲ್	: ಏಂಜಲ್ ಬ್ಲಿಸ್, ಆಸ್ಕೋವಾನ್
ಜಾಕ್‌ಪಾಟ್	: 4, 5, 6, 7 ಮತ್ತು 8
I ಟ್ರಿಬಲ್	: 1, 2 ಮತ್ತು 3
II ಟ್ರಿಬಲ್	: 3, 4 ಮತ್ತು 5
ಎಕ್ಸ್‌ಆಕ್ಟ್	: 7 ಮತ್ತು 8

ಟಿಪ್ ಸ್ಟರ್ ಪಿಜೆಸಿ



ಕಂಪಲಾಪುರ ಸರ್ಕಾರಿ ಪ್ರೌಢಶಾಲೆಯಲ್ಲಿ ಮಹಾತ್ಮ ಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿ ಆಚರಿಸಲಾಯಿತು. ಎಸ್‌ಡಿಎಂಸಿ ಅಧ್ಯಕ್ಷ ಸದಾಶಿವ, ಮುಖ್ಯ ಶಿಕ್ಷಕ ಮಹದೇವಯ್ಯ, ಶಿಕ್ಷಕರಾದ ಯಶ್ವಂತ್, ಶಿವರಾಜ್, ಶಾರದಮ್ಮ, ಭಾಗ್ಯ, ಪೂರ್ಣಿಮಾ, ಲಕ್ಷ್ಮಿ, ಗೀತಾ, ಸುಜಾತ, ಚಂದ್ರು ಹಾಜರಿದ್ದರು.

ಏನ್! ಚೆಂದವ್ರೋ ಆನೆ ಅಲಂಕಾರ...



ಮೈಸೂರು, ಅ.5(ಎಂಟಿವೈ)- ನಾಡಹಬ್ಬ ದಸರಾ ಜಂಬೂಸವಾರಿ ಮೆರವಣಿಗೆಯಲ್ಲಿ ಹೆಜ್ಜೆ ಹಾಕಿದ ಗಜಪಡೆಯ ಅಲಂಕಾರ ನೋಡುಗರ ಕಣ್ಮನ ಸೆಳೆಯಿತು. ವಧು-ವರರಿಗೆ ಮೇಕಪ್ ಮಾಡಿದಂತೆ ಅಂದ ಹೆಚ್ಚಿಸಲಾಗಿತ್ತು.

ದಸರಾ ಗಜಪಡೆಗೆ ಬಣ್ಣ ಬಳಿಯುವ ಶಿಕ್ಷಕ ನಾಗಲಿಂಗಪ್ಪ ಬಡಿಗೇರ ನೇತೃತ್ವದ ತಂಡದಲ್ಲಿನ ಏಳು ಮಂದಿ ಕಲಾವಿದರು ದಸರಾ ಗಜಪಡೆಗೆ ಚಿತ್ರಗಳ ಅಲಂಕಾರ ಮಾಡಿ ಮೆರುಗು ನೀಡಿದರು. 12 ಗಂಟೆಗಳ ಅವಧಿಯಲ್ಲಿ ಆನೆಗಳ ಮೇಲೆ ಚಿತ್ತಾರ ಮೂಡಿಸಿ ಆಕರ್ಷಿಸುವಂತೆ ಮಾಡಿದರು.

ಈ ಕುರಿತು ಶಿಕ್ಷಕ ನಾಗಲಿಂಗಪ್ಪ ಬಡಿಗೇರ ಮಾತನಾಡಿ, ಅರಮನೆ ಆವರಣದಲ್ಲಿ ಬೀಡುಬಿಟ್ಟಿರುವ ಗಜಪಡೆಯ ಮೇಲೆ ಬಣ್ಣದ ಚಿತ್ತಾರ ಬಿಡಿಸುವ ಕಾರ್ಯಗೆ ಬರೋಬ್ಬರಿ 12 ತಾಸು ಹಿಡಿಯಿತು. ಮಂಗಳವಾರ ರಾತ್ರಿ 10.30ಕ್ಕೆ ಆರಂಭವಾದ ಈ ಕಲಾತ್ಮಕ ಕೆಲಸ ಮೆರವಣಿಗೆಯ ದಿನದ ಬುಧವಾರ ಬೆಳಗ್ಗೆ 11ರ ಹೊತ್ತಿಗೆ ಪೂರ್ಣಗೊಂಡಿತು. ಚಿತ್ರ ಬಿಡಿಸುವಾಗ ಆನೆಗಳು ಸದಾ ಕಿವಿ ಬಡಿಯುತ್ತ ಸೊಂಡಿಲು ಮತ್ತು ಬಾಲ ಅಲ್ಲಾಡಿಸುತ್ತಲೇ ಇದ್ದವು. ಚಿತ್ರಕಾರರು ಇದನ್ನೆಲ್ಲ ಸಂಭಾಳಿಸುತ್ತ ಲಘು ಬಗೆಯಿಂದ, ಸಾಕಷ್ಟು ತಾಳ್ಮೆಯಿಂದ ಚಿತ್ರ ಬಿಡಿಸಿದ್ದೇವೆ ಎಂದರು. ಅಂಬಾರಿ ಹೊರುವ ಅಭಿಮನ್ಯು ಸೇರಿದಂತೆ ಎಲ್ಲ ಆನೆಗಳ ಉಗುರಿಗೆ ಸ್ವರ್ಣ ಬಣ್ಣ ಹಚ್ಚಲಾಗಿತ್ತು. ಯುವತಿಯರಂತೆ ಆನೆಗಳಿಗೂ ನೈಲ್ ಪಾಲಿಷ್ ಮಾಡಲಾಯಿತು. ಸೊಂಡಿಲ ಮೇಲಿರುವ ಬಿಳಿ ಮಚ್ಚೆಗಳಿಗೆ ಕಂದುಬಣ್ಣದ ಲೇಪನ ಮಾಡಲಾಗಿತ್ತು. ಅಂತಿಮವಾಗಿ ಆನೆಗಳ ಮೇಲೆ ನಾಮ ಮತ್ತು ಗಾದಿ ಹಾಕಿ, ರೇಷ್ಮೆ ವಸ್ತ್ರ ಹೊದಿಸಲಾಯಿತು. ದಸರಾ ಆನೆಗಳ ಮೇಲೆ ಚಿತ್ರ ಬರೆಯುವುದಕ್ಕೆ ಬಳಸುವ ಬಣ್ಣಗಳಿಂದ ಆನೆ ಚರ್ಮಕ್ಕೆ ಯಾವುದೇ ಹಾನಿಕರ ಪರಿಣಾಮ ಉಂಟಾಗುವುದಿಲ್ಲ. ಸಾಮಾನ್ಯವಾಗಿ ಇವೆಲ್ಲವೂ ನೈಸರ್ಗಿಕ ಬಣ್ಣಗಳಾಗಿವೆ ಎಂದು ಹೇಳಿದರು.

ಚಾಮುಂಡಿಬೆಟ್ಟದಿಂದ ಮೆರವಣಿಗೆಯಲ್ಲಿ ಬಂದ ಚಾಮುಂಡೇಶ್ವರಿ ಉತ್ಸವ ಮೂರ್ತಿ

ಮೈಸೂರು, ಅ.5(ಎಂಟಿವೈ)- ಜಂಬೂಸವಾರಿ ಮೆರವಣಿಗೆಯಲ್ಲಿ ಚಿನ್ನದ ಅಂಬಾರಿಯಲ್ಲಿ ಪ್ರತಿಷ್ಠಾಪಿಸುವ ನಾಡಿನ ಅಧಿದೇವತೆ ಶ್ರೀ ಚಾಮುಂಡೇಶ್ವರಿ ಉತ್ಸವಮೂರ್ತಿಯನ್ನು ಚಾಮುಂಡಿಬೆಟ್ಟದಿಂದ ಮೈಸೂರು ಅರಮನೆಗೆ ಮೆರವಣಿಗೆಯಲ್ಲಿ ತರಲಾಯಿತು.

ನವರಾತ್ರಿ ಹಿನ್ನೆಲೆಯಲ್ಲಿ ಮೈಸೂರು ಅರಮನೆಯಿಂದ ಚಾಮುಂಡೇಶ್ವರಿ ಉತ್ಸವ ಮೂರ್ತಿಯನ್ನು ಚಾಮುಂಡಿಬೆಟ್ಟಕ್ಕೆ ಕೊಂಡೊಯ್ದು ನವರಾತ್ರಿ ವೇಳೆ ವಿವಿಧ ಪೂಜೆ ಸಲ್ಲಿಸಲಾಗುತ್ತದೆ.

ಕೋವಿಡ್ ಹಿನ್ನೆಲೆಯಲ್ಲಿ ಕಳೆದ ಎರಡು ವರ್ಷ ದಸರಾ ಮಹೋತ್ಸವ ಸಾಂಪ್ರದಾಯಿಕ ಆಚರಣೆಗಷ್ಟೇ ಸೀಮಿತವಾಗಿದ್ದರಿಂದ ಕಳೆದ ವರ್ಷ, ಚಾಮುಂಡಿಬೆಟ್ಟದಿಂದ ಉತ್ಸವ ಮೂರ್ತಿಯನ್ನು ಮೆರವಣಿಗೆ ಮೂಲಕ ಅರಮನೆಗೆ ತರುವ ಸಂಪ್ರದಾಯ ಆರಂಭಿಸಲಾಗಿತ್ತು.



ಅದರಂತೆ ಈ ವರ್ಷವೂ ಮೆರವಣಿಗೆ ಮೂಲಕ ಉತ್ಸವ ಮೂರ್ತಿಯನ್ನು ಅರಮನೆಗೆ ತರಲಾಯಿತು.

ಚಾಮುಂಡಿ ಬೆಟ್ಟದಲ್ಲಿ ಬುಧ ವಾರ ಬೆಳಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉತ್ಸವ ಮೂರ್ತಿಗೆ ಪೂಜೆ ಸಲ್ಲಿಸುವ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಶಾಸಕ ಎಸ್.ಎ.ರಾಮದಾಸ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮಂಗಳವಾದ್ಯ, ನಾದಸ್ವರ ತಂಡದೊಂದಿಗೆ ಉತ್ಸವ ಮೂರ್ತಿಯನ್ನು ತಾವರೆಕಟ್ಟೆ, ಕುರುಬಾರಹಳ್ಳಿ ವೃತ್ತ, ಇಟ್ಟಿಗೆಗೂಡಿನ ಮೂಲಕ ಮೆರವಣಿಗೆ ಮೂಲಕ ಅರಮನೆಗೆ ತರಲಾಯಿತು.

ಮಾರ್ಗ ಮಧ್ಯದಲ್ಲಿ ಭಕ್ತರು. ಚಾಮುಂಡೇಶ್ವರಿಯ ಉತ್ಸವ ಮೂರ್ತಿಯನ್ನು ಕಣ್ತುಂಬಿ ಕೊಳ್ಳಲು ರಸ್ತೆಯ ಎರಡೂ ಬದಿ ನೆರೆದಿದ್ದರು. ಇಟ್ಟಿಗೆಗೂಡಿನ ದೇವಾಲಯ ದಲ್ಲಿ ಪೂಜೆ ಸಲ್ಲಿಸಲಾಯಿತು. ಇದೇ ವೇಳೆ ಭಕ್ತರಿಗೆ ಪ್ರಸಾದ ವಿನಿಯೋಗಿಸಲಾಯಿತು

ಕೆ.ಆರ್.ವೃತ್ತ ಬಂದ್: ಮಾರ್ಗ ಬದಲಿಸಿದ ಆಂಬುಲೆನ್ಸ್‌ಗಳು



ಮೈಸೂರು, ಅ.5(ಎಸ್‌ಪಿಎನ್)- ಜಂಬೂಸವಾರಿ ಮೆರವಣಿಗೆ ಪ್ರಯುಕ್ತ ಕೆ.ಆರ್.ವೃತ್ತದಲ್ಲಿ 12 ಗಂಟೆಗೆ ಬ್ಯಾರಿಕೇಡ್ ಹಾಕಿ ಈ ಮಾರ್ಗದ ವಾಹನ ಸಂಚಾರಕ್ಕೆ ಸಂಪೂರ್ಣ ಕಡಿವಾಣ ಹಾಕಲಾಗಿತ್ತು. ಈ ವೇಳೆ ಕೆ.ಆರ್.ಆಸ್ಪತ್ರೆಗೆ ತುರ್ತು ಚಿಕಿತ್ಸೆಗಾಗಿ ಆಗಮಿಸಿದ್ದ 4 ಆಂಬುಲೆನ್ಸ್ ತೆರಳಲು ಸಾಧ್ಯವಾಗದ ಹಿನ್ನೆಲೆಯಲ್ಲಿ ವಾಪಸ್ ತೆರಳಿದ ಘಟನೆ ಬುಧವಾರ ಜರುಗಿದೆ.


ಸಯ್ಯಾಜಿರಾವ್ ರಸ್ತೆ ಮಾರ್ಗವಾಗಿ ಕೆ.ಆರ್.ಆಸ್ಪತ್ರೆಗೆ ತುರ್ತು ಚಿಕಿತ್ಸೆಗಾಗಿ ರೋಗಿಯೊಬ್ಬರನ್ನು ಕರೆಕೊಂಡು ಆಂಬುಲೆನ್ಸ್ ವಾಹನ 12.18 ನಿಮಿಷಕ್ಕೆ ಕೆ.ಆರ್.ವೃತ್ತಕ್ಕೆ ಆಗಮಿಸಿತು. ಆಗತಾನೆ ಕೆ.ಆರ್.ವೃತ್ತ ಸಂಪರ್ಕಿಸುವ ಎಲ್ಲಾ ಮಾರ್ಗಗಳನ್ನು ಬ್ಯಾರಿಕೇಡ್ ಅಳವಡಿಸಿ ಬಂದ್ ಮಾಡಿದ್ದ ಹಿನ್ನೆಲೆಯಲ್ಲಿ ಈ ವಾಹನ ತೆರಳಲು ದಾರಿ ಮಾಡಿಕೊಡಲು ಅಲ್ಲಿದ್ದ ಪೊಲೀಸರು ಅಸಹಾಯಕರಾದರು. ನಂತರ ಆಂಬುಲೆನ್ಸ್ ಚಾಲಕ, ಆಂಬುಲೆನ್ಸ್ ತಿರುಗಿಸಿಕೊಂಡು ಬೇರೆ ದಾರಿಯಲ್ಲಿ ಆಸ್ಪತ್ರೆಗೆ ತೆರಳಿದರು.

ಅದೇ ರೀತಿ 12.42 ನಿಮಿಷ, 12.55 ನಿಮಿಷ ಹಾಗೂ 1.15 ನಿಮಿಷಕ್ಕೆ ಬಂದ ಅಂಬುಲೆನ್ಸ್ ವಾಹನ ಬಂದಾಗಲೂ ಈ ಘಟನೆ ಮರುಕಳಿಸಿತ್ತು. ಜಂಬೂ ಸವಾರಿ ಸಂದರ್ಭದಲ್ಲಾದರೂ ಆಂಬುಲೆನ್ಸ್ ವಾಹನ ಚಾಲಕರಿಗೆ ಜಿಲ್ಲಾಡಳಿತ ಮೊದಲೆ ಸಭೆ ಕರೆದು ಚರ್ಚಿಸಿ, ಬದಲಿ ಮಾರ್ಗದ ವ್ಯವಸ್ಥೆ ಮಾಡಬೇಕಿತ್ತು ಎಂದು ಅಲ್ಲಿ ನೆರದಿದ್ದ ಸಾರ್ವಜನಿಕರು ಮಾತನಾಡಿಕೊಳ್ಳುತ್ತಿದ್ದರು.

ಜಂಬೂಸವಾರಿ: ಉರಗ ಸಂರಕ್ಷಕ ನಿಯೋಜನೆ

ಮೈಸೂರು, ಅ.5(ಜಿಎ)- ದಸರಾ ಜಂಬೂಸವಾರಿಯಲ್ಲಿ ಸುರಕ್ಷತೆಗೆ ಆದ್ಯತೆ ನೀಡಿದ್ದ ಪೊಲೀಸ್ ಇಲಾಖೆ ಹಾವುಗಳ ಸಂರಕ್ಷಣೆಗಾಗಿ ಉರಗ ತಜ್ಞರೊಬ್ಬರನ್ನು ನೇಮಿಸಿದ್ದು ವಿಶೇಷವಾಗಿತು.

ಅರಮನೆ ಆವರಣದಲ್ಲಿ ದಸರಾ ಜಂಬೂಸವಾರಿ ವೇಳೆ ಯಾವುದೇ ಸಮಸ್ಯೆ ಆಗಬಾರದೆಂದು ಪೊಲೀಸ್ ಇಲಾಖೆ ಎಲ್ಲಾ ರೀತಿಯ ಕ್ರಮಗಳನ್ನು ತೆಗೆದುಕೊಂಡಿದ್ದು, ಅದರಂತೆ ಹಾವುಗಳು ಕಂಡು ಬಂದಲ್ಲಿ ಅದನ್ನು ಸಂರಕ್ಷಿಸಲು ಉರಗ ತಜ್ಞ ಕುಂಬಾರಕೊಪ್ಪಲಿನ ಸ್ನೇಕ್ ಪ್ರಕಾಶ್‌ರನ್ನು ನಿಯೋಜಿಸಲಾಗಿತ್ತು.



ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಪ್ರಕಾಶ್, ಪ್ರತಿವರ್ಷ ಪೊಲೀಸ್ ಇಲಾಖೆಯು ದಸರಾ ಜಂಬೂಸವಾರಿ ದಿನದಂದು ಹಾವಿನ ರಕ್ಷಣೆ ಮಾಡಲೆಂದು ನನ್ನನ್ನು ನಿಯೋಜಿಸುತ್ತಾರೆ. ಇಂದು ಬೆಳಗ್ಗೆ ಅರಮನೆ ಮುಂಭಾಗವಿರುವ ವಿಷ್ಣುವರ್ಧನ್ ಉದ್ಯಾನವನದಲ್ಲಿ ಒಂದು ಹಾವನ್ನು ಸಂರಕ್ಷಿಸಿದೆ. ಈ ಹಿನ್ನೆಲೆಯಲ್ಲಿ ಹಾವುಗಳು ಕಂಡ ತಕ್ಷಣ ಪೊಲೀಸರು ನನ್ನ ನಂಬರ್‌ಗೆ ಕರೆ ಮಾಡಿ ಮಾಹಿತಿ ನೀಡುತ್ತಾರೆ. ಅಲ್ಲಿಗೆ ತೆರಳಿ ಅವುಗಳ ಸಂರಕ್ಷಣೆ ಮಾಡುತ್ತೇನೆ. ಅದಕ್ಕಾಗಿ ಎಲ್ಲಾ ಸಲಕರಣೆಗಳನ್ನು ಇಟ್ಟುಕೊಂಡಿದ್ದೇನೆ ಎಂದರು.

ಅಧಿಕಾರಿಗಳು, ಅರಮನೆ ಸಮನ್ವಯ ಕೊರತೆಯಿಂದ ಪುಷ್ಪಾರ್ಚನೆ ಮುಹೂರ್ತ ಮಿಸ್

ಮೈಸೂರು, ಅ.5(ಎಂಟಿವೈ)- ಸಮನ್ವಯತೆಯ ಕೊರತೆಯೇ ಅಂಬಾರಿ ಪುಷ್ಪಾರ್ಚನೆ ಮುಹೂರ್ತ ಮೀರಲು ಕಾರಣ ಎಂದು ತಿಳಿದು ಬಂದಿದೆ.

ಅರಮನೆಯ ಪಂಚಾಂಗದಲ್ಲಿ ಉಲ್ಲೇಖವಾದ ಶುಭ ಮುಹೂರ್ತದಲ್ಲೇ ಚಿನ್ನದ ಅಂಬಾರಿಗೆ ಪುಷ್ಪಾರ್ಚನೆ ಮಾಡುವ ಸಂಪ್ರದಾಯವಿದೆ. ಆದರೆ, ಇಂದು ನಿಗದಿಯಾಗಿದ್ದ ಮುಹೂರ್ತಕ್ಕಿಂತ 19 ನಿಮಿಷ ತಡವಾಗಿ ಪುಷ್ಪಾರ್ಚನೆ ಮಾಡಿರುವುದು ಜನರಲ್ಲಿ ಬೇಸರ ತರಿಸಿದೆ. ಜಂಬೂಸವಾರಿಗೆ ಅರಮನೆ ವತಿಯಿಂದ ಅಂಬಾರಿಯನ್ನು ಸಕಾಲಕ್ಕೆ ಪಡೆಯದೇ ಇರುವುದೇ ಮುಹೂರ್ತ ಮಿಸ್ ಆಗಲು ಕಾರಣವಂತೆ.

ರಾಜವಂಶಸ್ಥರ ಸುಪರ್ದಿನಲ್ಲಿರುವ ಚಿನ್ನದ ಅಂಬಾರಿಯನ್ನು ಜಂಬೂಸವಾರಿ ದಿನ ಜಿಲ್ಲಾಡಳಿತ ಪಡೆದುಕೊಳ್ಳಲಿದೆ. ಆದರೆ ಜಿಲ್ಲಾಡಳಿತ ಮತ್ತು ರಾಜವಂಶಸ್ಥರ ನಡುವೆ ಸಂವಹನದ ಕೊರತೆಯಿಂದ ಈ ಬಾರಿ ಅಂಬಾರಿಯನ್ನು ಸಕಾಲಕ್ಕೆ ಪಡೆಯಲು ಸಾಧ್ಯವಾಗಿಲ್ಲ. ಸಂಪ್ರದಾಯದಂತೆ ಅಂಬಾರಿ ನೀಡುವಂತೆ ರಾಜವಂಶಸ್ಥರಲ್ಲಿ ಅಧಿಕಾರಿಗಳು ಮನವಿ ಮಾಡಬೇಕು. ಆದರೆ, ಜಂಬೂಸವಾರಿಯ ಸಿದ್ಧತಾ ಕಾರ್ಯದಲ್ಲಿ ಮಗ್ನರಾಗಿದ್ದ ಅಧಿಕಾರಿಗಳು ಅಂಬಾರಿಗೆ ಕೋರಿಕೆ ಸಲ್ಲಿಸುವುದನ್ನೇ ಮರೆತಿದ್ದರು ಎನ್ನಲಾಗಿದೆ. ಅಂಬಾರಿ ಕಟ್ಟಲು ಆನೆಗಳ ಕರೆತಂದರೂ ಅಂಬಾರಿ ಮಾತ್ರ ರಾಜವಂಶಸ್ಥರ ಸುಪರ್ದಿಯಲ್ಲೇ ಇತ್ತು. ಕನಿಷ್ಟ ಎಷ್ಟು ಗಂಟೆಗೆ ಅಂಬಾರಿ ನೀಡಬೇಕು ಎಂಬ ಮಾಹಿತಿಯನ್ನು ರಾಜವಂಶಸ್ಥರಿಗೆ ನೀಡಿರಲಿಲ್ಲ. ಇದು ಗೊಂದಲಕ್ಕೆ ಕಾರಣವಾಯಿತು. ಅಂತಿಮವಾಗಿ ಜನಪ್ರತಿನಿಧಿಯೊಬ್ಬರ ಮಧ್ಯಸ್ಥಿಕೆಯಲ್ಲಿ ಸಮಸ್ಯೆ ನಿವಾರಣೆ ಆಗಿದೆ. ಬಳಿಕ ಹೂವಿನ ಅಲಂಕಾರ ಮಾಡುವುದಕ್ಕೆ ಟ್ರ್ಯಾಲಿ ಮೂಲಕ ಅಂಬಾರಿಯನ್ನು ತರಲಾಯಿತು. ಸಂಜೆ. 4.30ಕ್ಕೆ ಅರಣ್ಯ ಇಲಾಖೆಗೆ ಅಂಬಾರಿಯನ್ನು ಹಸ್ತಾಂತರಿಸಲಾಯಿತು. 8 ಮಂದಿ ಸಿಬ್ಬಂದಿ 45 ನಿಮಿಷದಲ್ಲೇ ಅಂಬಾರಿ ಕಟ್ಟಿದ್ದಾರೆ. ಅಂಬಾರಿಯನ್ನು ಸರಿಪಡಿಸುವ ಹಂತದಲ್ಲಿ ನಿಗದಿತ ಮುಹೂರ್ತ ಮೀರಿದೆ.



ಅಭಿಮನ್ಯುವಿನ ಮೇಲೆ ಚಿನ್ನದ ಅಂಬಾರಿ ಕಟ್ಟುತ್ತಿರುವುದು.

ವಾಲಿಕೊಂಡ ಅಂಬಾರಿ: ತರಾತುರಿಯಲ್ಲಿ ಅಂಬಾರಿ ಕಟ್ಟಿದ್ದರಿಂದ ಮೆರವಣಿಗೆ ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಾಲಯದ ಬಳಿ ಬರುತ್ತಿದ್ದಂತೆ ಅಂಬಾರಿ ಎಡಕ್ಕೆ ವಾಲಲಾರಂಭಿಸಿತು. ಸಯ್ಯಾಜಿರಾವ್ ರಸ್ತೆಯಲ್ಲಿ ಕೆ.ಆರ್.ಆಸ್ಪತ್ರೆ ಬಳಿ ಬರುತ್ತಿದ್ದಂತೆಯೇ ಅಂಬಾರಿ ಮತ್ತಷ್ಟು ವಾಲಿತು. ಇದನ್ನು ಗಮನಿಸಿದ ಮಾವುತ ವಸಂತ್ ಅಭಿಮನ್ಯುಗೆ ಸನ್ನೆ ಮಾಡಿ ಸ್ವಲ್ಪ ಸರಿಪಡಿಸಿದ್ದ. ಆದರೆ, ಬನ್ನಿಮಂಟಪದವರೆಗೂ ವಾಲಿದ ಸ್ಥಿತಿಯಲ್ಲೇ ಇತ್ತು. ಅಂಬಾರಿ ಕಟ್ಟುವ ವೇಳೆ ಪ್ರತಿ ವರ್ಷದಂತೆ ಈ ಬಾರಿಯೂ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅವರು ತಮ್ಮ ನಿವಾಸದ ಕಿಟಿಕಿಯಲ್ಲಿ ವೀಕ್ಷಿಸಿ, ಕೆಲವು ಸಲಹೆ-ಸೂಚನೆ ನೀಡಿದರು. ಮಾವುತ, ಕಾವಾಡಿಗಳಾದ ಅಕ್ರಮ್, ರಾಜು, ಮಲ್ಲಿಕಾರ್ಜುನ, ನಂಜುಂಡಸ್ವಾಮಿ, ಶರಿ, ಗಣೇಶ, ಹರೀಶ್ ಇನ್ನಿತರರು ಅಂಬಾರಿ ಕಟ್ಟುವ ಕಾಯಕದಲ್ಲಿ ತೊಡಗಿದರು. ಅಭಿಮನ್ಯುವಿನ ರಕ್ಷಣೆಗೆ ಸಿಸಿಎಫ್ ಡಾ.ಮಾಲತಿ ಪ್ರಿಯಾ, ಡಿಸಿಎಫ್‌ಗಳಾದ ಡಾ.ವಿ.ಕರಿಕಾಳನ್, ಕೆ.ಕಮಲ ಕರಿಕಾಳನ್, ಆರ್‌ಎಫ್‌ಓ ಸಂತೋಷ್ ಹೂಗಾರ್ ಸೇರಿದಂತೆ ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಸರ್ಪಗಾವಲು ಹಾಕಲಾಗಿತ್ತು.

ಅಭಿಮನ್ಯುವಿಗೆ ವಿಶೇಷ ಅಲಂಕಾರ: ಅಂಬಾರಿ ಆನೆ ಅಭಿಮನ್ಯುವಿಗೆ ವಿಶೇಷ ಅಲಂಕಾರ ಮಾಡಲಾಗಿತ್ತು. ದಂತಕ್ಕೆ ಸಿಂಗೋಟಿ ಬಳೆ, ಹಣೆಪಟ್ಟಿ, ಕಾಲಿಗೆ ಡುಬ್ಬ, ಕಿವಿಗೆ ಚಾಮರ ತೊಡಿಸಿ, ಉಗುರಿಗೆ ಬಣ್ಣ ಬಳಿದು ಅಲಂಕರಿಸಲಾಗಿತ್ತು. ಅಲಂಕಾರ ಮಾಡಿ, ಅಂಬಾರಿ ಕಟ್ಟಿದ ನಂತರ ನಿಂಬೆ ಹಣ್ಣಿನಿಂದ ದೃಷ್ಟಿ ತೆಗೆಸಿ, ಆನೆಯ ಕಾಲಿನಿಂದ ನಿಂಬೆಹಣ್ಣನ್ನು ತುಳಿಸಲಾಯಿತು.


ಮೈಸೂರು ಅರಮನೆ ಸುತ್ತಮುತ್ತ ಕಮಾಂಡ್ ಸೆಂಟರ್ ವಾಹನದ ಕಣ್ಗಾವಲು

ಮೈಸೂರು, ಅ.5(ಜಿಎ)- ಕಮಾಂಡ್ ಸೆಂಟರ್ ವಾಹನವು(ಪೊಲೀಸ್ ಕಂಟ್ರೋಲ್ ರೂಂನ ಎಲ್ಲಾ ವೈಶಿಷ್ಟ್ಯಗಳನ್ನು ಹೊಂದಿರುವ ಹೈಟೆಕ್ ವಾಹನ) ದಸರಾ ಮಹೋತ್ಸವದ ಸಂಪೂರ್ಣ ಮೆರವಣಿಗೆ ಸೇರಿದಂತೆ ಅರಮನೆ ಸುತ್ತಮುತ್ತಲಿನ ಪ್ರದೇಶದ ಚಲವಲನಗಳ ಮೇಲೆ ಕಣ್ಗಾವಲಿತ್ತು.

ವಿಶ್ವವಿಖ್ಯಾತ ಜಂಬೂಸವಾರಿಗೆ ದೇಶ-ವಿದೇಶಗಳಿಂದ ಲಕ್ಷಾಂತರ ಜನರು ಈ ಅದ್ಭುತ ದೃಶ್ಯವನ್ನು ಕಣ್ತುಂಬಿಕೊಳ್ಳಲು ಆಗಮಿಸುತ್ತಾರೆ. ಈ ವೇಳೆ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಪೊಲೀಸ್ ಇಲಾಖೆ ಎಲ್ಲಾ ಕಡೆಗಳಲ್ಲಿಯೂ ಹದ್ದಿನ ಕಣ್ಣಿಟ್ಟಿರುತ್ತದೆ. ಅದರಂತೆ ಅರಮನೆ ಮುಂಭಾಗ ಕಮಾಂಡ್ ಸೆಂಟರ್ ವಾಹನದ ಮೂಲಕ ವಿಶೇಷ ನಿಗಾವಹಿಸಲಾತ್ತು. ಈ ಬಾರಿ ದಸರಾ ಮಹೋತ್ಸವದಲ್ಲಿ ಅರಮನೆಯ ಬಲರಾಮ ದ್ವಾರದ ಮುಂಭಾಗ ನಿಲುಗಡೆಯಾಗಿದ್ದ ಕಮಾಂಡ್ ಸೆಂಟರ್ ವಾಹನ ಅತ್ಯಾಧುನಿಕ 19 ಕ್ಯಾಮರಾಗಳ ಮೂಲಕ ಕಣ್ಗಾವಲಿತ್ತು. ಸಂಪೂರ್ಣ ಮೆರವಣಿಗೆಯ ಮೇಲೆ ನಿಗಾವಹಿಸಲಾಗಿತ್ತು. ಈ ವಾಹನದಲ್ಲಿ ಸುತ್ತಲೂ ನಾಲ್ಕು, ನಾಲ್ಕು ಜಾಕೆಟ್ ಕ್ಯಾಮರಾಗಳು, ಡ್ರೋನ್ ಕ್ಯಾಮರಾ ಸೇರಿದಂತೆ 19 ಕ್ಯಾಮೆರಾಗಳನ್ನು ಹೊಂದಿದ್ದು, 10 ವೈರ್‌ಲೆಸ್ ಕ್ಯಾಮರಾ, 4 ಬಾಡಿ ಕ್ಯಾಮರಾ 4 ಡೈರಕ್ಷನ್ ಕ್ಯಾಮರಾ ಹಾಗೂ ಮೇಲ್ಭಾಗದಲ್ಲಿ 4 ಸ್ಥಿರ ಕ್ಯಾಮರಾ ಹೊಂದಿದ್ದು, 1 ಕಿ.ಮೀ 360 ಡಿಗ್ರಿ ಚಿತ್ರಗಳು ಮತ್ತು ದೃಶ್ಯಗಳನ್ನು ಸೆರೆಹಿಡಿಯ ಬಲ್ಲ ಒಂದು ಜೂಮ್ ಕ್ಯಾಮರಾವು ಅರಮನೆ ಒಳಭಾಗ-ಹೊರಭಾಗದಲ್ಲಿಯೂ ಸೆರೆಹಿಡಿಯಿತು.



ಜಂಬೂಸವಾರಿ ಕಣ್ತುಂಬಿಕೊಂಡ ಪುಟ್ಟ ಮಕ್ಕಳು



ಮೈಸೂರು, ಅ.5(ಜಿಎ)- ಪುಟ್ಟ ಪುಟ್ಟ ಕಂದಮ್ಮಗಳು ದಸರಾ ಮೆರವಣಿಗೆಯನ್ನು ಕಣ್ತುಂಬಿಕೊಂಡರೆ, ಹಿರಿಯ ನಾಗರಿಕರು ದಸರಾ ಅಂದು-ಇಂದು ಎಂದು ಮೆಲಕು ಹಾಕಿದರು. ಪ್ರತಿ ಬಾರಿಯ ದಸರಾ ಮಹೋತ್ಸವ ಅನೇಕ ವಿಶೇಷತೆಗಳಿಂದ ಕೂಡಿರುತ್ತದೆ. ಅದರಂತೆಯೇ ಈ ಬಾರಿಯೂ ವಿಶೇಷತೆಯ ಕಣ್ಣಿಗೆ ಕಂಡವು. ಅದರಲ್ಲಿ ಪ್ರಮುಖವಾಗಿ ಪುಟ್ಟ ಪುಟ್ಟ ಕಂದಮ್ಮಗಳನ್ನು ಅವರ ತಂದೆ-ತಾಯಂದಿರು ಹಾಲ್ಗಲ್ಲದ ಪುಟಾಣಿಗೆ ದಸರಾ ಮೆರವಣಿಗೆ ತೋರಿಸುತ್ತಿರುವುದು ಒಂದೆಡೆಯಾದರೆ, ಮತ್ತೊಂದೆಡೆ ಹಿರಿಯ ಜೀವಿಗಳು ಈ ಬಾರಿಯ ದಸರಾ ವೀಕ್ಷಿಸಿ ತಾವು ದಸರಾದಲ್ಲಿ ಪಾಲ್ಗೊಂಡ ಗಳಿಗೆಯನ್ನು ಮೆಲುಕು ಹಾಕಿದರು.

ಹಿಂದಿನ ದಸರಾವನ್ನು ಮೆಲುಕು ಹಾಕಿದ ಹಿರಿಯರು



ಚಾಮರಾಜ ಒಡೆಯರ್ ವೃತ್ತದ ಬಳಿ ಸ್ವಚ್ಛತೆಗೆ ಗುತ್ತಿಗೆ ಆಧಾರದ ಮೇಲೆ ನೇಮಕಕೊಂಡಿದ್ದ ಚಂದ್ರಶೇಖರ್ ಎಂಬುವರು ತಮ್ಮ ಏಳು ತಿಂಗಳ ಪುಟಾಣಿ ಜಾನು ಅನ್ನು ಕಂಕುಳಲ್ಲಿ ಎತ್ತುಕೊಂಡು ಜಂಬೂಸವಾರಿಯನ್ನು ತೋರಿಸಿದ್ದರೆ, ಜಾನು ಪುಟ್ಟ ಪುಟ್ಟ ಕಣ್ಗಳಿಂದ ಪಿಳಿ ಪಿಳಿ ನೋಡುತ್ತಿದ್ದಳು. ಈ ವೇಳೆ ವೀರಾಗಾಸೆ ಕಲಾತಂಡದ ಕಲಾವಿದರೊಬ್ಬರು ಈ ಪುಟ್ಟ ಕಂದನ್ನು ನೋಡಿ ಹತ್ತಿರ ಬರುತ್ತಿದಂತೆ ಹೆದರಿ ಜಾನು ಅಪ್ಪನನ್ನು ಅಪ್ಪಿಕೊಂಡಿದ್ದು ಎಲ್ಲರ ಗಮನಸೆಳೆಯಿತು. ಇದೇ ರೀತಿ ಮೆರವಣಿಗೆಯ ಉದ್ದಕ್ಕೂ ಪೋಷಕರು ಪುಟ್ಟ ಪುಟ್ಟ ಕಂದಗಳಿಗೆ ಕಲಾತಂಡಗಳು ಮತ್ತು ಸ್ತಬ್ಧ ಚಿತ್ರಗಳನ್ನು ತೋರಿಸಿದ್ದರು. ಬಂಗಾರದ ಅಂಬಾರಿಯಲ್ಲಿ ತಾಯಿ ಚಾಮುಂಡೇಶ್ವರಿ ಕಾಣುತ್ತಿದ್ದಂತೆ ತಂದೆ-ತಾಯಂದಿರು ದೇವರತ್ತ ತೋರಿಸಿ ನಮಸ್ಕರಿಸಿದರು.

ಇದು ಪುಟ್ಟ ಕಂದಮ್ಮಗಳ ದಸರಾ ವೀಕ್ಷಣೆಯ ವಿಶೇಷವಾದರೆ, ಅನೇಕ ಹಿರಿಯ ನಾಗರಿಕರು ದಸರಾ ನೋಡುತ್ತ ತಾವು ಕಾಲೇಜಿನ ಸಂದರ್ಭದಲ್ಲಿದ್ದಾಗ ದಸರಾ ಮಹೋತ್ಸವದಲ್ಲಿ ಪಾಲ್ಗೊಂಡಿದ ದಿನಗಳನ್ನು ಮೆಲುಕು ಹಾಕಿದ್ದು ವಿಶೇಷವಾಗಿತ್ತು.

ನಾನು ಮೂಲತಃ ದಾವಣಗೆರೆಯ ನಿವಾಸಿಯಾಗಿದ್ದು, ನನ್ನ ವಿದ್ಯಾಭ್ಯಾಸ ಮೈಸೂರಿನ ಬನಮಯ ಕಾಲೇಜಿನಲ್ಲಿ ಮಾಡಲಾಗಿತ್ತು ಆ ಸಂಧರ್ಭದಲ್ಲಿ ದಸರಾ ಮಹೋತ್ಸವದಲ್ಲಿ ನಾನು ಎನ್‌ಸಿಸಿ ಸ್ವಯಂ ಸೇವಕನಾಗಿ ಕಾರ್ಯನಿರ್ವಹಿಸಿದ್ದೆ. ಆ ದಿನಗಳ ನೆನಪು ಇಂದಿಗೂ ಹಚ್ಚ ಹಸಿರಾಗಿದ್ದು, ಪ್ರತಿ ವರ್ಷ ನಾನು ಮತ್ತು ನನ್ನ ಕುಟುಂಬಸ್ಥರು ಜಂಬೂಸವಾರಿ 3 ದಿನಗಳು ಇರುವಂತೆ ಮೈಸೂರಿಗೆ ಆಗಮಿಸಿ ದಸರಾ ಸಂಭ್ರಮವನ್ನು ಸವಿಯುತ್ತೇವೆ ಕಳೆದ 2 ವರ್ಷ ದಸರಾ ಇಲ್ಲದಿದ್ದಾಗ ಬೇಸರವಾಗಿತು ಎಂದು ನಟರಾಜ ಗುಪ್ತ (70) ದಸರಾ ಮಹೋತ್ಸವದಲ್ಲಿ ಪಾಲ್ಗೊಂಡಿದ ಘಳಿಗೆಯನ್ನು 'ಮೈಸೂರು ಮಿತ್ರ'ನೊಂದಿಗೆ ಹಂಚಿಕೊಂಡರು.